
ಜಿಲ್ಲಾ ಮಾಲಿಕೆ



ಚಿತ್ರದುರ್ಗ ಜಿಲ್ಲೆಯ

# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ



## ಚಿತ್ರದುರ್ಗ ಜಿಲ್ಲೆಯ

# ಜನಪದ ಕಲಾವಿದರು

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೦೨

"CHITRADURGA JILLEYA JANAPADA KALAVIDARU"
Written by Dr. Chikkanna Yennekatte,
Professor of Kannada, Govt. Digree College, Sira,
Tumakur Dist.

Published by : B. N. Paraddi, Registrar,
Karnataka Janapada and
Yakshagana Academy;
Kannada Bhavan, J. C. Road,
Bangalore -02

Pages : 14 + 136 = 150

Price : Rs. 60-00

Rights : Author

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – ೫೬೦೦೦೨
ದೂರವಾಣಿ : ೦೮೦–೨೨೨೧೫೫೦೯

ಪರಿಶೀಲನಾ ಸಮಿತಿ :

ಶ್ರೀ ಕೆರೆಮನೆ ಶಂಭು ಹೆಗಡೆ

| | |
|---|---|
| ಶ್ರೀ ಗವೀಶ ಹಿರೇಮಠ | ಡಾ. ಹಂಪನಹಳ್ಳಿ ತಿಮ್ಮೇಗೌಡ |
| ಡಾ. ಚಿಕ್ಕಣ್ಣ ಯಣ್ಣೆಕಟ್ಟೆ | ಡಾ. ಕೆ. ಚಿನ್ನಪ್ಪಗೌಡ |
| ಶ್ರೀ ಅರಾಟೆ ಮಂಜುನಾಥ | ಡಾ. ಬಿ. ಎಸ್. ತಲ್ವಾಡಿ |

ಮುಖಪುಟ ವಿನ್ಯಾಸ, ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [೦೮೩೭೨] ೨೩೮೧೮೧ ಮೊ : ೯೪೪೮೧೮೬೦೬೩, ೯೮೮೦೯೦೪೭೦೭

# ಅಧ್ಯಕ್ಷರ ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸುತ್ತಿರುವ ಕಲಾವಿದರ ಪರಿಚಯ ಪುಸ್ತಕಕ್ಕೆ ಮುನ್ನುಡಿ ರೂಪದಲ್ಲಿ ಕೆಲವು ಮಾತುಗಳನ್ನು ಇಲ್ಲಿ ದಾಖಲಿಸಲು ಅಣಿಯಾಗುತ್ತಿದ್ದೇನೆ.

ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ–ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ. ಕಲಾವಿದರ ಪರ ಈ ಧೋರಣೆಯನ್ನು ಅಕಾಡೆಮಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ಇಟ್ಟಾಗ ಎಲ್ಲರೂ ಉತ್ಸಾಹದಿಂದಲೇ ಬೆಂಬಲಿಸಿದರು. ಅದರ ಫಲವೇ ಈ "ಬೆಳ್ಳಿ ಮಾಲಿಕೆ."

ಯೋಜನೆಯ ಕಾರ್ಯಸ್ವರೂಪವನ್ನು ವ್ಯವಸ್ಥಿತವಾಗಿ ಯೋಜಿಸಿದಾಗ ಜಿಲ್ಲೆಗೊಬ್ಬೊಬ್ಬ ಲೇಖಕರನ್ನು ನಿಯೋಜಿಸಿ, ಅಕಾಡೆಮಿ ಕಾರ್ಯಪ್ರವೃತ್ತವಾಯಿತು. ಆದರೆ ಕೆಲವು ಜಿಲ್ಲೆಗಳ ಕಲಾವಿದರ ಪರಿಚಯ ಕೃತಿಗಳು ಮಾತ್ರ ಬಂದಿದ್ದು, ಅವುಗಳನ್ನು ಪ್ರಕಟಿಸುತ್ತಿದ್ದೇವೆ. ಕಲಾವಿದರ ಪರಿಚಯ ಪುಸ್ತಕಗಳನ್ನು ಹೊರತರುತ್ತಿರುವ ಸಂದರ್ಭದಲ್ಲಿ, ಈ ಮಾಲಿಕೆಗೆ ಅಕಾಡೆಮಿಯು ಪುಟಗಳ ಮಿತಿ ಹಾಕಿಕೊಳ್ಳುವುದರೊಂದಿಗೆ ಹಿರಿಯ ವಯಸ್ಸಿನ ಕಲಾವಿದರನ್ನು ಮಾತ್ರ ದಾಖಲಿಸುವ ಉದ್ದೇಶದಿಂದ ವಯಸ್ಸಿನ ಮಿತಿಯನ್ನೂ ಹಾಕಿಕೊಂಡಿತು. ಜೊತೆಗೆ ಈ ಮಿತಿಯೊಳಗಿನ ಎಲ್ಲಾ ಕಲಾವಿದರನ್ನೂ ಪರಿಚಯಿಸಲು ಸಾಧ್ಯವಾಗಿಲ್ಲ. ಇದರ ಬಗ್ಗೆ ಕ್ಷಮೆ ಇರಲಿ. ಉಳಿದ ಕಲಾವಿದರ ಪರಿಚಯ ಮುಂದೆ ಅಕಾಡೆಮಿಯಿಂದ ಆಗಲಿ ಎಂಬ ನಿರೀಕ್ಷೆ ನನ್ನದು.

ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ನೆರವಾದ ಎಲ್ಲರನ್ನೂ ಇಲ್ಲಿ ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಅಕಾಡೆಮಿಯ ಎಲ್ಲ ಸದಸ್ಯರೂ ಉತ್ಸಾಹದಿಂದ ಪ್ರೋತ್ಸಾಹಿಸಿದ್ದಾರೆ. ಕೆಲವು ಜಿಲ್ಲೆಯ ಕಲಾವಿದರ ಮಾಹಿತಿಯನ್ನು ಲೇಖಕರು ಬರೆದುಕೊಟ್ಟಿರುತ್ತಾರೆ. ಮುದ್ರಣದ ಹೊಣೆಗಾರಿಕೆಯನ್ನು ಶ್ರೀ ಗವೀಶ ಹಿರೇಮಠ ಎಚ್ಚರದಿಂದ ನಿರ್ವಹಿಸಿದ್ದಾರೆ. ಯೋಜನೆ ಪ್ರಸ್ತಾಪದ ಹಂತದಲ್ಲಿದ್ದಾಗ ರಿಜಿಸ್ಟ್ರಾರ್ ಆಗಿದ್ದ ಶ್ರೀ ಎಂ. ಮುನಿರಾಜು ಅವರು, ಕಾರ್ಯರೂಪಕ್ಕೆ ಬರುವಾಗ ರಿಜಿಸ್ಟ್ರಾರ್ ಆಗಿರುವ ಶ್ರೀ ಬಿ. ಎನ್. ಪರಡ್ಡಿ ಅವರೂ, ಕಛೇರಿಯ ಸಿಬ್ಬಂದಿ ವರ್ಗದವರಾದ ಶ್ರೀ ಹೆಚ್. ಪ್ರಕಾಶ್, ಶ್ರೀಮತಿ ಎಂ. ನಾಗರತ್ನ, ಶ್ರೀ ಶಿವಲಿಂಗಯ್ಯ ಇವರುಗಳು ಎಲ್ಲಾ ಹಂತಗಳಲ್ಲಿಯೂ ನೆರವಾಗಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು.

ಅಕಾಡೆಮಿಯ ಎಲ್ಲ ಪ್ರಕಟಣೆಗಳನ್ನು ಆದರದಿಂದ ಬರಮಾಡಿಕೊಂಡಂತೆ ಕಲಾವಿದರ ಪರಿಚಯ ಪುಸ್ತಕಗಳನ್ನು ಓದುಗರು ಬರಮಾಡಿಕೊಳ್ಳುತ್ತಾರೆಂಬ ಭರವಸೆ ನನ್ನದು.

ದಿನಾಂಕ : ೧೬-೧-೨೦೦೮ — ಕೆರೆಮನೆ ಶಂಭು ಹೆಗಡೆ

ಬೆಂಗಳೂರು — ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಬೆಳ್ಳಿಮಾಲಿಕೆಗೆ ಬಂಗಾರದ ತೋರಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ 25 ವರ್ಷ ತುಂಬಿದ್ದರಿಂದ ಬೆಳ್ಳಿಹಬ್ಬ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಅಧ್ಯಕ್ಷರ ಸಂಕಲ್ಪ, ಸದಸ್ಯರ ಹುಮ್ಮಸ್ಸಿನ ಕಾರ್ಯತತ್ಪರತೆ ಬೆಳ್ಳಿಹಬ್ಬಕ್ಕೆ ಹೊಸ ಮೆರುಗು ತಂದಿದೆ. ಹೊರಗಡೆ ಅಕಾಡೆಮಿಯ ಕಾರ್ಯಕಲಾಪಗಳ ಸಾಧನೆ ಬಗ್ಗೆ ಮಾತನಾಡಿದ್ದು ಕೇಳಿದಾಗ ಹೆಮ್ಮೆ ಎನಿಸುತ್ತದೆ.

25 ವರ್ಷಗಳ ಹಿಂದಿನ ಪುಟಗಳನ್ನು ತಿರುಗಿಸಿದಾಗ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿ ಅನೇಕ ಸಮಸ್ಯೆಗಳ ನಡುವೆಯೂ ಸಾಧಿಸಿ, ಅಕಾಡೆಮಿಗೊಂದು ರೂಪ ಕೊಟ್ಟು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ದಿ : ಶ್ರೀ ಹೆಚ್. ಎಲ್. ನಾಗೇಗೌಡ ಅವರ ಸ್ಮರಣೆ ಅಗತ್ಯವಾದುದು. ಮುಂದೆ ದಿ. ಡಾ. ಎಸ್. ಕೆ. ಕರೀಂಖಾನ್, ದಿ : ಡಾ. ಜೀ ಶಂ. ಪರಮಶಿವಯ್ಯ, ಡಾ. ಕಾಳೇಗೌಡ ನಾಗವಾರ, ಡಾ. ಎಚ್. ಜೆ. ಲಕ್ಕಪ್ಪಗೌಡ, ಡಾ. ಹಿ. ಶಿ. ರಾಮಚಂದ್ರೇಗೌಡ ಈ ವಿದ್ವಾಂಸರುಗಳ ಸಾಂದರ್ಭಿಕ ಸಾಧನೆಗಳು, ಪ್ರಕಟಣೆಗಳು, ಅಕಾಡೆಮಿಯನ್ನು ಹೊಸದಿಕ್ಕಿನತ್ತ ಬೆಳೆಸುವಲ್ಲಿ ಪ್ರೇರಕವಾಗಿವೆ. ಇವರೆಲ್ಲರ ಸಹಾಯದಿಂದ ಅಕಾಡೆಮಿ ಇಂದು ಸಶಕ್ತವಾಗಿ ಬೆಳೆದಿದೆಯೆಂದು ಭಾವಿಸುತ್ತೇನೆ ಮತ್ತು ಈ ಎಲ್ಲ ಮಹನೀಯರನ್ನು ಬೆಳ್ಳಿಹಬ್ಬದ ಆಚರಣೆಯ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

25 ವರ್ಷಗಳ ಅಕಾಡೆಮಿಯ ಸಾಧನೆಗಳ ಬಗ್ಗೆ ನಮಗೆ ತೃಪ್ತಿ ಇದೆ. ಇದುವರೆವಿಗೆ ನಾಡಿನಲ್ಲಿ, ಹೊರನಾಡಿನಲ್ಲಿ ಜನಪದ ಸಾಹಿತ್ಯ, ಕಲೆ, ಕಲಾವಿದರನ್ನು ಕುರಿತು ನಡೆಸಿದ ವಿಚಾರ ಸಂಕಿರಣಗಳು, ಚರ್ಚೆಗಳು, ಶಿಬಿರಗಳು, ಪ್ರದರ್ಶಿಸಿದ ಕಲೆಗಳು ಜಾನಪದದ ಬೆಳವಣಿಗೆಗೆ ಕಾರಣವಾಗಿವೆ. ನಾಡಿನ, ಹೊರನಾಡಿನ ವಿದ್ವಾಂಸರನ್ನು, ಕಲಾವಿದರನ್ನು

ಗುರುತಿಸಿ, ಅವರ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ಪಾರಿತೋಷಕ ನೀಡಿ ಗೌರವಿಸುತ್ತಾ ಬಂದಿದೆ.

ಅಕಾಡೆಮಿಯ ಇಡೀ ಸಾಧನೆಗೆ ಹಿಂದಿನ ಅಧ್ಯಕ್ಷರು, ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಸಿಬ್ಬಂದಿಗಳ ಪರಿಶ್ರಮವಿದೆ. ಸರಕಾರ, ಸಂಘ-ಸಂಸ್ಥೆಗಳ ಸಹಕಾರಗಳನ್ನು ನಾವು ಮರೆಯುವಂತಿಲ್ಲ.

"ಜಾನಪದ ತಲೆಮಾರು" ಮಾಲಿಕೆಯಲ್ಲಿ ನಾಡಿನ ವಿದ್ವಾಂಸರ, ತಜ್ಞರ ಬದುಕು, ಸಾಧನೆ, ಕೊಡುಗೆಗಳನ್ನೊಳಗೊಂಡಂತೆ ಅವರ ಪರಿಚಯದ ಲೇಖನಗಳನ್ನು ಪ್ರಕಟಿಸಿ ನೂರಾರು ಜನರನ್ನು ದಾಖಲಿಸಿದೆ.

ಜೊತೆಗೆ ಜಾನಪದ ಕಲೆ ಸಾಹಿತ್ಯ ಕುರಿತು ಮೌಲಿಕ ಗ್ರಂಥಗಳನ್ನು ಹೊರತರುತ್ತಾ ಪ್ರಕಟಣೆಯ ಕಾರ್ಯದಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತಲೇ ಬಂದಿರುವುದು ಸಮಾಧಾನದ ಸಂಗತಿಯಾಗಿದೆ.

ನಮ್ಮ ಜನಪದ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಪ್ರತಿಭಾನ್ವಿತ ಕಲಾವಿದರ ಪರಿಚಯ ಪುಸ್ತಕ ಬರಬೇಕೆನ್ನುವ ಆಲೋಚನೆ ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಶ್ರೇಷ್ಠ ಪ್ರತಿಭಾನ್ವಿತ ಯಕ್ಷಗಾನ ಕಲಾವಿದರು, ನಮ್ಮ ಅಕಾಡೆಮಿಯ ಅಧ್ಯಕ್ಷರೂ ಆದ ಶ್ರೀ ಕೆರೆಮನೆ ಶಂಭು ಹೆಗಡೆಯವರ ಅಧ್ಯಕ್ಷರ ಅವಧಿಯಲ್ಲಿ ಬಂದದ್ದು ಸಮಂಜಸವಾದದ್ದು. ಅಧ್ಯಕ್ಷರು ಸ್ವತಃ ಕಲಾವಿದರಾಗಿದ್ದರಿಂದಲೇ ಕಲಾವಿದರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಅವರಿಗಾಗಿ ಹತ್ತಾರು ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುವತ್ತ ಈಗ ಸಮಗ್ರ ನಾಡಿನ ಕಲಾವಿದರ ಪರಿಚಯ ಪುಸ್ತಕ ತರುತ್ತಿರುವುದು ಅಭಿಮಾನದ ಸಂಗತಿಯಾಗಿದೆ.

ನಾಡಿನ ಎಲ್ಲಾ ಜಿಲ್ಲೆಗಳಿಂದ ಆಸಕ್ತಿಯುಳ್ಳ ಲೇಖಕರನ್ನು ಕರೆಯಿಸಿ ಗ್ರಂಥದ ರೂಪು-ರೇಷೆಯ ಬಗ್ಗೆ, ಪುಟಗಳ ಸಂಖ್ಯೆ ಬಗ್ಗೆ ಸಭೆಯಲ್ಲಿ ತಿಳಿಸಿ, ಹಸ್ತಪ್ರತಿ ಕಳುಹಿಸಲು ಸಾಕಷ್ಟು ಸಮಯ ನೀಡಲಾಯಿತು. ಆದರೂ ಕೆಲವು ಜಿಲ್ಲೆಗಳ ಲೇಖಕರು ಕೊನೆಯವರೆಗೂ ಹಸ್ತಪ್ರತಿ ಕಳಿಸದಿದ್ದದು ನಿರಾಶೆಯನ್ನುಂಟುಮಾಡಿದೆ. ಬಂದ ಹಸ್ತಪ್ರತಿಗಳನ್ನೆಲ್ಲಾ ಪರಿಶೀಲಾ ಸಮಿತಿ ಪರಿಶೀಲಿಸಿ, ತಕ್ಷಣ ಅಕಾಡೆಮಿಯು ಮುದ್ರಣಕಾರ್ಯ ಕೈಗೆತ್ತಿಕೊಂಡು 10 ಜಿಲ್ಲಾ ಕಲಾವಿದರ ಪರಿಚಯ ಪುಸ್ತಕ ಹಾಗೂ 3 ವಿಶೇಷ ಗ್ರಂಥಗಳು ಸೇರಿದಂತೆ ಒಟ್ಟು 13 ಪುಸ್ತಕಗಳನ್ನು ಈ ಬೆಳ್ಳಿಹಬ್ಬದ ಸಂದರ್ಭದಲ್ಲಿ ಹೊರತರುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಕೊನೆಯದಾಗಿ ಕೃತಜ್ಞತೆಯ ಒಂದೆರೆಡು ಮಾತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಐ. ಎಂ. ವಿಠ್ಠಲಮೂರ್ತಿಯವರನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಅವರು ಈ ಬೆಳ್ಳಿಹಬ್ಬದ ಕಾರ್ಯಕ್ರಮಕ್ಕೆ ಆಸಕ್ತಿ ತೋರಿಸಿ,

ಹೆಚ್ಚಿನ ಧನ ಸಹಾಯ ಮಾಡಿದ್ದರಿಂದಲೇ ಪ್ರಕಟಣೆಗಳು, ವಿಶೇಷ ಕಾರ್ಯಕ್ರಮಗಳು ಜರುಗುತ್ತಿವೆ. ಅವರಿಗೆ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಸಮಯಕ್ಕೆ ಸರಿಯಾಗಿ ಸಹಾಯ, ಸಹಕಾರ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮಾನ್ಯ ಶ್ರೀ ಮನು ಬಳಿಗಾರ ಅವರಿಗೂ ಅಕಾಡೆಮಿ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗೊತ್ತುಪಡಿಸಿದ ಅವಧಿಯಲ್ಲಿ ತಮ್ಮ ತಮ್ಮ ಜಿಲ್ಲೆಯ ಹಿರಿಯ ಹಾಗೂ ಪ್ರತಿಭಾನ್ವಿತ ಕಲಾವಿದರ ಮಾಹಿತಿ ಸಂಗ್ರಹಿಸಿ, ಹಸ್ತಪ್ರತಿ ಸಿದ್ಧಪಡಿಸಿಕೊಟ್ಟ ಲೇಖಕರಿಗೆ, ಆಗಾಗ ಸಭೆ ಸೇರಿ ಈ ಪ್ರಕಟಣಾ ಕಾರ್ಯಕ್ಕೆ ಚಾಲನೆ ನೀಡಿ ಸಹಕರಿಸಿದ ಪ್ರಕಟಣಾ ಸಮಿತಿ ಅಧ್ಯಕ್ಷರು, ಸದಸ್ಯರಿಗೆ, ಪ್ರಕಟಣೆಯ ಜವಾಬ್ದಾರಿ ಹೊತ್ತು ಎಲ್ಲ ಪುಸ್ತಕಗಳ ವಿನ್ಯಾಸ, ಕರಡು ತಿದ್ದುವಿಕೆ, ಮುದ್ರಣ ಸಮೀಕ್ಷೆಯ ಕಾರ್ಯ ನಿರ್ವಹಿಸಿದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ್ ಹಿರೇಮಠ ಅವರಿಗೆ, ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿಯವರಿಗೆ ಹಾಗೂ ಅಕಾಡೆಮಿಯ ಪ್ರಕಟಣೆಗಳನ್ನು ಆಸಕ್ತಿಯಿಂದ ಬರಮಾಡಿಕೊಳ್ಳುವ ಸಹೃದಯಿಗಳಿಗೆ ಅನಂತ ಕೃತಜ್ಞತೆಗಳು.

**– ಬಿ. ಎನ್. ಪರಡ್ಡಿ**

ರಿಜಿಸ್ಟ್ರಾರ್,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು.

# ಪ್ರಸ್ತಾವನೆ

ಚಿತ್ರದುರ್ಗ ಸೀಮೆ ಬಿಸಿಲು, ಬರಗಾಲದ ನಡುವೆಯೂ ಮೈ ನವಿರೇಳಿಸುವ ವೈವಿಧ್ಯಮಯ ಜಾನಪದ ಸಂಸ್ಕೃತಿಯನ್ನು ಸದಾ ಬೆಳೆಸುತ್ತಾ ಪ್ರದರ್ಶಿಸುತ್ತಾ ಬಂದದ್ದು ಈ ನೆಲದ ವಿಶೇಷ. ಈ ಭಾಗದಲ್ಲಿ ದಟ್ಟವಾಗಿ ನೆಲೆಸಿರುವ ಕಾಡುಗೊಲ್ಲರು, ವ್ಯಾಸ ಬೇಡರು, ಕುರುಬರು, ಪರಿಶಿಷ್ಟ ಜಾತಿ–ವರ್ಗದ ಜನಾಂಗಗಳು, ತಮ್ಮ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಆ ಸಂಬಂಧಿ ಆಚರಣೆ, ಸಂಪ್ರದಾಯ, ನಂಬಿಕೆ ನಡಾವಳಿಯನ್ನು ಹಾಡಾಗಿ, ಕುಣಿತವಾಗಿ ಕಥೆ, ಗಾದೆ, ಒಗಟುಗಳ ಮೂಲಕ ಮೌಖಿಕ ಪರಂಪರೆಯಲ್ಲಿ ಯಥಾವತ್ತಾಗಿ ಕಾಯ್ದುಕೊಂಡು ಬಂದಿರುವುದು ಈ ನೆಲದ ಜಾನಪದ ಸಂಸ್ಕೃತಿಯ ಸಿರಿವಂತಿಕೆಗೆ ಸಾಕ್ಷಿಯಾಗಿದೆ.

ಗಣೆ, ಡಮರು, ತಮಟೆ, ಚೌಡಿಕೆ, ಲಾವಣಿ, ಕೋಲುಪದಗಳಲ್ಲಿ ಚಿತ್ರದುರ್ಗದ ಪಾಳೆಯಗಾರರು, ಮುರುಘಾಮಠ, ಏಕನಾಥೇಶ್ವರಿ, ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ, ಮೈಲಾರಲಿಂಗ, ಗೌರಸಂದ್ರದ ಮಾರಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಎತ್ತಪ್ಪ, ಗಾದರಿ ಪಾಲನಾಯಕ ಈ ಬಗೆಯ ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ ವೀರರನ್ನು ಅವರ ಶೀಲಶೌಚ, ಪರಾಕ್ರಮ, ತ್ಯಾಗ, ಬಲಿದಾನಗಳನ್ನು ಹಾಡು, ಕಥೆ, ಕುಣಿತಗಳ ಮೂಲಕ ನಿತ್ಯ ರವಾನಿಸುತ್ತಾ ನೆಲಮೂಲ ಸಂಸ್ಕೃತಿಯನ್ನು ಉಳಿಸುವಲ್ಲಿ ಈ ಭಾಗದ ಕಲಾವಿದರು ತೋರಿದ ಆದರ್ಶ ಅನನ್ಯವಾದುದು. ಇವರಿಂದಾಗಿಯೇ ಚಿತ್ರದುರ್ಗ ಜಿಲ್ಲೆಗೆ ಸಾಂಸ್ಕೃತಿಕವಾಗಿ ಅಪಾರ ಗೌರವವೂ ಪ್ರಾಪ್ತವಾಗಿದೆ.

ವೇಣುಕಲ್ಲುಗುಡ್ಡ, ಗೌರಸಂದ್ರ, ನಾಯಕನಹಟ್ಟಿ, ಚಿತ್ರಹಳ್ಳಿ, ಜಗಳೂರು, ಮುರುಘಾಮಠ, ಗುಂಟನೂರು, ಸಿರಿಗೆರೆ, ಗೊರ್ಲತ್ತು ಇವು ಜಿಲ್ಲೆಯ ಪ್ರಮುಖ ಜನಪದ ದೈವಸಂಬಂಧಿ ಪ್ರವಾಸಿ ನೆಲೆಗಳು. ಇವುಗಳ ಬಗೆಗೆ ಅಪಾರ ಜಾನಪದ ವಾಙ್ಮಯವನ್ನು ಹೊಂದಿರುವುದು ವಿಶೇಷವಾಗಿದೆ.

ಅಪರಿಮಿತವಾದ ಜಾನಪದ ಸಂಸ್ಕೃತಿ ಹೊಂದಿರುವ ಈ ನೆಲದಲ್ಲಿ ಹಾಡು, ಗಾದೆ, ಕಥೆಗಳು ಜನಪದ ಮಹಾಕಾವ್ಯವೂ ಮೌಖಿಕ ಪರಂಪರೆಯಲ್ಲಿ ರಾರಾಜಿಸುತ್ತಿವೆ. ಇಂಥ ವಿಪುಲ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಸಂಶೋಧನೆ ಕೈಗೊಳ್ಳುವ ಕೆಲಸವೂ ನಡೆಯುತ್ತಾ ಬಂದಿದೆ.

ಶ್ರೀ ಕ. ರಾ. ಕೃಷ್ಣಸ್ವಾಮಿ ಅವರೆ ಈ ಭಾಗದ ಜನಪದ ಗೀತೆಗಳ ಸಂಗ್ರಹದ ಕಾರ್ಯಕ್ಕೆ ಮೊದಲು ಚಾಲನೆ ನೀಡಿದವರು. ಹಳೆಯ ಮೈಸೂರು ಭಾಗದ ಈ ಜಾನಪದ ವಿದ್ವಾಂಸರನ್ನು ಚಿತ್ರದುರ್ಗ ಸೀಮೆಗೆ ಕರೆದುತಂದು, ಜೊತೆಗೆ ಸಂಗ್ರಹ ಕ್ಷೇತ್ರಕಾರ್ಯ ಮಾಡಿದವರು ಪಿ. ಆರ್. ತಿಪ್ಪೇಸ್ವಾಮಿ ಅವರು. ಕಾಡುಗೊಲ್ಲರ, ಕುರುಬರ, ಬೋವಿ, ಆದಿ ಕರ್ನಾಟಕ, ಆದಿ ದ್ರಾವಿಡ, ಬೆಸ್ತ ಈ ಮುಂತಾದ ಜನಾಂಗಗಳಲ್ಲಿ ಹಾಡುತ್ತಿದ್ದ ಹಾಡುಗಳನ್ನು ೧೯೫೦ ರಿಂದಲೇ ಸಂಗ್ರಹ ಮಾಡತೊಡಗಿದರು. ಕರಾಕೃ ಅವರನ್ನು ಮೈಸೂರು ಭಾಗದಿಂದ ಚಿತ್ರದುರ್ಗ ಸೀಮೆಗೆ ಕರೆತಂದು ಅವರ ಕಾರ್ಯಕ್ಷೇತ್ರಕ್ಕೆ ನೆರವಾಗುವುದಲ್ಲದೆ ಹಾಡುಗಾರ ರೇಖಾಚಿತ್ರವನ್ನು ರಚಿಸಿ ಈ ಸಂಕಲನಗಳು ಜನಪ್ರಿಯವಾಗುವಲ್ಲಿ ಸಹಕರಿಸಿದ ಹರ್ತಿಕೋಟೆಯ ಪಿ. ಆರ್. ತಿಪ್ಪೇಸ್ವಾಮಿ ಅವರ ಸಾಧನೆ, ಸಹಕಾರ ಅನನ್ಯವಾದುದು.

೧೯೫೦ ರಿಂದ ಆರಂಭವಾದ ಜನಪದ ಸಂಗ್ರಹದ ಕ್ಷೇತ್ರಕಾರ್ಯ ನಿರಂತರವಾಗಿ ಮುಂದುವರಿಯುತ್ತಾ ಬಂದಿತು. ಜೀಶಂಪ, ಪಿ.ಆರ್. ತಿಪ್ಪೇಸ್ವಾಮಿ, ಅಂಬಳಿಕೆ ಹಿರಿಯಣ್ಣ, ಮೈಲನಹಳ್ಳಿ ರೇವಣ್ಣ, ಎಂ. ಜಿ. ಈಶ್ವರಪ್ಪ, ಹನೂರು ಕೃಷ್ಣಮೂರ್ತಿ, ಮೀರಾಸಾಬಿಹಳ್ಳಿ ಶಿವಣ್ಣ, ಕಲಮರಹಳ್ಳಿ ಮಲ್ಲಿಕಾರ್ಜುನ, ಕಲಮರಹಳ್ಳಿ ಈಶ್ವರಪ್ಪ, ಚಿಕ್ಕಣ್ಣ ಯಣ್ಣೆಕಟ್ಟೆ, ಜವಗೊಂಡನಹಳ್ಳಿ ಗೊಲ್ಲರಹಟ್ಟಿ ಮಹಾಲಿಂಗಪ್ಪ ಈ ಮೊದಲಾದ ಜಾನಪದ ವಿದ್ವಾಂಸರು ಈ ಭಾಗದ ಸಂಕೀರ್ಣ ಜನಪದ ಕಾವ್ಯ, ಗೀತೆ, ಗಾದೆ ಮೊದಲಾದ ಜನಪದ ಸಾಹಿತ್ಯ ಪ್ರಕಾರಗಳ ಸಂಗ್ರಹ ಕಾರ್ಯ ಮಾಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ದಟ್ಟವಾಗಿ ನೆಲೆಸಿರುವ ಕಾಡುಗೊಲ್ಲರು ಗಣೆ ಸಂಪ್ರದಾಯದಲ್ಲಿ ಜನಪದ ಮಹಾಕಾವ್ಯಗಳನ್ನು ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಹಾಡುವುದು ವಿಶೇಷ. ಗಂಡಸರು ಗಣೆ ಮೇಲೆ, ಕೋಲು ಪದಗಳಲ್ಲಿ ಜುಂಜಪ್ಪ, ಎತ್ತಪ್ಪ, ಚಿತ್ರದೇವರು, ಕಾಟಂಲಿಂಗನ ಕಥೆ ಹೇಳಿದರೆ ಹೆಂಗಸರು ಸೋಬಾನೆ ಪದಗಳಲ್ಲಿ

ಈ ಸಾಂಸ್ಕೃತಿಕ ವೀರರ ಬಗೆಗೆ ಕಾವ್ಯ, ಪದ, ಕಥೆ ಹೇಳುವುದು ವಿಶೇಷವಾಗಿದೆ. ಈ ಕಾಡುಗೊಲ್ಲರ ಸಂಸ್ಕೃತಿ ಕುರಿತು ಡಾ|| ತೀ. ನಂ. ಶಂಕರನಾರಾಯಣ, ಡಾ|| ಮೀರಾಸಾಬಿಹಳ್ಳಿ ಶಿವಣ್ಣ, ಮಹಾಲಿಂಗಪ್ಪ ಸಂಶೋಧನೆ ನಡೆಸಿದ್ದಾರೆ. ಈ ಭಾಗದ ವ್ಯಾಸಬೇಡರನ್ನು ಕುರಿತು ಡಾ|| ಕೃಷ್ಣಮೂರ್ತಿ ಹನೂರು ಸಂಶೋಧನೆ ನಡೆಸಿದರೆ ಕೃಷಿ ಸಂಸ್ಕೃತಿ ಕುರಿತು ಡಾ|| ಎಂ. ಜಿ. ಈಶ್ವರಪ್ಪ ಸಂಶೋಧನೆ ನಡೆಸಿದ್ದಾರೆ. ಡಾ|| ಮೀರಾಸಾಬಿಹಳ್ಳಿ ಶಿವಣ್ಣ ಜಾನಪದ ಅಕಾಡೆಮಿಯ ಸದಸ್ಯರಾಗಿ ಈ ಭಾಗದ ಕಲಾವಿದರನ್ನು ಗುರುತಿಸುವಲ್ಲಿ, ಪ್ರಶಸ್ತಿ, ಗೌರವ ನೀಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಜನಪದ ಕಲಾವಿದರ ಪಟ್ಟಿ ದೊಡ್ಡದು. ಜನಪದ ಸಾಹಿತ್ಯವನ್ನು ವೈವಿಧ್ಯ ಪ್ರಕಾರಗಳಲ್ಲಿ ಹಾಡುತ್ತಾರೆ. ಈ ಕಲಾಸಂಪನ್ನರೇ ಈ ಭಾಗದ ಸಂಶೋಧನೆಗೆ ಪ್ರೇರಕರು, ಮಾಹಿತಿದಾರರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಲಾವಿದೆ ಪ್ರಶಸ್ತಿ ಪುರಸ್ಕಾರಕ್ಕೆ ಒಳಗಾದ ಕರ್ನಾಟಕದ ಮೊದಲ ಮಹಿಳಾ ಕಲಾವಿದೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಬಿದಿರುಕೆರೆ ಗೊಲ್ಲರಹಟ್ಟಿ ತೋಪಮ್ಮ ಎಂಬುದು ಈ ಜಿಲ್ಲೆಯ ಜಾನಪದವನ್ನು ಪರಿಭಾವಿಸುವಾಗ ಮಹತ್ವವಾದ ಸಂಗತಿಯಾಗುತ್ತದೆ. ಇದೇ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಬರುತ್ತಿರುವ ನಾಡೋಜ, ಸಾವಿರ ಪದಗಳ ಸಿರಿಯಜ್ಜಿ ಮತ್ತಿತರ ಎಲೆಮರೆಯ ಕಾಯಿಗಳಂತೆ ಸಾವಿರಾರು ಗೊಲ್ಲ ಮಹಿಳೆಯರು ಇಂದಿಗೂ ಇರುವುದು ನೆನೆಯಲೇಬೇಕಾದ ಸಂಗತಿ. ಕಲರಹಳ್ಳಿ ಈರಬಡಪ್ಪ, ಕೋಲಾಟದ ಮಾರಪ್ಪ, ಮುತ್ತಂದ್ರದ ಸನಾಯಿ ಚನ್ನಬಸಪ್ಪ, ಟಿ.ಎನ್.ಕೋಟೆಯ ಕರಿಯಮ್ಮ, ಪೂಜಾರಿ ದೊಡ್ಡಬೊಮ್ಮಯ್ಯ, ಬೋವಿ ಜಯಮ್ಮ, ಚಿನ್ನಮ್ಮನಂಥ ಈ ಭಾಗದ ಅಪೂರ್ವ ಸಾಂಸ್ಕೃತಿಕ ರಾಯಭಾರಿಗಳೆಂದೇ ಪರಿಗಣಿಸಿದ್ದೇನೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೬೦ ವರ್ಷ ವಯೋಮಿತಿಯ ಕಲಾಪ್ರಕಾರದಲ್ಲಿ ಸಾಧನೆ ಮಾಡಿದ, ಮಾಡುತ್ತಿರುವ ಹಿರಿಯ ಕಲಾವಿದರನ್ನು ಕುರಿತು ಪರಿಚಯಾತ್ಮಕ ಪುಸ್ತಕ ಪ್ರಕಟಿಸಬೇಕೆಂಬ ಆಲೋಚನೆಯ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಕಲಾವಿದರ ಪರಿಚಯ ಬರೆಯಲು ನನ್ನನ್ನು ಕೋರಿತು. ನನಗೆ ಲಭ್ಯವಿದ್ದ ಮಾಹಿತಿ ಹಾಗೂ ಈ ಭಾಗದ ಕಲಾವಿದರ, ಸಂಶೋಧಕರ ಸಹಕಾರ ಹಾಗೂ ಚಿತ್ರದುರ್ಗದ ಆಕಾಶವಾಣಿ, ಸ್ಥಳೀಯ ದಿನಪತ್ರಿಕೆಗಳಲ್ಲಿ ಕಲಾವಿದರ ಮಾಹಿತಿಗಾಗಿ ಪ್ರಕಟಣೆ ನೀಡಲಾಯಿತು. ಇದಕ್ಕೆ ಸ್ಪಂದಿಸಿದವರು ವಿರಳ. ಆದರೂ ಈ ಭಾಗದ ಹಲವು ಹಿರಿಯರು, ಕಲಾವಿದರ ಬಗೆಗೆ ಮಾಹಿತಿ ಒದಗಿಸಿದರು. ಇನ್ನೂ ಹಲವು ಕಲಾವಿದರ ಪರಿಚಯ ಕೈಬಿಟ್ಟು ಹೋಗಿರಲೂಬಹುದು. ಅಕಾಡೆಮಿ ನನಗೆ ಸೂಚಿಸಿದ್ದ ೫೦ ಕಲಾವಿದರನ್ನಷ್ಟೇ ಕುರಿತು ಮಾಹಿತಿ ನೀಡಬೇಕಾಗಿದ್ದುದರಿಂದ ಇಲ್ಲಿ

ಸಮಗ್ರತೆಯಿಲ್ಲ, ಆದರೂ ಈ ಕ್ಷೇತ್ರದ ಪ್ರಾತಿನಿಧಿಕ ಕಲಾವಿದರನ್ನು ಇಲ್ಲಿ ಪರಿಚಯಿಸಲಾಗಿದೆ. ಈ ಮೂಲಕ ಸಂಶೋಧಕರಿಗೂ, ಆಸಕ್ತ ಸಹೃದಯರಿಗೂ ಈ ಪುಸ್ತಕದ ಕೊನೆಯಲ್ಲಿ ನೀಡಲಾಗಿದೆ. ಇಂಥದೊಂದು ಒಳ್ಳೆಯ ಕೆಲಸದಲ್ಲಿ ನನಗೆ ನೆರವಾದ ಎಲ್ಲರನ್ನೂ ನೆನೆಯುತ್ತೇನೆ. ಮಗಳು ಅಕ್ಷತ, ಯಶು ಬಂದ ಮಾಹಿತಿ ಪತ್ರಗಳನ್ನು ಒಪ್ಪಾಗಿ ಜೋಡಿಸಿ, ನಿರೂಪಣೆಗೆ ಸಹಕರಿಸಿದ್ದಾರೆ. ಇವರಿಗೆ ಅಕ್ಕರೆಯ ನೆನಕೆಗಳು ಸಲ್ಲುತ್ತವೆ. ಈ ಕೆಲಸವನ್ನು ನನಗೆ ಒಪ್ಪಿಸಿದ ಕರ್ನಾಟಕ ಜಾನಪದ ಅಕಾಡೆಮಿಗೆ ನನ್ನ ವಂದನೆಗಳು.

ನವೆಂಬರ್, ೨೦೦೭

**ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ,**
ಪ್ರಾಧ್ಯಾಪಕ ಮತ್ತು ಪಿಎಚ್.ಡಿ. ಮಾರ್ಗದರ್ಶಕ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ.

## ಪರಿವಿಡಿ


೧. ತೋಪಮ್ಮ . . . ೧
೨. ಹೆಂಜಮ್ಮ . . . ೩
೩. ಹನುಮಜ್ಜಿ . . . ೫
೪. ಸಿರಿಯಜ್ಜಿ . . . ೭
೫. ಮಾರಪ್ಪ . . . ೯
೬. ಇಕ್ಕನೂರು ನಿಂಗಜ್ಜ . . . ೧೧
೭. ಓಬಳವ್ವ . . . ೧೩
೮. ಆಸಾದಿ ಹನುಮಂತಪ್ಪ . . . ೧೫
೯. ಬೋವಿ ಜಯಮ್ಮ . . . ೧೭
೧೦. ಕೋಲಾಟದ ಚಿತ್ರಯ್ಯ . . . ೨೦
೧೧. ಪೆನ್ನಪ್ಪ . . . ೨೨
೧೨. ಚನ್ನಬಸಪ್ಪ . . . ೨೪
೧೩. ಈರಬಡಪ್ಪ . . . ೨೬
೧೪. ತೊರೆ ಸಾಲಪ್ಪ . . . ೨೯
೧೫. ಸಣ್ಣನರಸಿಂಹಪ್ಪ . . . ೩೧
೧೬. ಶಾಂತಮ್ಮ . . . ೩೩
೧೭. ನೀಲಪ್ಪ . . . ೩೫
೧೮. ಬಂಗಾರಮ್ಮ . . . ೩೭
೧೯. ಗಿಡ್ಡಜ್ಜ . . . ೩೯
೨೦. ಗುರುವಯ್ಯ ಒಡೆಯರ್ . . . ೪೧
೨೧. ಸುಡುಗಾಡಮ್ಮ . . . ೪೪
೨೨. ಹನುಮಂತಪ್ಪ . . . ೪೬
೨೩. ಚಿನ್ನಮ್ಮ . . . ೪೮
೨೪. ವೀರಭದ್ರಯ್ಯ . . . ೫೦

| | | |
|---|---|---|
| ೨೫. | ಜಿ. ಶಿವಪ್ಪ | ೫೩ |
| ೨೬. | ತಮ್ಮಣ್ಣ | ೫೫ |
| ೨೭. | ತಿಪ್ಪಮ್ಮ | ೫೭ |
| ೨೮. | ದೊಡ್ಡಕರಿಯಪ್ಪ | ೫೯ |
| ೨೯. | ಮಳಲಿ ಈರಮ್ಮ | ೬೧ |
| ೩೦. | ಈರಣ್ಣ | ೬೩ |
| ೩೧. | ಲಕ್ಷ್ಮಣ | ೬೫ |
| ೩೨. | ಗಂಗಾಧರಪ್ಪ | ೬೭ |
| ೩೩. | ಸಕ್ಕರ ನಿಂಗಜ್ಜಿ | ೬೯ |
| ೩೪. | ಗೋವಿಂದಪ್ಪ | ೭೧ |
| ೩೫. | ಹಾವಿನಪ್ಪ | ೭೩ |
| ೩೬. | ಕೆ. ರಾಮಚಂದ್ರ | ೭೫ |
| ೩೭. | ಫನಿಸಾಬ್ | ೭೭ |
| ೩೮. | ಬಿ.ಇ ತಿಪ್ಪೇಸ್ವಾಮಿ. | ೭೯ |
| ೩೯. | ಗೋನೂರು ಬೋರಣ್ಣ | ೮೨ |
| ೪೦. | ವೆಂಕಟೇಶ್ | ೮೪ |
| ೪೧. | ದೊಡ್ಡತಿಮ್ಮಯ. | ೮೬ |
| ೪೨. | ಮಹಾಲಿಂಗಪ್ಪ | ೮೮ |
| ೪೩. | ಗಾದೀರಯ್ಯ | ೯೦ |
| ೪೪. | ಕೆಂಚಮ್ಮ | ೯೨ |
| ೪೫. | ಕಲಮರಹಳ್ಳಿ ಎತ್ತಪ್ಪ | ೯೪ |
| ೪೬. | ಹೆಳವರ ಗೋವಿಂದಪ್ಪ | ೯೬ |
| ೪೭. | ನಿಂಗಜ್ಜಿ | ೯೮ |
| ೪೮. | ಮಲ್ಲಪ್ಪ | ೧೦೦ |
| ೪೯. | ಪಾರಿಬಾಯಿ | ೧೦೨ |
| ೫೦. | ತಿಪ್ಪೇಸ್ವಾಮಿ | ೧೦೪ |
| ೫೧. | ಮಹದೇವಮ್ಮ | ೧೦೬ |
| ೫೨. | ಕೆಂಚಮ್ಮ | ೧೦೮ |
| ೫೩. | ಕಮಲಮ್ಮ | ೧೧೦ |
| ೫೪. | ರುದ್ರಪ್ಪ | ೧೧೨ |
| ೫೫. | ರಾಮಚಂದ್ರ ನಾಯಕ | ೧೧೪ |
| ೫೬. | ಗಂಗಮ್ಮ | ೧೧೬ |
| ೫೭. | ವಾಜಿದ್ | ೧೧೮ |
| ೫೮. | ಎಲ್. ಕೃಷ್ಣಪ್ಪ | ೧೨೦ |

೫೯. ತಿಪ್ಪನಾಯಕ . . . ೧೨೩
೬೦. ಕೆಂಚಜ್ಜಿ . . . ೧೨೫
೬೧. ಬೊಮ್ಮಲಿಂಗಪ್ಪ . . . ೧೨೭
೬೨. ಕೊಟ್ರಪ್ಪ . . . ೧೨೮
೬೩. ಶರಣಯ್ಯ . . . ೧೩೦
೬೪. ಹೆಚ್. ರಂಗಸ್ವಾಮಿ . . . ೧೩೨
೬೫. ಭಾಗವತ ನಾಗಪ್ಪ . . . ೧೩೪
೬೬. ಮಾಹಿತಿ ನೀಡಿದವರು . . . ೧೩೬

## ತೋಪಮ್ಮ

ತೋಪಮ್ಮ ಚಿತ್ರದುರ್ಗ ಜಿಲ್ಲೆಯ ಜನಪ್ರಿಯ ಹಾಡುಗಾರ್ತಿ. ಕಾಡುಗೊಲ್ಲರ ಸಮಗ್ರ ಸಂಸ್ಕೃತಿಯನ್ನು ಹಾಡುಗಳ ಮೂಲಕ ವಿದ್ವಾಂಸ ವಲಯಕ್ಕೆ ತೆರೆದಿಟ್ಟ ಮೊದಲ ಹಾಡುಗಾರ್ತಿ. ೧೯೩೦ರಲ್ಲಿ ಹುಟ್ಟಿದ ಈಕೆಯದು ಹಿರಿಯೂರು ತಾಲ್ಲೂಕಿನ ಬಿದರಕೆರೆ ಗ್ರಾಮ. ಅನಕ್ಷರಸ್ತೆಯಾದರೂ ಈಕೆಯ ಕಲ್ಪನೆ, ನೆನಪಿನ ಶಕ್ತಿ ಅಗಾಧವಾದುದು. ಹಿರಿಯೂರು, ಹರ್ತಿಕೋಟೆ ಈ ಭಾಗಗಳಲ್ಲಿ ಈಕೆಯ ಹಾಡಿಲ್ಲದೆ ಮದುವೆ, ಸೋಬನ, ದೇವರ ಉತ್ಸವಗಳಿಲ್ಲ ಎಂಬ ಹಿರಿಮೆಗೆ ಪಾತ್ರರಾಗಿದ್ದರು. ಕಾಡುಗೊಲ್ಲರ ಸಾಂಸ್ಕೃತಿಕ ರಾಯಭಾರಿಯಾಗಿರುವ ತೋಪಮ್ಮ ಗೌರಸಂದ್ರದ ಮಾರಕ್ಕ, ಗೊಲ್ಲಾಳಮ್ಮ, ಬುಡುರ್ರುಕುಂಟೆ ಈರೋಬಮ್ಮ, ಕರಿಯೋಬಮ್ಮ ಈ ಹೆಣ್ಣು ದೇವತೆಗಳ ಜೊತೆಗೆ ಜುಂಜಪ್ಪ, ನಂದಿಹಳ್ಳಿ ರಂಗಪ್ಪ, ಹೂವಿನಹೊಳೆ ಈರಪ್ಪ ಎಂಬ ಗಂಡು ದೇವತೆಗಳನ್ನು ಕುರಿತು ಹಾಡುತ್ತಿದ್ದರು. ಮದಕರಿನಾಯಕ, ಗಂಗೆ-ಗೌರಿ ಪದ, ಅರ್ಜುನ ಜೋಗಿ ಪದ, ಪಾಂಡವರ ವನವಾಸದ ಕಥನಗಳನ್ನು ಹುಟ್ಟು, ಸಾವು ಇವುಗಳ ಬಗೆಗಿನ ಹಾಡು, ಕೃಷಿ, ಮದುವೆ, ಸಂಪ್ರದಾಯದ ಹಾಡುಗಳನ್ನು ಹಾಡುವ ಹಿರಿಯ ಕಲಾವಿದೆ. ಕೊರವಂಜಿ ಪದಗಳನ್ನು ಹಾಡುವುದು, ಆ ಹಾಡಿಗೆ ಕೋಲಿನ ಧ್ವನಿರೂಪ ಕೊಡುವುದು ಈ ಅಜ್ಜಿಯ ಹಿರಿಮೆಗೆ ಸಾಕ್ಷಿಯಾಗಿದೆ.

ತಂದೆ ಎರೇಹಳ್ಳಿ ಚಿಕ್ಕಣ್ಣ, ತಾಯಿ ದಾಸಮ್ಮ, ಮದುವೆಯಾದದ್ದು ಸಣ್ಣೀರಪ್ಪ ಎಂಬುವವರನ್ನು. ತಾಯಿ ದಾಸಮ್ಮ ಅದ್ಭುತ ಹಾಡುಗಾರ್ತಿ. ಆರೇಳು ರಾತ್ರಿ ಒಂದೇ ಸಮ ಹಾಡುವ ವಿಶಿಷ್ಟತೆ ಈಕೆಯದು. ಈ ಕಲೆಯೇ ತೋಪಮ್ಮಗೆ ವರವಾಗಿ ಬಂದಿದೆ. ಕೂಲಿ ನಾಲಿಯಿಂದ ಬದುಕುವ ತೋಪಮ್ಮಗೆ ಈಗ ಏನೂ ಇಲ್ಲ. ಗಂಡ ಚಿಕ್ಕಮ್ಮನೂ ಹಣ್ಣಾಗಿದ್ದಾನೆ. ಈಕೆಗೂ ವೃದ್ಧಾಪ್ಯದ ಕೊರಗು. ಮಕ್ಕಳಿಲ್ಲ, ತಾನು ಕಲಿತ ಹಾಡುಗಳೇ

ಮಕ್ಕಳೆಂದು ಹರ್ಷದಿಂದ ಹಾಡಿಕೊಂಡು ಬಂದ ತೋಪಮ್ಮಗೆ ಈಗ ಒಂಟಿತನ ಕಾಡುತ್ತಿದೆ. ಬೆಳ್ಳಿ ಮೂಡುವ ಮುನ್ನ ಬೀಸುವ ಕಲ್ಲಿನ ಮುಂದೆ ಕುಳಿತು ಹಾಡುಗಳೊಂದಿಗೆ ಧಾನ್ಯ ಬೀಸುವುದಕ್ಕೆ ಆರಂಭಿಸಿದರೆ, ಧಾನ್ಯ ಮುಗಿದರೂ ಹಾಡು ಬರಿದಾಗುತ್ತಿರಲಿಲ್ಲ. ಈಗ ಧಾನ್ಯವೂ ಇಲ್ಲ, ಬೀಸುವುದೂ ಮರೆತುಹೋಗಿದೆ.

ತೋಪಮ್ಮನ ಅದ್ಭುತ ಹಾಡುಗಾರಿಕೆಯನ್ನು ಮೊದಲು ಗುರುತಿಸಿದವರು ಹಿರಿಯ ಕಲಾವಿದ ಹರ್ತಿಕೋಟೆಯ ಪಿ.ಆರ್. ತಿಪ್ಪೇಸ್ವಾಮಿ ಅವರು. ಕರಾಕ್ರ, ಜೀಶಂಪ ಈಕೆಯಿಂದ ಮೊದಲಿಗೆ ಚಿತ್ರದುರ್ಗ ಜಿಲ್ಲೆಯಿಂದ ಹಾಡುಗಳನ್ನು ಸಂಗ್ರಹಿಸಿದರು. ಮದುಗದ ಕೆಂಚಮ್ಮ, ಜುಂಜಪ್ಪ ಈ ಮೊದಲಾದ ಹಾಡುಗಳ ಸೂಕ್ಷ್ಮತೆ ಅರಿವಾದದ್ದೇ ಈಕೆಯಿಂದ. ಒಟ್ಟಾರೆ ಚಿತ್ರದುರ್ಗ ಜಿಲ್ಲೆಯ ಜಾನಪದ ಕ್ಷೇತ್ರದ ಆರಂಭಿಕ ಕಲಾವಿದೆಯಾಗಿ ತೋಪಮ್ಮ ಮಾಡಿದ ಸಾಧನೆ ಅಗಾಧವಾದುದು. ಕ್ಷೇತ್ರ ಕಾರ್ಯಕರ್ತರಿಗೆ ಹೊಸ ದಿಕ್ಕನ್ನು, ದುರ್ಗದ ಜಾನಪದ ಹಾಡನ್ನು ತೋರಿಸಿರುವ ಹಿರಿಮೆಯೂ ಇವರದು. ಹಾಡು ಕಲಿಸುವ ತವಕವಿದ್ದರೂ ಕಲಿಯುವವರು ಬೇಕಲ್ಲ ಎಂಬ ಕೋರಿಕೆಯ ಈ ಹಿರಿಯಜ್ಜಿ. ಪ್ರಯತ್ನಪಟ್ಟು ತನ್ನದೇ ಊರಿನ ಕೆಲವರಿಗೆ ಹಾಡುಗಳನ್ನು ಕಲಿಸಿ ಕೊಟ್ಟಿದ್ದಾರೆ. ಗೌರಮ್ಮ, ದಾಸಮ್ಮ, ಲಕ್ಷ್ಮಕ್ಕ ಹಾಗೂ ದ್ಯಾಮಕ್ಕ ಎಂಬುವವರು ಇವರಲ್ಲಿ ಮುಖ್ಯವಾದವರು.

ಅನಕ್ಷರಸ್ಥ ಕುಕ್ಷಿಯಾದ ಈಕೆ ಬಾಯಿಬಿಟ್ಟರೆ ಹಾಡುಗಳ ಮಹಾಕೋಶವೇ ತೆರೆದುಕೊಳ್ಳುವ ಶ್ರೀಮತಿ ತೋಪಮ್ಮ ಕರ್ನಾಟಕ ಸರ್ಕಾರ ಸ್ಥಾಪಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮಹಿಳಾ ಕಲಾವಿದೆಯರಿಗೂ ಪ್ರಶಸ್ತಿ ನೀಡುವ ಹೊಸ ಪರಂಪರೆಯನ್ನು ಹೆಚ್.ಎಲ್. ನಾಗೇಗೌಡ ಅಧ್ಯಕ್ಷೀಯ ಸಮಿತಿ ಆರಂಭಿಸಿತು. ಆ ಹಿರಿಮೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಬಿದರಕೆರೆ ಕುಗ್ರಾಮಕ್ಕೆ ಸಲ್ಲುತ್ತದೆ. ಹಾಗಾಗಿ ತೋಪಮ್ಮ ಜಾನಪದ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ಮಹಿಳಾ ಕಲಾವಿದೆ ಎಂಬ ಹಿರಿಮೆಗೆ ಪಾತ್ರರಾದವರು.

**ತೋಪಮ್ಮ,**
**ಬಿದರಕೆರೆ ಗ್ರಾಮ,**
**ಹಿರಿಯೂರು ತಾಲೂಕು.**

# ಹೆಂಜಮ್ಮ

ಹರ್ತಿಕೋಟೆಯ ಹೆಂಜಮ್ಮ ಕಲೆಯೇ ಜೀವನ, ಜೀವನವೇ ಕಲೆ ಎಂಬಂತೆ ಬದುಕಿ ಬಾಳಿದವರು. ಹುಟ್ಟಿದ್ದು ಕರ್ನಾಟಕಾಂಧ್ರ ಪ್ರದೇಶಗಳ ಗಡಿ ಗ್ರಾಮವಾದ ಗಂಡಿಹಳ್ಳಿಯಲ್ಲಿ. ಬಾಲ್ಯದಲ್ಲಿಯೇ ಹೆಂಜೇರು ಸಿದ್ಧೇಶ್ವರ, ಗಂಡಿಹಳ್ಳಿ ಬುಡನ್ ಹಾಗೂ ದತ್ತಾತ್ರೇಯ ದೇವರ ಉತ್ಸವಗಳಲ್ಲಿ ಹಿರಿಯರು ಹಾಡುತ್ತಿದ್ದುದನ್ನು ಆಸಕ್ತಿಯಿಂದ ನೋಡಿ ತಿಳಿದುಕೊಂಡು ತನ್ನ ತೊಂಬತ್ತನೇ ವಯಸ್ಸಿನ ತನಕ ಹಾಡುವುದನ್ನೇ ಹವ್ಯಾಸವನ್ನಾಗಿ ಮಾಡಿಕೊಂಡ ಅದ್ಭುತ ಪ್ರತಿಭೆ.

ಸಿರಾ ತಾಲ್ಲೂಕು ಗಂಡಿಹಳ್ಳಿಯ ಬೇಡರ ಕುಟುಂಬದಲ್ಲಿ ಜನಿಸಿದ ಹೆಂಜಜ್ಜಿ ಮದುವೆಯಾದದ್ದು ಹಿರಿಯೂರು ತಾಲೂಕು ಹರ್ತಿಕೋಟೆಯ ತಳವಾರ ನರಸಣ್ಣನೊಂದಿಗೆ. ಬಾಲ್ಯವಿವಾಹದ ಅತಿರೇಕ ೭ನೇ ವಯಸ್ಸಿನಲ್ಲಿಯೇ ಮದುವೆ, ಹದಿನಾರನೇ ವಯಸ್ಸಿನಲ್ಲಿ ಪುಷ್ಪವತಿಯಾಗಿ ಗಂಡನೊಂದಿಗೆ ಬಾಳಿದ್ದು ಕೇವಲ ಅರವತ್ತು ದಿನಗಳು ಮಾತ್ರ. ಊರಿಗೆ ಬಂದ ಪ್ಲೇಗ್ ಮಾರಿ ರೋಗ ಈಕೆಯ ಸೌಭಾಗ್ಯ ಕಸಿಯಿತಲ್ಲದೆ ಬದುಕನ್ನೇ ಆಹುತಿ ತೆಗೆದುಕೊಂಡಿತು. ಮೈಮನಸ್ಸು ಬಲಿಯುವ ಸಮಯಕ್ಕೆ ವಿಧವೆಯ ಪಟ್ಟ, ಮಕ್ಕಳಿಲ್ಲ, ತೀರಾ ಸಂಬಂಧಿಕರೂ ಇಲ್ಲ. ಅನಾಥ ಸ್ಥಿತಿ. ಇಂಥ ಸಂದರ್ಭಕ್ಕೆ ಈಕೆಯ ಜೊತೆಯಾದದ್ದು ಜನಪದ ಹಾಡುಗಳು ಮಾತ್ರ.

ಬಾಲ್ಯದಿಂದಲೇ ಗೀತೆಗಳ ಬಗೆಗೆ ಅಪಾರ ಒಲವಿದ್ದ ಹೆಂಜಮ್ಮ ಪದ ಹಾಡುವುದನ್ನು ಕಲಿತದ್ದು ತಾಯಿ ಹನುಮಕ್ಕಳಿಂದ. ಹೇಮಾವತಿಯ ಹೆಂಜೇರು ಸಿದ್ದೇಶ್ವರನ ಬಗೆಗೆ ಬಹಳಷ್ಟು ಪದ ಹಾಡುತ್ತಿದ್ದರು. ಹುಳಿಯಾರು ಕೆಂಚಮ್ಮ, ಮದುಗದ ಕೆರೆ, ವದ್ದೀಕೆರೆ ಸಿದ್ದಪ್ಪ ಈ ಬಗೆಯ ಕಥನ ಗೀತೆಗಳನ್ನು ಹಾಡುವ ಹೆಂಜಮ್ಮ ಹಾಡಿರುವ

ಗೀತೆಗಳನ್ನು ಬರಗೂರು ವೀರಮ್ಮ, ರುದ್ರಕಥನ ಗೀತೆ ಇವುಗಳನ್ನು ರುದ್ರ ಕಥನಗಳು ಎಂಬ ಪುಸ್ತಕದಲ್ಲಿ ಪ್ರಕಟವಾಗಿವೆ.

ಹೆಂಜಮ್ಮಳಿಗೆ ಹತ್ತಿರದ ಆಶ್ರಯದಾತರೆಂದರೆ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರು. ಹಿರಿಯೂರು, ಚಳ್ಳಕೆರೆ, ಸಿರಾ, ಪಾವಗಡ, ಚಿ. ನಾ. ಹಳ್ಳಿ, ಚಿತ್ರದುರ್ಗ ಈ ಭಾಗಗಳ ಸಾಂಸ್ಕೃತಿಕ ಸಮಾರಂಭದಲ್ಲಿ ತಪ್ಪದೆ ಆಹ್ವಾನಿಸಿ ಪದ ಹಾಡಿಸುತ್ತಿದ್ದರು. ಮೈಸೂರು ದಸರಾ ಉತ್ಸವ, ವಿಶ್ವವಿದ್ಯಾನಿಲಯದಲ್ಲಿನ ಜಾನಪದ ವಿಭಾಗಗಳಲ್ಲಿಯೂ ಈಕೆ ಕಥನ ಗೀತೆಗಳನ್ನು ಹಾಡಿದವರು. ೧೯೮೪ನೇ ಸಾಲಿನಲ್ಲಿ ಜಾನಪದ ಅಕಾಡೆಮಿ ಪುರಸ್ಕಾರ ಪಡೆದರು. ಕೊನೆಯ ದಿನಗಳಲ್ಲಿ ದೂರದ ಸಂಬಂಧಿ ಮಾಳಮ್ಮಜ್ಜಿ ಎಂಬ ವಿಧವೆಯ ಗುಡಿಸಲಲ್ಲಿ ವಾಸ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಬಂದಾಗಿನ ಪದ ಉದ್ಗಾರ 'ಪ್ರಶಸ್ತಿಪತ್ರಕ್ಕಿಂತ ಹೊಟ್ಟೆ ಕೂಳಿಗೆ ಒಂದಿಷ್ಟು ಹಣ ಕೊಟ್ಟರೆ ವಾಸಿ' ಇದು ಇಂದಿನ ನೈಜ ಕಲಾವಿದರ ಅನುಭವದ ನುಡಿ. ಕಲಾವಿದರಿಗೆ ಸೌಕರ್ಯ ಸಿಗಲೇಬೇಕೆಂಬ ಅಚಲತೆ ಹೆಂಜಜ್ಜಿಯವರದು. ಈಕೆ ತೀರಿಕೊಂಡಾಗ ೯೩ ವರ್ಷ ವಯಸ್ಸು.

**ಹೆಂಜಮ್ಮ,**
**ಹರ್ತಿಕೋಟೆ,**
**ಹಿರಿಯೂರು ತಾಲೂಕು.**

## ಹನುಮಜ್ಜಿ

ಚಳ್ಳಕೆರೆ ತಾಲೂಕು ನನ್ನಿವಾಳದ ಸಮೀಪದ ಗೊರ್ಲಕಟ್ಟೆಯ ಹನುಮಕ್ಕ ಈಗ ಇಲ್ಲ. ತಾಲೂಕಿನ ಹಿರಿಯ ಹಾಡುಗಾರ್ತಿ ಎಂಬ ಹೆಗ್ಗಳಿಕೆಗೂ ಪಾತ್ರವಾದವರು. ತನ್ನ ತವರುಮನೆ ಪಾಲೇನಹಳ್ಳಿಯಲ್ಲಿ ತಾಯಿ ಹಾಗೂ ಹಿರೀಕೆಯಾದ ಬಂಗಾರಮ್ಮನವರಿಂದ ಹಾಡುಗಳನ್ನು ಕಲಿತರು. ರೈತಾಪಿ ಬದುಕಿನಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಗ ಹೊಲದಲ್ಲಿ ಹೇಳುತ್ತಿದ್ದ ಹಾಡುಗಳೇ ಈಕೆಗೆ ಸ್ಫೂರ್ತಿ. ತಮ್ಮ ಕೆಲಸದ ಮಧ್ಯೆ ಹಾಡುಗಳನ್ನು ಕ್ರಮವಾಗಿ ಕಲಿಯುತ್ತಾ ಬಂದರು. ವಯಸ್ಸಿಗೆ ಬಂದಾಗಲೇ ಬಂಗಾರಮ್ಮನ ಮುಂದುವರಿಕೆಯ ರೂಪವಾಗಿ ಪ್ರಸಿದ್ಧಿಗೆ ಬಂದರು. ದೇವರ ಉತ್ಸವ, ಮದುವೆ ಮೊದಲಾದ ಸಾಂಪ್ರದಾಯಿಕ ಸಮಾರಂಭಗಳಲ್ಲಿ ಬಂಗಾರಮ್ಮನೊಂದಿಗೆ ಹನುಮಕ್ಕ ಇರಲೇಬೇಕು. ಹಾಗಾಗಿ ಹಾಡುವುದು ಒಂದು ಬಗೆಯ ವ್ರತವಾಗಿ, ಕಂಠಪಾಠವಾಗಿ ನಿರಂತರವಾಗಿ ಹೊರಹೊಮ್ಮಲು ಪ್ರೇರಕವಾಯಿತು.

ಬಂಗಾರಮ್ಮ ಸತ್ತ ನಂತರ ತಾವೇ ಹಾಡುಗಾರಿಕೆಯ ವಾರಸುದಾರರಂತೆ ಶಾಸ್ತ್ರಕಾರ್ಯಗಳಲ್ಲಿ ಭಾಗವಹಿಸುತ್ತಾ ಬಂದರು. ಅಷ್ಟರೊಳಗೆ ಗೊರ್ಲಕಟ್ಟೆಯ ಬೋಸಯ್ಯ ಎಂಬುವವರಿಗೆ ಮದುವೆ ಮಾಡಿಕೊಡಲಾಯಿತು. ಇಲ್ಲಿಯೂ ಒಳ್ಳೆಯ ವಾತಾವರಣ, ಹಾಡುವುದಕ್ಕೆ ಮನ್ನಣೆ. ಗಂಡ ಬೋಸಯ್ಯನವರೂ ಯಕ್ಷಗಾನ ಕಲಾವಿದರು, ಕೋಲಾಟ ಹಾಡುಗಾರರು. ಹಾಗಾಗಿ ಬೇರೆ ಬೇರೆ ಕಡೆ ಪದ ಹೇಳಲು ಹೋಗುವುದಕ್ಕೆ ಅಡ್ಡಿ ಉಂಟಾಗಲಿಲ್ಲ.

ಕಡಿಮೆ ಎಂದರೆ ೨೫ ರಿಂದ ೫೦ ಜನಕ್ಕೆ ಹಾಡುಗಾರಿಕೆ ಕಲಿಸಿರುವ ಹನುಮಕ್ಕನನ್ನು ಗೊರ್ಲಕಟ್ಟೆಯ ಜನತೆ 'ಹಾಡುಗಳ ದೇವತೆ' ಎಂದೇ ಪರಿಗಣಿಸಿದ್ದಾರೆ.

ಈ ಬಗೆಗೆ ಗಂಗಮ್ಮ ತಾನು ಕಲಿತ ಜಗಲೂರಪ್ಪನ ಮೇಲಿನ ಪದವನ್ನು ಗುನುಗಿ ಆ ತಾಯಿಯಿಂದ ಕಲಿತದ್ದು ಎನ್ನುತ್ತಾರೆ.

ಹನುಮಕ್ಕ ಆರನೇ ವಯಸ್ಸಿನಿಂದ ೬೪ನೇ ವಯಸ್ಸಿನವರೆಗೆ ಹಾಡುತ್ತಿದ್ದರು. ಕಥನ ಕವನಗಳ ಮೂಲನಿಧಿಯೂ ಆಗಿದ್ದವರು. ಗುಣಸಾಗರಿ ಕಥನ ಕಾವ್ಯವನ್ನು ಜೀಶಂಪ ಸಂಗ್ರಹಿಸಿದ್ದಾರೆ. ಕಳಿಂಗರಾಯನ ಮೇಲೆ ಕಥನ ಕವನ ಹಾಡುತ್ತಾರೆ. ಅಭಿಮನ್ಯು, ಗಂಗಮ್ಮ-ಗೌರಮ್ಮ, ಗೊರಪ್ಪ-ಜಗಲೂರಪ್ಪ, ಗೌರಸಂದ್ರದ ಮಾರಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮದಕರಿನಾಯಕ, ಕಾಡುಸಿದ್ದಮ್ಮ ಈಕೆಯ ಹಾಡುಗಳ ಕಣಜದಲ್ಲಿದ್ದ ಪ್ರಮುಖ ಕಥನಕಾವ್ಯಗಳು.

ಸೋಬಾನೆ, ದೇವರ ಕರೆಯುವ ಪದ, ಭಜನೆ ಪದ, ಚಿತ್ರದೇವರ ಪದ, ಗಾದಿನಾಯಕನ ಮೇಲಿನ ಪದಗಳನ್ನು ಹಾಡುತ್ತಿದ್ದರು. ಹಾಡುವ ಕಾಲದಲ್ಲಿ ಸರ್ಕಾರ, ಸಂಘಸಂಸ್ಥೆ ಗುರುತಿಸದಿದ್ದರೂ ಕೊನೆಗಾಲದಲ್ಲಿ ಜೀಶಂಪ ಗುರುತಿಸಿ ೧೯೯೨ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿರುವುದು ಈಕೆಯ ಬದುಕಿನಲ್ಲಿ ಬಹು ದೊಡ್ಡ ಸಾಧನೆ. ಹಾಡುಗಳ ಕಣಜವಾಗಿದ್ದ ಹನುಮಜ್ಜಿ ತೀರಿಕೊಂಡಾಗ ೬೫ ವರ್ಷ ವಯಸ್ಸು.

**ಹನುಮಜ್ಜಿ,**
**ಗೊರ್ಲಕಟ್ಟೆ, ಚಳ್ಳಕೆರೆ ತಾಲೂಕು.**

# ಸಿರಿಯಜ್ಜಿ

ಕರ್ನಾಟಕ ಜಾನಪದ ಕಥನ ಗೀತ ಪರಂಪರೆಯಲ್ಲಿ ಸಿರಿಯಜ್ಜಿಯದು ಸಿಂಹಪಾಲು. ಕರ್ನಾಟಕ ಬುಡಕಟ್ಟು ಸಂಸ್ಕೃತಿಯ ವಿಶ್ವಕೋಶ. ತಮ್ಮ ಅಪೂರ್ವ ಹಾಡುಗಾರಿಕೆಗಾಗಿ ಪ್ರಪ್ರಥಮವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯ 'ನಾಡೋಜ ಪ್ರಶಸ್ತಿ' ಪಡೆದ ಹಿರಿಮೆ ಇವರದು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಬೆಳಗೆರೆ ಗ್ರಾಮದ ಚಿಕ್ಕೇನಹಳ್ಳಿ ಗೊಲ್ಲರಹಟ್ಟಿಯ ಸಿರಿಯಜ್ಜಿ ಅಖಂಡ ಕರ್ನಾಟಕದ ಜಾನಪದ ಹಿರಿಯಜ್ಜಿ ಎಂಬ ಪ್ರೀತಿಗೆ ಪಾತ್ರರು. ತ್ರಿಪದಿ, ಸೋಬಾನೆ, ಕಥನಗೀತೆ, ಲಾವಣಿ ಪದ, ಕೃಷಿ, ಮದುವೆ, ಸಂಪ್ರದಾಯ ಹೀಗೆ ಸಾವಿರ ಪದಗಳ ವೈವಿಧ್ಯತೆಗಳ ನಿಜವಾದ ವಾರಸುದಾರೆ. ದೇಶೀಸಂಸ್ಕೃತಿಯ ಅಪ್ಪಟ ರೂಪ.

ಸಿರಿಯಜ್ಜಿ ಹುಟ್ಟಿದ್ದು ಚಳ್ಳಕೆರೆ ತಾಲ್ಲೂಕಿನ ಯರಗಟ್ಟೆ ಗೊಲ್ಲರಹಟ್ಟಿ. ತಂದೆ ಗುಡ್ಡದ ಈರಪ್ಪ, ತಾಯಿ ಕಾಡಮ್ಮ. ಹನ್ನೆರಡನೇ ವಯಸ್ಸಿಗೆ ಬೆಳಗೆರೆ ಸಮೀಪದ ಚಿಕ್ಕೇನಹಳ್ಳಿ ಗೊಲ್ಲರಹಟ್ಟಿಯ ತಿಪ್ಪೇಸ್ವಾಮಿಯೊಂದಿಗೆ ವಿವಾಹ. ತಮ್ಮ ದಾಂಪತ್ಯದ ಇಪ್ಪತ್ತು ವರ್ಷದೊಳಗೆ ತಿಪ್ಪೇಸ್ವಾಮಿ ತೀರಿಕೊಂಡರು. ಹೊಲದಲ್ಲಿ ಗಂಡು, ಮನೆಯಲ್ಲಿ ಹೆಂಗಸು–ಇದು ಸಿರಿಯಕ್ಕ ಬೆಳೆದುಬಂದ ಬಗೆ. ಸರಿಕರ ಮುಂದೆ ಸಮ ವ್ಯವಸಾಯ, ಅದರಿಂದಲೇ ಜೀವನೋಪಾಯ. ಇಬ್ಬರು ಗಂಡುಮಕ್ಕಳೊಂದಿಗೆ ಬೆಳೆದವರು. ತಾಯಿ ಕಾಡಮ್ಮ ಒಳ್ಳೆಯ ಹಾಡುಗಾರ್ತಿ. ಇಂದಿಗೂ ಸಿರಿಯಜ್ಜಿ ಹಾಡುವ ಪದಗಳನ್ನೆಲ್ಲಾ ತಾಯಿಯೇ ಕಲಿಸಿಕೊಟ್ಟಿದ್ದು. ಅತ್ತೆ ಕರಿಸಿರಿಯಕ್ಕನೂ ಹಾಡುಗಾರ್ತಿ. ಕಥನಗೀತೆಗಳಾದ ಸಿರಿಯಣ್ಣ, ಚಿತ್ರದೇವರು, ಜುಂಜಪ್ಪ ಮತ್ತು ಕಾಡುಗೊಲ್ಲರ ವಿವಾಹ ಸಂಬಂಧಿ ಹಾಡುಗಳನ್ನು ಅತ್ತೆಯೇ ಕಲಿಸಿದ್ದು. ಕೊಂಡದ ಕಾಟವ್ವ ಎಂಬ ತನ್ನಟ್ಟಿಯ ಹಿರಿಕೆಯಿಂದಲೂ ಕಲಿತಿದ್ದಾಗಿ ಹೇಳುತ್ತಾರೆ.

ಕೃಷಿ ಬದುಕಿನಲ್ಲಿ ಮದುವೆ, ದೇವರ ಕಾರ್ಯಗಳಲ್ಲಿ ಹಾಡುತ್ತಿದ್ದುದನ್ನು ಗಮನಿಸಿದ ಬೆಳಗೆರೆ ಕೃಷ್ಣಶಾಸ್ತ್ರಿ (ಮೇಷ್ಟು) ಉತ್ಸಾಹ ತೋರಿ ಹಾಡುವ ಧಾಟಿಯನ್ನು

ಮೆಚ್ಚಿಕೊಂಡು ಪ್ರೋತ್ಸಾಹ ನೀಡುತ್ತಾ ಬಂದರು. ಹಿರಿಯ ಸಾಹಿತಿ ಎಸ್.ಎಲ್. ಭೈರಪ್ಪ, ಎ. ಕೆ. ರಾಮಾನುಜಂ, ಪಿ. ಆರ್. ತಿಪ್ಪೇಸ್ವಾಮಿ, ಕರಾಕೃ ಮೊದಲಾದ ವಿದ್ವಾಂಸರು ಈಕೆಯ ಹಾಡುಗಳನ್ನು ಉತ್ಸಾಹದಿಂದ ಕೇಳಿ ತಲೆದೂಗಿದರು. ಇದೇ ಪ್ರೋತ್ಸಾಹ ಸಿರಿಯಜ್ಜಿ ಹಾಡಿನ ಬಗೆಗೆ ಕಾಳಜಿ ತೋರಲು ಪ್ರಮುಖ ಹಿನ್ನೆಲೆ. ಪಿ. ಆರ್. ತಿಪ್ಪೇಸ್ವಾಮಿ, ಕೃಷ್ಣಶಾಸ್ತ್ರಿಗಳು. ಚಿತ್ರದುರ್ಗ ಜಿಲ್ಲೆಯ ಸಭೆ ಸಮಾರಂಭಗಳಲ್ಲಿ ಮೊದಲಿಗೆ ವೇದಿಕೆಗೆ ಹತ್ತಿಸಿ ಹಾಡಿಸಿದರು. ಕಾಡುಗೊಲ್ಲರ ಹೆಂಗಸು ಮೊದಲು ವೇದಿಕೆ ಹತ್ತಿದ ಹಿರಿಮೆಯೂ ಈಕೆಯದು. 'ಹೀಗಾಗಿ ನನ್ನ ಕೀರ್ತಿ ಬೆಳೆಯಿತು. ನಂತರ ಚಳ್ಳಕೆರೆ ಕಾಲೇಜಿನ ಕನ್ನಡ ಉಪನ್ಯಾಸಕರಾದ ಕೃಷ್ಣಮೂರ್ತಿ ಹನೂರ ನನ್ನನ್ನು, ನನ್ನ ಹಟ್ಟಿ ಅಂಗಳದಲ್ಲಿಯೇ ಕಂಡರು. ಅವರಿಗೂ ಹಾಡಿದೆ. ಅವರಿಂದ ನನ್ನ ಹಾಡು ಪುಸ್ತಕ ರೂಪದಲ್ಲಿ ಕಾಣಲು ಕಾರಣವಾಯಿತು. ಇದರ ಪ್ರೇರಕ ಶಕ್ತಿ ನಮ್ಮ ಸೋಮ್ಯಾರು (ಕೃಷ್ಣಶಾಸ್ತ್ರಿ)' ಎಂಬುದು ಹಿರಿಯಜ್ಜಿಯ ಅನಿಸಿಕೆ.

ಸಿರಿಯಜ್ಜಿಯ ಜಾನಪದ ಸಾಹಿತ್ಯಸಿರಿ ಅಪಾರ. ಕತ್ತಲದಾರಿ ದೂರ, ಸಾವಿರದ ಸಿರಿಬೆಳಗು ಎಂಬ ಬೃಹತ್ ಜನಪದ ಕಥನ ಗೀತೆಗಳ ವ್ಯಕ್ತಾ ಇವರೇ. ಇದನ್ನು ಡಾ|| ಕೃಷ್ಣಮೂರ್ತಿ ಹನೂರ ಸಂಪಾದಿಸಿದ್ದಾರೆ. ಈಕೆಯು ಹಾಡಿರುವ ಸಾವಿರಾರು ತ್ರಿಪದಿಗಳು, ಸೋಬಾನೆ ಪದಗಳು, ಕಥನಗೀತೆಗಳು ಈಗಾಗಲೇ ಪ್ರಕಟವಾಗಿವೆ. ಚಿತ್ರದುರ್ಗ ಜಿಲ್ಲೆಯ ನಡೆದಾಡುವ ಸಂಸ್ಕೃತಿಕೋಶ ಎಂದೇ ಕರೆಯಲ್ಪಡುವ ಸಿರಿಯಜ್ಜಿ ಇಂದಿಗೂ ತಮ್ಮ ಸಂಪ್ರದಾಯದ ಮದುವೆ, ದೇವರ ಉತ್ಸವಗಳಲ್ಲಿ ಭಾಗವಹಿಸುತ್ತಿರುವುದು ವಿಶೇಷ. ಕಾಡುಗೊಲ್ಲರ ಸಂಸ್ಕೃತಿಯ ಬಗೆಗೆ ಅನನ್ಯ ಕಾಳಜಿ, ಹಿರಿಮೆ ಪ್ರಕಟಿಸುವ ಈ ಅಜ್ಜಿ ಅದೇ ವರ್ಗದ ಅಂಧಾನುಕರಣೆಯ ಬಗೆಗೆ ಮರುಗುತ್ತಾರೆ. ಮೂಢನಂಬಿಕೆ ಯಿಂದ ನಮಗೆ ಉಳಿಗಾಲವಿಲ್ಲ ಎಂದೇ ಹೇಳುವ ಇವರು ತಮ್ಮ ಮಾತು ಕೇಳೋರ್‍ಯಾರು ಎಂಬ ಅಸಹಾಯಕತೆಯನ್ನು ತೋರುತ್ತಾರೆ.

ಸಾವಿರ ಪದಗಳ ಸರದಾರೆ, ಸಿರಿಯಜ್ಜಿಯ ಖ್ಯಾತಿ ಅಪಾರವಾದುದು. ಹಲವು ವಿಶ್ವವಿದ್ಯಾಲಯಗಳಲ್ಲಿ ಈಕೆಯ ಜಾನಪದ ವಾಙ್ಮಯವನ್ನು ಕುರಿತು ಸಂಶೋಧನೆ ನಡೆದಿವೆ, ನಡೆಯುತ್ತಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೩ ರಲ್ಲಿಯೇ ಜಾನಪದ ಕಲಾವಿದೆ ಪ್ರಶಸ್ತಿ ನೀಡಿ ಗೌರವಿಸಿದೆ. ನಂತರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಲಭ್ಯವಾಗಿದೆ. ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಾಗ ಇವರಿಗೆ ಜಾನಪದ ಸಿರಿ ಸಿರಿಯಜ್ಜಿಯ ಬಿರುದು ನೀಡಿ ಸನ್ಮಾನಿಸಿದ್ದಾರೆ. ಕರ್ನಾಟಕದಾದ್ಯಂತ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಈಕೆಯನ್ನು ಗೌರವಿಸಿವೆ. ಈ ಎಲ್ಲವುದಕ್ಕೂ ಮುಕುಟಪ್ರಾಯದಂತೆ ೨೦೦೪ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ.

**ಜಾನಪದ ಸಿರಿಯಜ್ಜಿ ಚಿಕ್ಕೇನಹಳ್ಳಿ**
**ಗೊಲ್ಲರಹಟ್ಟಿ, ಚಳ್ಳಕೆರೆ ತಾಲೂಕು.**

# ಮಾರಪ್ಪ

ಚಿತ್ರದುರ್ಗ, ಚಳ್ಳಕೆರೆ ಭಾಗಗಳಲ್ಲಿ 'ಹಾಡಿನ ಮಾರ' ಎಂದೇ ಖ್ಯಾತರಾದ ಮಾರಪ್ಪ ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ನಿಂಗದಹಳ್ಳಿಯಲ್ಲಿ. ಹಾಡುಗಾರಿಕೆಯನ್ನು ಒಂದು ಕಲೆಯಾಗಿ ಪರಂಪರೆಗೊಳಿಸುವವರು ಸಾಮಾನ್ಯವಾಗಿ ಹೆಂಗಸರು. ಕುಟ್ಟುವ, ಬೀಸುವ, ಮದುವೆ ಸಂಬಂಧಿ ಹಾಡುಗಳ ಮೂಲಕ ಹಾಡುಗಾರರೆಂದರೆ ಹೆಂಗಸರೆಂಬುದು ನಂಬಿಕೆ. ಮಾರಪ್ಪ ಇದಕ್ಕೆ ಹೊರತಾದ ಪ್ರತಿಭೆ. ಜೀತ ಪರಂಪರೆಯ ಮಾರಪ್ಪ ತನ್ನ ದಿನವಿಡೀ ದುಡಿತದ ನಡುವೆಯೂ ಕಲಿತ ಪದಗಳು ಸಾವಿರ. ಕೋಲಾಟದ ಪದಗಳನ್ನು ಸರಾಸರಿ ಮೂರು ರಾತ್ರಿ ಹಾಡಿದರೂ ಸಾಲದು ಎಂಬುದು ಇವರ ನಂಬಿಕೆ. ಚಿತ್ರದುರ್ಗದ ಸಮೀಪದ ಲಿಂಗದಹಳ್ಳಿಯ ಮಾರಪ್ಪ ಜೀತಪದ್ಧತಿಗೆ ಹೊಂದಿಕೊಂಡು ಚಳ್ಳಕೆರೆ ತಾಲೂಕು ಕರೀಕೆರೆಯಲ್ಲಿ ನೆಲೆಸಿದ್ದಾರೆ. ಆದಿ ಕರ್ನಾಟಕ ಜನಾಂಗದ ಈ ಕಲಾವಿದ ಜುಂಜಪ್ಪನ ಪದ, ಗೌರಸಂದ್ರದ ಮಾರಕ್ಕನ ಮೇಲಿನ ಪದಗಳೇ ಅಧಿಕ. ಸಾಮಾನ್ಯವಾಗಿ ಕಾಡುಗೊಲ್ಲರು ಜುಂಜಪ್ಪನ ಪದ ಅಥವಾ ಕತೆ ಹೇಳುವುದು ವಾಡಿಕೆ. ಮಾರಪ್ಪ ಇದಕ್ಕೆ ಅಪವಾದ. ತನ್ನ ಜೀತದ ಬದುಕಿನಲ್ಲೇ ವಿಶ್ವೇಶ್ವರಪುರದ ರಾಜಣ್ಣ ಎಂಬುವವರಿಂದ ಕಲಿತದ್ದಾಗಿ ಹೇಳುತ್ತಾರೆ. ಸುತ್ತಲ ಹಲವು ಹಳ್ಳಿಗೆ ಕೋಲಾಟ ಕಲಿಸುತ್ತಾರೆ. ಹಾಡು ಹೇಳಿ ಖುಷಿಪಡುತ್ತಾರೆ, ನಗಿಸುತ್ತಾರೆ. ಕರೆದಾಗ ಯಾವುದೇ ಸಂಭಾವನೆಯೂ ಇಲ್ಲದೆ ಬಂದು ಹಾಡು ಹೇಳುವುದು ಈತನ ಹವ್ಯಾಸ. ಹೊಟ್ಟೆಪಾಡಿನ ಕಥೆಯೂ ಅಡ್ಡಲಾಗಿದೆ. ಒಟ್ಟು ಆರು ಜನ ಮಕ್ಕಳು. ಮೂವರು ಹೆಣ್ಣು, ಮೂವರು ಗಂಡು. ಈ ಮಕ್ಕಳಲ್ಲಿ ಮೊದಲನೆಯ ಮಗನೂ ಜೀತದಂತೆ ಹೊರಗಿದ್ದರೆ ಉಳಿದವರೆಲ್ಲಾ ಈತನೊಂದಿಗಿದ್ದಾರೆ. ೬೦ ವರ್ಷ ತುಂಬಿರುವ ಮಾರಣ್ಣ ಅವರ ಹಲವು ಹಾಡುಗಳನ್ನು ಡಾ॥ ಮೀರಾ ಸಾಬಿಹಳ್ಳಿ ಶಿವಣ್ಣ, ಕರೀಮರಹಳ್ಳಿ ಮಲ್ಲಿಕಾರ್ಜುನ ಸಂಗ್ರಹಿಸಿದ್ದಾರೆ. ಗೌರಸಂದ್ರದ ಮಾರಮ್ಮನ ಪದಗಳನ್ನು ಚಿತ್ರದುರ್ಗದ ಸಂಶೋಧನಾ ವಿದ್ಯಾರ್ಥಿ ಡಿ. ಮುರಳೀಧರ ಸಂಗ್ರಹಿಸಿದ್ದಾರೆ.

ಯಾವುದೇ ಪ್ರಶಸ್ತಿ, ಸಭೆ, ಸಮಾರಂಭಗಳ ಬಗೆಗೆ ಅರಿವಿಲ್ಲದ ಮಾರಪ್ಪಗೆ ತನ್ನ ಪಾಡಿಗೆ ತಾನು ಹಾಡುವುದು ಚಂದವಾದ ಸಂಗತಿಯಾಗಿದೆ. ಇವರ ಈ ಅಪೂರ್ವ ಕಲೆಗಾರಿಕೆಯನ್ನು ಗುರುತಿಸಿ ೧೯೮೫ ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದೆ. ಆರ್ಥಿಕವಾಗಿ ದಮನೀಯ ಸ್ಥಿತಿಯಲ್ಲಿರುವ ಈ ಜರಾಜೀರ್ಣ ವ್ಯವಸ್ಥೆಯ ಕಲಾವಿದನಿಗೆ ಕಾಯುವುದಕ್ಕೆ ಮೇಕೆ, ವಾಸಕ್ಕೆ ಒಂದು ಮಾಳಿಗೆ ಮನೆಯ ಕನಸು ಕಾಣುವುದು ಮಾತ್ರ ತಪ್ಪಿಲ್ಲ. ಹಾಡು ಕಲಿತವರು ಇವರ ನೆರವಿಗೆ ಬಂದಿಲ್ಲ ಎಂಬ ಕೊರಗೂ ಈ ಕಲಾವಿದನಿಗಿದೆ.

**ಹಾಡಿನ ಮಾರಪ್ಪ,**
**ಕರೀಕೆರೆ ಕಾಲೋನಿ, ಚಳ್ಳಕೆರೆ ತಾಲೂಕು.**

# ಇಕ್ಕನೂರ ನಿಂಗಜ್ಜ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಜಾನಪದ ಸಂಸ್ಕೃತಿಯ ಕಣಜ. ಈ ಭಾಗದಲ್ಲಿ ವ್ಯಾಪಕವಾಗಿ ನೆಲೆಸಿರುವ ಕಾಡುಗೊಲ್ಲರು, ವ್ಯಾಸಬೇಡರು, ಕುರುಬರು, ಆದಿಕರ್ನಾಟಕ ಜನಾಂಗದವರು, ತೆಲುಗು ಜಂಗಮರು ಆಯಾಯಾ ಜನಾಂಗಿಕ ವೀರರ ಕಥನಗಳನ್ನು ಕಂಠಸ್ಥ ಪರಂಪರೆಯಲ್ಲಿ ಸಮರ್ಥವಾಗಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಕುರುಬರಿಗೆ ಮೈಲರಲಿಂಗ, ಬೀರೇಶ್ವರ ಸಾಂಸ್ಕೃತಿಕ ನಾಯಕರಾದರೆ ಕಾಡುಗೊಲ್ಲರಿಗೆ ಜುಂಜಪ್ಪ, ಎತ್ತಪ್ಪ ಸಾಂಸ್ಕೃತಿಕ ವೀರರು. ಚಿತ್ರದೇವರು, ಕಾಟಂಲಿಂಗ ಪುರಾಣ ದೈವೀಪುರುಷರು, ವ್ಯಾಸ ಬೇಡರು ಗಾದಿನಾಯಕ ಮುಂತಾದ ಸಾಂಸ್ಕೃತಿಕ ನಾಯಕರ ಬಗೆಗೆ ಅಪಾರ ವಾಙ್ಮಯವನ್ನು ಜಾನಪದ ಪರಂಪರೆಯಲ್ಲಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ಪರಂಪರೆಯ ಕಾಡುಗೊಲ್ಲರ ಪುರಾಣ ಸಾಂಸ್ಕೃತಿಕ ವೀರ ಚಿತ್ರದೇವರು, ಕಾಟಂದೇವರು, ಐತಿಹಾಸಿಕ ವೀರ ಜುಂಜಪ್ಪ ಸಿರಾ, ಹಿರಿಯೂರು, ಹೊಳಲ್ಕೆರೆ ಈ ಭಾಗಗಳಲ್ಲಿ ಈ ವೀರರ ಚರಿತ್ರೆ, ಪುರಾಣವನ್ನು ಹಾಡುವ ಕಲಾವಿದರಿದ್ದಾರೆ.

ಇಕ್ಕನೂರಿನ ನಿಂಗಣ್ಣ ಚಿತ್ರದೇವರು ಕತೆಯನ್ನು ಹಾಡುವ ಏಕೈಕ ಕಲಾವಿದೆ. ಹಿರಿಯೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾರು ಕಿ.ಮೀ. ದೂರದಲ್ಲಿರುವ ಇಕ್ಕನೂರು ಕಾಡುಗೊಲ್ಲರ ಪ್ರಮುಖ ಕಟ್ಟಮನೆ. ಇಲ್ಲಿ ಚಿತ್ರಲಿಂಗ, ಕಾಟಂಲಿಂಗದೇವರ ಗುಡಿಗಳಿವೆ. ಈ ಪೈಕಿ ಚಿತ್ರದೇವರ ಪೂಜಾರಿಕೆಯೂ ನಿಂಗಜ್ಜ ಅವರದು. ಸಧ್ಯ ಇಕ್ಕನೂರಿನಿಂದ ಅರ್ಧ ಕಿ.ಮೀ ದೂರದ 'ನಾಡಿಗರ ಬಾವಿ' ಕಾಲೋನಿಯಲ್ಲಿ ವಾಸ ಮಾಡುತ್ತಿರುವ ನಿಂಗಜ್ಜ ಒಂದು ಬಗೆಯ ಅಲೆಮಾರಿ ಕಲಾವಿದರು. ನಿಂಗಪ್ಪನವರಿಗೆ ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಇವರನ್ನು ದೊಡ್ಡಬಾಣಗೆರೆ ಹಾಗೂ

ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿಗೆ ಕೊಟ್ಟು ಮದುವೆ ಮಾಡಿಕೊಡಲಾಗಿದೆ. ಇವರ ಎರಡನೆಯ ಮಗ ಮಹಾಲಿಂಗಪ್ಪ, ತಂದೆಯ ಜೊತೆಗಿದ್ದು ಪಶುವೈದ್ಯಕೀಯ ಕಾಯಕ ಮಾಡುತ್ತಿದ್ದಾರೆ.

ನಿಂಗಜ್ಜನಿಗೆ ಇದೀಗ ೭೫ ವರ್ಷ ವಯಸ್ಸು. ಆದರೂ ಒಂದು ಹಲ್ಲು ಬಿದ್ದಿಲ್ಲ, ನಾಲಿಗೆ ತೊದಲುವುದೂ ಇಲ್ಲ. ಸಿರಾ, ಹಿರಿಯೂರು, ಚಳ್ಳಕೆರೆ ಭಾಗಗಳಲ್ಲಿ ಜರುಗುವ ಯಾವುದೇ ಧಾರ್ಮಿಕ ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಭಾಗವಹಿಸಿ ಚಿತ್ರದೇವರ ಕತೆ ಮಾಡುವುದು ಇವರ ವಿಶೇಷ. ಇದಕ್ಕಾಗಿ ಯಾವುದೇ ಗೌರವ ಸಂಭಾವನೆ ಪಡೆಯುವುದಿಲ್ಲ. ಮಡಿ ಮೈಲಿಗೆಯ ಹೆಸರಲ್ಲಿ ಬೇರೆಯವರ ಮನೆಗಳಲ್ಲಿ ಊಟವನ್ನು ಮಾಡುವುದಿಲ್ಲ. ಭಾನುವಾರ, ಸೋಮವಾರಗಳಂದು ಉಪವಾಸವಿದ್ದು ಚಿತ್ರದೇವರ ಪೂಜಾಕಾರ್ಯ ನೆರವೇರಿಸುತ್ತಾರೆ.

ಚಿತ್ರದೇವರು ಕಾಡುಗೊಲ್ಲರ ಪಾರಂಪರಿಕ ದೈವ ಕಾಡುಗೊಲ್ಲರ ಹುಟ್ಟು, ವಿಕಾಸ, ಪ್ರಬುದ್ಧತೆಯ ಎಲ್ಲ ವಿವರಗಳೂ ಲಭ್ಯವಾಗುವುದು ಚಿತ್ರದೇವರು ಕಾವ್ಯದಲ್ಲಿಯೇ. ಚಿತ್ರದೇವರು, ಕಾಟಂಲಿಂಗ ಇವರಿಬ್ಬರೂ ಸ್ವಯಂ ಶಿವನ ಬೆವರಿನಿಂದ ಹುಟ್ಟಿದವರು. ಚಿತ್ರಗಿರಿ ಪಟ್ಟಣದ ಅರಸರಾಗಿ ರಾಜ್ಯವಾಳಿದವರು. ಈ ಬಗೆಗೆ ಹಲವು ಪವಾಡ ಸದೃಶ ನಡಾವಳಿಗಳು ಚಿತ್ರದೇವರ ಕತೆಯಲ್ಲಿ ಬರುತ್ತದೆ. ಚಿತ್ರದೇವರ ಕುರಿತು ಅಲ್ಲಲ್ಲಿ ಉಲ್ಲೇಖವನ್ನು ಕೆಲವು ಹಾಡುಗಾರರು ಮಾಡುತ್ತಾರಾದರೂ ಮೊದಲಿಂದ ಕೊನೆಯ ತನಕ ಕಾವ್ಯ ಹೇಳುವವರು ದಕ್ಷಿಣ ಕರ್ನಾಟಕದಲ್ಲಿ ಇಬ್ಬರು ಮಾತ್ರ. ಅದರಲ್ಲಿ ಮೊದಲನೆಯವರು ಇಕ್ಕನೂರು ನಿಂಗಜ್ಜ, ಇನ್ನೊಬ್ಬರು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ ನಿಂಗಜ್ಜ. ಇವರಿಬ್ಬರೂ ಒಟ್ಟಾಗಿಯೇ ಕತೆ ಕಲಿತವರು. ನಿಂಗಜ್ಜ ಹಾಡಿರುವ ಚಿತ್ರದೇವರು, ಕಾಟಂಲಿಂಗ ಕಾವ್ಯವನ್ನು ಜವಗೊಂಡನಹಳ್ಳಿ ಮಹಲಿಂಗಯ್ಯ ಸಂಗ್ರಹಿಸಿದ್ದಾರೆ ಮತ್ತು ಇವರನ್ನು ಕುರಿತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. ಇವರು ಹಾಡಿರುವ ಕಾಟಂಲಿಂಗನ ಕಥೆಯನ್ನು ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ ಸಂಪಾದಿಸಿದ್ದಾರೆ. ಜುಂಜಪ್ಪನ ಕಥೆ, ನಂದಿಹಳ್ಳಿ ರಂಗಪ್ಪನ ಕತೆಗಳನ್ನು ಹಾಡುವ ನಿಂಗಜ್ಜ ಉತ್ತಮ ಗಣೆವಾದಕರೂ ಹೌದು. ಸರ್ಕಾರ ಖಾಸಗಿಯಾಗಿಯೂ ಯಾವುದೇ ಕಲಾಗೌರವ, ಸಹಾಯ ಪಡೆಯದ ಈ ಕಲಾವಿದ ಒಂದು ರೀತಿಯಲ್ಲಿ ಜಂಗಮರಿದ್ದಂತೆ. ಗಡಿಭಾಗದ ಈ ಕಲಾವಿದನ ಸದ್ದಿಲ್ಲದ ಕಲಾಸೇವೆ ಅನನ್ಯವಾದುದು.

ಇಕ್ಕನೂರು ನಿಂಗಣ್ಣ,
ನಾಡಿಗರಬಾವಿ ಕಾಲೋನಿ,
ಹಿರಿಯೂರು ತಾಲೂಕು.

## ಓಬಳವ್ವ

ಚಿತ್ರದುರ್ಗ ಜಿಲ್ಲೆಯಲ್ಲಿ ಜನಪದ ಹಾಡುಗಾರರು ವ್ಯಾಪಕವಾಗಿದ್ದಾರೆ. ಜುಂಜಪ್ಪ, ಚಿತ್ರದೇವರು, ಕಾಟಂಲಿಂಗ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಚಿತ್ರದುರ್ಗದ ಕೋಟೆ ಮುರುಘಾಮಠ ಇವೆಲ್ಲವು ಜನಪದ ಬಾಯಲ್ಲಿ ಲಾವಣಿಗಳಾಗಿ, ಗೀತೆಗಳಾಗಿ, ಖಂಡಕಾವ್ಯ, ಮಹಾಕಾವ್ಯವಾಗಿ ನಿತ್ಯದ ಬದುಕಿನಲ್ಲಿ ಹಾಡುತ್ತಾ, ಮೌಖಿಕ ಪರಂಪರೆಯಲ್ಲಿ ಜನಪದರ ಸಂಸ್ಕೃತಿಯನ್ನು ನಿರಂತರವಾಗಿಸುತ್ತಿರುವುದು ವಿಶೇಷವಾಗಿದೆ. ಈ ಪರಂಪರೆಗೆ ಸೇರಿದ ಓಬಳವ್ವ ಹುಟ್ಟಿದ್ದು ಚಿತ್ರದುರ್ಗ ತಾಲೂಕಿನ ತುರುವನೂರು ಎಂಬ ಗ್ರಾಮದಲ್ಲಿ. ತಂದೆ ದುರ್ಗಪ್ಪ, ತಾಯಿ ದೊಡ್ಡಮ್ಮ. ತಾಯಿ ದೊಡ್ಡಮ್ಮ ಉತ್ತಮ ಹಾಡುಗಾರ್ತಿ. ತಾಯಿಯಿಂದಲೇ ವರಪ್ರಸಾದವೆಂಬಂತೆ ಕಲಿತ ಹಾಡುಗಳೇ ಮುಂದೆ ಓಬಳವ್ವ ರಾಜ್ಯ ಮಟ್ಟದಲ್ಲಿ ಹೆಸರು ಮಾಡಲು ಸಾಧ್ಯವಾಯಿತು. ಜೀಶಂಪ, ಪಿ.ಆರ್.ಟಿ. ಮೊದಲಾದ ಜಾನಪದ ವಿದ್ವಾಂಸರು ಇವರು ಹಾಡಿದ ದುರ್ಗದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಮುಂದೆ ಹೆಚ್.ಎಲ್. ನಾಗೇಗೌಡರು ಇವರ 'ಗುಣಸಾಗರಿ' ಕಥನಕವನವನ್ನು ಸಂಗ್ರಹಿಸಿದ್ದಾರೆ. ೧೯೮೮ರಲ್ಲಿ ಹೆಚ್. ಎಲ್. ನಾಗೇಗೌಡರ ನೇತೃತ್ವದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಆ ಮಟ್ಟಿಗೆ ಜನಪದ ಹಾಡುಗಾರಿಕೆಯ ಸಂಪನ್ನೆಯಾಗಿದ್ದ ಓಬಳವ್ವ ನರಸಿಂಹಯ್ಯ ಎಂಬುವರನ್ನು ವಿವಾಹವಾಗಿದ್ದರು. ಬರಗಾಲದ ಹಿನ್ನೆಲೆಯಲ್ಲಿ ಕೂಲಿ ಜೀವನಕ್ಕಾಗಿ ಭದ್ರಾವತಿ ತಾಲ್ಲೂಕಿನ ದಾನವಾಡಿಗೆ ಬಂದು ಅಲ್ಲಿಯೇ ೪೦ ವರ್ಷಕ್ಕೂ ಹೆಚ್ಚುಕಾಲ ನೆಲೆಸಿದ್ದರೂ ತಾನು ಕಲಿತ ಚಿತ್ರದುರ್ಗ ಸೀಮೆಯ ಹಾಡುಗಳನ್ನು ಹಾಡುವುದನ್ನು ಬಿಟ್ಟಿರಲಿಲ್ಲ. ಹಾಗಾಗಿ ಚಿತ್ರದುರ್ಗ ಸಂಸ್ಕೃತಿಯ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದ ಹಿರಿಮೆ ಓಬಳವ್ವನಿಗೆ ಸಲ್ಲುತ್ತದೆ.

ಓಬಳವ್ವ ಸೋಬಾನೆ ಹಾಡು, ಒಸಗೆ ಹಾಡು, ಮಂಗಳಾರತಿ ಹಾಡು, ಬಾಗಿಲು ತಡೆಯುವ ಪದ, ಕುಟ್ಟುವ-ಬೀಸುವ ಪದ, ಜರಿಯುವ ಪದಗಳನ್ನು ವಿಶೇಷವಾಗಿ ಹಾಡುತ್ತಿದ್ದರು. ಮದಕರಿ ನಾಯಕನನ್ನು ಕುರಿತು ಕಥನ ಗೀತೆಗಳನ್ನು ಹಾಡುತ್ತಿದ್ದರೆಂದು ಹೇಳಲಾಗುತ್ತದೆ. ತ್ರಿಪದಿಪದಗಳನ್ನು ವಿಶೇಷವಾಗಿ ಹಾಡುವ ಓಬಳವ್ವ ಮದುವೆ, ಮೈನೆರೆದ ಸಂದರ್ಭಗಳಲ್ಲಿ ಮೂರು ರಾತ್ರಿ ನಿರಂತರವಾಗಿ ಹಸಿರು ಚಪ್ಪರದ ಮುಂದೆ ಕುಳಿತು ಗುಣಸಾಗರಿ ಕಥನವನ್ನು ಹಾಡುತ್ತಿದ್ದುದು ವಿಶೇಷವಾಗಿದೆ. ಹಾಡಿನ ಸಂಪತ್ತನ್ನು ಸದಾ ನೆನಪಿನಂಗಳದಲ್ಲಿ ಇಟ್ಟುಕೊಂಡು ಸಾಂದರ್ಭಿಕವಾಗಿ ಬಿಚ್ಚಿಕೊಂಡು ಹಾಡುತ್ತಾ, ಹತ್ತಾರು ಸಮವಯಸ್ಕರಿಗೆ ಕಲಿಸಿರುವುದು ಓಬಳವ್ವನ ವಿಶೇಷವಾಗಿದೆ. ಓಬಳವ್ವ ಈಗ ದಿವಂಗತೆ. ಆದರೂ ಅಪಾರ ಕಲಾವಿದರು ಈಕೆಯನ್ನು ಗೌರವದಿಂದ ನೆನೆಯುತ್ತಿರುವುದು ಈಕೆಯ ಪ್ರಭಾವ ಪ್ರೇರಣೆಗಳನ್ನು ತೋರಿಸುತ್ತದೆ.

**ಓಬಳವ್ವ,**
**ತುರುವನೂರು. ಚಿತ್ರದುರ್ಗ ತಾಲೂಕು.**

## ಆಸಾದಿ ಹನುಮಂತಪ್ಪ

ಆಸಾದಿ ಒಂದು ಪ್ರಮುಖ ಜನಪದ ಕಲೆ. ಗ್ರಾಮ ಜೀವನದಲ್ಲಿ ಅಸಾಧರಣ ನಂಬಿಕೆ ಹೊಂದಿರುವ ಗ್ರಾಮದೇವತೆಯ ಹೊಗಳಿಕೆಗೆ, ತೆಗಳಿಕೆಗೆ ಆಸಾದಿ ಇರಲೇಬೇಕು. ಮಾರಿಯ ಮಗನಾಗಿ ತನ್ನನ್ನು ಬಿಂಬಿಸಿಕೊಳ್ಳುವ ಆಸಾದಿ ಮಾರಿಜಾತ್ರೆಯ ಪ್ರಮುಖ ಆಕರ್ಷಣೆ. ದೇವತೆಗಳನ್ನು ಹಾಡಿನ ಮೂಲಕ ವರ್ಣಿಸುವಾಗ ಸೊಗಸಾದ ಸಾಹಿತ್ಯ ಪ್ರಕಟವಾಗುತ್ತದೆ. 'ಆಸಂದಿ ಸೀಮ್ಯಾಳೆ ರೇಸಿಮೆ ಸೀರ್ಯೋಳೆ ಏಸೊಂದು ಬೆಳ್ಳಿ ಬೆಳೆಯೋಳೆ' ಎಂದು ಹಾಡುವುದಕ್ಕೆ ಸುರುಮಾಡಿದರೆ ಮೈರೋಮಾಂಚನಗೊಳ್ಳುತ್ತದೆ. ಆಸಾದಿಯ ಹಾಡಿಗೆ ಚೌಡಿಕೆವಾದ್ಯ ವಿಶೇಷವಾಗಿರಲೇಬೇಕು. ತಲೆಗೆ ರುಮಾಲು, ಕಚ್ಚೆಪಂಚೆ, ಅಂಗಿಯ ಮೇಲೊಂದು ಕೋಟು, ಹೆಗಲ ಮೇಲೆ ಕೆಂಪುವಸ್ತ್ರ, ಹಣೆಯಲ್ಲಿ ಭಂಡಾರ–ಇವಿಷ್ಟು ಆಸಾದಿಯು ವೇಷಭೂಷಣಗಳು. ಬಯಲುಸೀಮೆಯ ಪ್ರದೇಶಗಳಾದ ಚಿತ್ರದುರ್ಗ, ತುಮಕೂರು, ಕೋಲಾರ, ಹಾಸನ, ಬೆಂಗಳೂರು ಗ್ರಾಮಾಂತರ ತಾಲ್ಲೂಕುಗಳಲ್ಲಿ ಆಸಾದಿ ಕಲಾವಿದರು ಒಂದು ಕಾಲಕ್ಕೆ ವ್ಯಾಪಕವಾಗಿದ್ದು ಇಂದು ವಿರಳವಾಗುತ್ತಿದ್ದಾರೆ. ಆಸಾದಿ ಹನುಮಪ್ಪ ಚಿತ್ರದುರ್ಗ, ತುಮಕೂರು, ದಾವಣಗೆರೆ ಈ ಭಾಗಗಳ ಪ್ರಮುಖ ಆಸಾದಿ ಕಲಾವಿದ. ಆಸಾದಿ ಹನುಮಂತಪ್ಪ ಹುಟ್ಟಿದ್ದು ೧೯೨೫ರ ಸುಮಾರು. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಮುತ್ತುಗದೂರು ಗ್ರಾಮದಲ್ಲಿ. ಹನುಮಂತಪ್ಪನ ತಂದೆ ಕಲಿಯಪ್ಪ. ಇವರೂ ಚೌಡಿಕೆ ಆಸಾದಿ ಕಲಾವಿದರು. ತಂದೆಯೇ ಮೊದಲ ಗುರು. ಬಾಲಕತನದಿಂದಲೇ ತಮಟೆ, ಚೌಡಿಕೆ, ಹಲಗೆ ಬಾರಿಸುವುದನ್ನು ಕಲಿತರು. ಹತ್ತನೇ ವಯಸ್ಸಿನಿಂದ ಆಸಾದಿ ಹಾಡುಗಳನ್ನು ಅಭ್ಯಾಸ ಮಾಡತೊಡಗಿದರು.

ಹನುಂತಪ್ಪ ಅವರಿಗೆ ಹತ್ತು ಜನ ಮಕ್ಕಳು. ಒಂಬತ್ತು ಹೆಣ್ಣು, ಒಂದು ಗಂಡು. ಒಬ್ಬ ಮಗಳನ್ನು ದೇವಿಗೆ ಬಸವಿ ಬಿಟ್ಟಿದ್ದಾರೆ. ತನಗೆ ಗಂಡುಮಕ್ಕಳಾಗಲಿಲ್ಲ, ಈಕೆಯ

ಮಗನಿಗಾದರೂ ಆಸಾದಿ ಕಲೆ ಕಲಿಸಬೇಕೆಂಬ ಬಯಕೆ. ಆದರೆ ನಂತರ ಇವರಿಗೂ ಗಂಡುಮಗು ಜನಿಸಿದ್ದು ಆತನೂ ಚೌಡಿಕೆ ಕಲಾವಿದನಾಗಿ ತಂದೆಗೆ ಸಾಥಿ ಕೊಡುತ್ತಿದ್ದಾರೆ.

ಹನುಮಂತಪ್ಪ ಅದ್ಭುತ ಕಲಾವಿದ. ರಣಹಲಗೆ, ಚೌಡಿಕೆ ಎರಡೂ ಬಗೆಯ ವಾದ್ಯಗಳನ್ನು ಬಾರಿಸುತ್ತ ಮಾರಿ ಹಾಡುಗಳನ್ನು ಹಾಡುತ್ತಾರೆ. ರಣಹಲಗೆ ಕೈಗೆ ಸಿಕ್ಕಿದರೆ ಸಾಕು ಸಿಂಹನಾದದಂತೆ ಬಾರಿಸುತ್ತಾ, ಕಂಠಸಿರಿ, ಧ್ವನಿಸಂಯೋಜನೆ ಅದ್ಭುತ. ಹನುಮಂತಪ್ಪನಿಗೆ ಜಮೀನಿಲ್ಲ ಕೂಲಿಯಿಂದ ಜೀವನ ಸಾಗಣೆ. ಇಂದು ವಯಸ್ಸಾಗಿದೆ. ಕೈಯಲ್ಲಿ ಕಸುವಿಲ್ಲ. ಯಾವುದೇ ಊರಿನ ಮಾರಿದೇವತೆಯ ಜಾತ್ರೆಗಳಲ್ಲಿ ಹನುಮಂತಪ್ಪ ಹಾಡುಗಾರಿಕೆ ಇರಲೇಬೇಕೆಂಬ ನಂಬಿಕೆ ಹಾಗೂ ಅಷ್ಟರಮಟ್ಟಿಗೆ ಕಲಾಪ್ರಸಿದ್ಧಿ. ಬಡತನ, ಮೈ ನೋವು, ಸಂಕಟ ಎಲ್ಲವನ್ನೂ ಆಸಾದಿ ಕಲೆಯೊಂದಿಗೆ ಹೊಟ್ಟೆಗೆ ಹಾಕಿಕೊಂಡಿರುವ ಹನುಮಂತಪ್ಪನವರಿಗೆ ೧೯೮೩ರಲ್ಲಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕಲಾವಿದ' ಪ್ರಶಸ್ತಿ ನೀಡಿ ಗೌರವಿಸಿದೆ.

**ಆಸಾದಿ ಹನುಮಂತಪ್ಪ,**
**ಮುತ್ತುಗದೂರು, ಹೊಳಲ್ಕೆರೆ ತಾಲೂಕು.**

## ಬೋವಿ ಜಯಮ್ಮ

ಬೋವಿ ಜಯಮ್ಮ ಚಿತ್ರದುರ್ಗ ಸೀಮೆಯ ಹೆಸರಾಂತ ಹಾಡುಗಾರ್ತಿ. ೮೦ ವರ್ಷ ವಯೋಮಾನದಲ್ಲೂ ರಾತ್ರಿಯಿಡೀ ಹಾಡುವ, ತಲೆಕೂದಲಿನಷ್ಟು ಹಾಡು ಹಾಡುತ್ತಾರೆಂದರೆ 'ಅದಕ್ಕೂ ಹೆಚ್ಚು ಹಾಡುತ್ತೇನೆ ಸ್ವಾಮಿ' ಎಂದು ಛಲದಿಂದ ನುಡಿಯುವುದೇ ಇವರ ವಿಶೇಷ.

ಹುಟ್ಟಿದ್ದು ಚಿತ್ರದುರ್ಗದ ಕೆಳಕೋಟೆಯಲ್ಲಿ. ತಂದೆ ತಿಮ್ಮಪ್ಪ, ತಾಯಿ ಎಲ್ಲಮ್ಮ. ಇವರಿಬ್ಬರೂ ಓದಿಲ್ಲ. ಅಜ್ಜಿ ದೊಡ್ಡಹನುಮಕ್ಕ ಮಹಾನ್ ಹಾಡುಗಾರ್ತಿ. ಗುಣಸಾಗರಿ, ಮದುಗದ ಕೆಂಪಮ್ಮ, ಈರೋಜಿ, ಕಾಡುಸಿದ್ದಮ್ಮ, ಬಾಲನಾಗಮ್ಮ ಈ ಕಥನ ಗೀತೆಗಳನ್ನು ಕಲಿತದ್ದು ಈ ಅಜ್ಜಿಯಿಂದಲೇ ಎನ್ನುತ್ತಾರೆ. ತಮ್ಮ ೧೪ನೇ ವಯಸ್ಸಿನಲ್ಲಿಯೇ ಇದೇ ಊರಿನ ಲಕ್ಷ್ಮಣಪ್ಪ ಎಂಬುವರೊಂದಿಗೆ ವಿವಾಹವಾದ ಜಯಮ್ಮ ನಾಲ್ಕು ಹೆಣ್ಣು, ಆರು ಗಂಡು–ಒಟ್ಟು ಹತ್ತು ಮಕ್ಕಳ ತಾಯಿ. ಗಂಡ ಲಕ್ಷ್ಮಣಯ್ಯ ಕುಲ ಮೂಲ ಕಸುಬಾದ ಬಂಡೆ ಸೀಳುವುದು, ಬಾವಿ ಕಲ್ಲುಕಟ್ಟುವ ಕಾಯಕ. ಕೊನೆಯ ದಿನಗಳಲ್ಲಿ ಕಂಟ್ರಾಕ್ಟರ್, ಮೇಸ್ತ್ರಿಯೂ ಆಗಿದ್ದರು. ಲಕ್ಷ್ಮಣಯ್ಯನವರ ತಂದೆ ಬೋವಿ ದಾಸಪ್ಪನವರೂ ಬಂಡೆಗೆ ದೇಶೀಮದ್ದಿಟ್ಟು ಬಂಡೆ ಸೀಳುವುದರಲ್ಲಿ ಹೆಸರುವಾಸಿ. ಜಯಮ್ಮನವರ ಹತ್ತು ಮಕ್ಕಳಲ್ಲಿ ಮೊದಲ ಮಗ ವೆಂಕಟೇಶ ಹಾಡುಗಾರ, ವಾದ್ಯ ನುಡಿಸುತ್ತಾರೆ. ಕಲಾಸಂಘಟಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಜಯಮ್ಮ ಮೊದಲಮೊದಲು ತರಕಾರಿ ವ್ಯಾಪಾರ ಮಾಡುತ್ತಿದ್ದರು. ನಂತರ ರೈತಾಪಿ ಬದುಕಿನ ಕೂಲಿಕೆಲಸಕ್ಕೆ ಹೋಗುತ್ತಿದ್ದರು. ನಂತರ ಹಾಡುಗಾರಿಕೆಯನ್ನೇ ಉದ್ಯೋಗ ಮಾಡಿಕೊಳ್ಳುವ ಮಟ್ಟಕ್ಕೆ ಬೆಳೆದರು. ಇವರ ಹಾಡುಗಾರಿಕೆಯನ್ನು ಮೊದಲಿಗೆ ಗುರುತಿಸಿದವರು ಪಿ.ಆರ್. ತಿಪ್ಪೇಸ್ವಾಮಿ. ಚಳ್ಳಕೆರೆಯ ನಾಯಕನಹಟ್ಟಿ, ತಿಪ್ಪೇಸ್ವಾಮಿ ಜಾತ್ರೆಯ ಸಂದರ್ಭದಲ್ಲಿ ಹಾಡಿದ ಹಾಡಿನಿಂದ ಗುರುತಿಸಿ ಚಳ್ಳಕೆರೆ ಕಲಾಸಂಘದ

ಆಶ್ರಯದಲ್ಲಿ 'ಮದಕೇರಿನಾಯಕ'ನ ಕಥೆಯನ್ನು ರಾತ್ರಿಪೂರಾ ಮಾಡಿಸಿದರು. ಅಲ್ಲಿಂದ ದಿನಬೆಳಗಾದರೆ ಹಾಡುವುದಕ್ಕೆ ಆಹ್ವಾನ ತಪ್ಪದೇ ಬರುತ್ತವೆ. ಈ ಇಳಿವಯಸ್ಸಿನಲ್ಲಿಯೂ ಕಾರಿನಲ್ಲಿ ಕೂರಿಸಿಕೊಂಡು ಹಾಡುವುದಕ್ಕೆ ಕರೆದುಕೊಂಡು ಹೋಗುತ್ತಿರುವುದು ಇವರು ಹಾಡುಗಾರಿಕೆಯಲ್ಲಿ ಮಾಡಿರುವ ಸಾಧನೆಯ ಪ್ರತೀಕವಾಗಿದೆ.

ಜಯಮ್ಮ ಹಾಡುಗಾರಿಕೆಯ ಎಲ್ಲ ಪ್ರಕಾರಗಳಲ್ಲೂ ಹಾಡುತ್ತಾರೆ. ಕೋಲಾಟ, ಕೃಷಿ, ಮಳೆ, ಮದುವೆ, ವಸಗೆ, ಬಾಣಂತಿಪದ, ಸೋಬಾನೆ ಪದ, ಮೈನೆರೆಯುವುದು, ಹೊಗಳುವ ಪದ, ಜರಿಯುವ ಪದ ಇವರ ಜನಪ್ರಿಯ ಹಾಡುಗಳು. ಹಾಡಿಸುವವರು ಮೊದಲೇ ಅವರ ಹೆಸರು, ಹುಡುಗ–ಹುಡುಗಿ, ಬೀಗರು ಅಥವಾ ಸಾವಿನ ವಿವರವನ್ನು ನೀಡಬೇಕು.

ಅದಕ್ಕೆ ತಕ್ಕಂತೆ ಪದಕಟ್ಟಿ ಹಿಮ್ಮೇಳ, ಮುಮ್ಮೇಳಗಳ ಮೂಲಕ ಸಾಂದರ್ಭಿಕವಾಗಿ ಹಾಡುತ್ತಾ ಸಾಗುವುದು ಜಯಮ್ಮ ತಂಡದ ವಿಶೇಷ. ಸಾವಿನ ಪದಗಳ ಸರದಾರೆ, ಸಾವಿನ ಸೂತಕದಲ್ಲಿ ಕಳೆಕಟ್ಟಬಲ್ಲ ಹಾಡುಗಾರಿಕೆಗೆ ಇವರು ಹೆಸರುವಾಸಿ.

ಚಿತ್ರದುರ್ಗದ ಸಮಗ್ರ ಇತಿಹಾಸವನ್ನು ಕಥನ ಗೀತೆಯ ಮೂಲಕ ಹಾಡಬಲ್ಲ ಏಕೈಕ ಅಪರೂಪದ ಹಾಡುಗಾರ್ತಿ ಎಂಬ ವಿಶೇಷ ಗೌರವ, ಹಿರಿಮೆಗೆ ಪಾತ್ರರಾಗಿರುವ ಜಯಮ್ಮ ಮದಕರಿನಾಯಕ, ಜುಂಜಪ್ಪ, ಮೈಲಾರಲಿಂಗಪ್ಪ, ತಿಪ್ಪೇಸ್ವಾಮಿ, ಗೌರಸಂಗ್ರದ ಮಾರಮ್ಮ, ಗುಣಸಾಗರಿ, ಮದಗದ ಕೆಂಚಮ್ಮ, ಉಚ್ಚಂಗಿದುರ್ಗ ಇವುಗಳ ಬಗೆಗೆ ಕಥನ ಗೀತೆಗಳನ್ನು ಹಾಡುತ್ತಾರೆ. ಕೋಲು ಪದ ಹಾಗೂ ಕಥನ ಗೀತೆ, ಸೋಬಾನೆ ಈ ಮೂರು ಧಾಟಿಯಲ್ಲಿ ಈ ಪದಗಳನ್ನು ಹಾಡುವುದು ಇವರ ವಿಶೇಷ. ೧೯೬೦ರಿಂದಲೂ ಹಾಡುಗಾರಿಕೆಗಾಗಿ ಗುರುತಿಸಿಕೊಂಡಿರುವ ಜಯಮ್ಮ ಚಿತ್ರದುರ್ಗದ ಮುರುಘಾಮಠದಲ್ಲಿ ಮೊದಲು ಹಾಡಿದರು. ನಂತರ ಜಿಲ್ಲಾ ಸಾಂಸ್ಕೃತಿಕ ಉತ್ಸವಗಳಲ್ಲಿ ಮದಕರಿನಾಯಕನ ಕಥೆಯನ್ನು ಕಡ್ಡಾಯವಾಗಿ ಹಾಡುತ್ತಾ ಬಂದರು. ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಸತತವಾಗಿ ಮೂರು ಬಾರಿ, ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ಮೂರು ಬಾರಿ ಹಾಡಿರುವ ಇವರು ಕುವೆಂಪು (ಆಗಿನ ಮೈಸೂರು ವಿವಿ)ಯಲ್ಲಿ ಜಾನಪದ ವಿಭಾಗ ಏರ್ಪಡಿಸಿದ್ದ ಜಾನಪದ ಸಂಗೀತೋತ್ಸವ, ವಿಚಾರ ಸಂಕಿರಣಗಳಲ್ಲಿ ಖಾಯಂ ಆಹ್ವಾನಿತ ಕಲಾವಿದೆಯಾಗಿ ಕಾರ್ಯಕ್ರಮ ನೀಡುತ್ತಾ ಬಂದರು. ಮೊದಲಿಗೆ ಧಾರವಾಡ ಆಕಾಶವಾಣಿ (೧೯೮೨), ಮೈಸೂರು (೧೯೮೬), ಬೆಂಗಳೂರು, ಭದ್ರಾವತಿ (೧೯೮೬) ಚಿತ್ರದುರ್ಗ ಹೀಗೆ ಕಳೆದ ೨೩ ವರ್ಷಗಳಿಂದಲೂ ಸತತವಾಗಿ ಹಾಡುತ್ತಾ ಬರುತ್ತಿದ್ದಾರೆ. ಚಿನ್ನಮ್ಮ, ಮಳಲಿ ಈರಮ್ಮ, ಸತ್ಯಮ್ಮ, ಪಾರ್ವತಮ್ಮ ಹಾಗೂ ಶಾರದಮ್ಮ ಇವರ ಹಾಡುಗಾರಿಕೆಗೆ ಹಿಮ್ಮೇಳ ಕಲಾವಿದರು. ಅಪೂರ್ವ ಹಾಡುಗಾರ್ತಿಯಾಗಿರುವ ಜಯಮ್ಮನವರಿಗೆ ನಾಡಿನಾದ್ಯಂತ ಗೌರವಸನ್ಮಾನಗಳು

ಸಂದಾಯವಾಗಿವೆ. ೧೯೮೫ರಲ್ಲಿ ಮೈಸೂರು ದಸರಾ ವಸ್ತು ಪ್ರದರ್ಶನ ಕಲಾಗೌರವ, ೧೯೯೧ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ೧೯೯೮ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲಭಾರತ ಜಾನಪದ ಸಮಾವೇಶದಲ್ಲಿ 'ಜನಪದ ಕಲಾಶ್ರೀ ಜಯಮ್ಮ', ಮುರುಘಾಮಠದ ಗೌರವ, ಧರ್ಮಸ್ಥಳ, ಆದಿಚುಂಚುನಗಿರಿ ವಿಶೇಷ ಜಾನಪದ ಸನ್ಮಾನ, ಗೌರವಗಳು ಸಂದಾಯವಾಗಿವೆ. ೨೦೦೫ ರಿಂದ ೨೦೦೮ರ ಅವಧಿಯಲ್ಲಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರೂ ಆಗಿದ್ದರು. ಹಾಡುತ್ತಲೇ ಬದುಕು ಸವೆಸಿದ ಈ ಅವಿದ್ಯಾವಂತೆ ಜನಪದ ಅಜ್ಜಿ ಭಾಗವಹಿಸುವ ಕಾರ್ಯಕ್ರಮವೆಂದರೆ ಸಂಗೀತದ ಸುಗ್ಗಿ ಎಂದೇ ಪರಿಭಾವಿಸುವ ಚಿತ್ರದುರ್ಗ ಸೀಮೆಗೆ ಇವರೊಂದು ಇತಿಹಾಸ, ಸಂಸ್ಕೃತಿ, ಕಲೆಗಳ ಸಮನ್ವಯಸೇತು.

ಶ್ರೀಮತಿ ಬೋವಿ ಜಯಮ್ಮ,
ಜನಪದ ಕಲಾವಿದೆ, ಕೆಳಕೋಟೆ, ಚಿತ್ರದುರ್ಗ.

## ಕೋಲಾಟದ ಚಿತ್ರಯ್ಯ

ಚಿತ್ರಯ್ಯ ಕೋಲಾಟ ಕಲೆಯ ಹೆಸರಾಂತ ಕಲಾವಿದ. ಹಿರಿಯೂರು ತಾಲ್ಲೂಕಿನ ರಂಗನೇಹಳ್ಳಿ ಗೊಲ್ಲರಹಟ್ಟಿಯ ಈ ಕಲಾವಿದನಿಗೆ ೭೦ ವರ್ಷಗಳ ಪ್ರಾಯ. ತನ್ನ ೧೧ನೇ ವಯಸ್ಸಿನಿಂದಲೇ ಕೋಲಾಟ ಕಲೆಯನ್ನು ಕಲಿಯುತ್ತಾ ಬಂದವರು. ರಂಗೇನಹಳ್ಳಿ ಗೊಲ್ಲ ಜನಾಂಗದ ಹಿರಿಕ ಹಾಗೂ ಜನಪದ ಕಲಾವಿದ ಚೆನ್ನಂಗಿ ತಿಮ್ಮಜ್ಜನವರೇ ಇವರಿಗೆ ಗುರುಗಳು. ಬರಗಾಲ ಬಂದು, ಕುರಿ ದನಗಳೊಂದಿಗೆ ಪರಸ್ಥಳಕ್ಕೆ ಹುಲ್ಲು ನೀರಿಗಾಗಿ, ಜನರು ಅನ್ನ ಆಹಾರಕ್ಕಾಗಿ ಭದ್ರಾವತಿ ಕಡೆ ಹೋದರು. ಆಗ ಊರಿನಲ್ಲಿದ್ದ ಹಿರೀಕ ಚನ್ನಂಗಿ ತಮ್ಮಜ್ಜ, ಹಟ್ಟಿಯ ಭದ್ರತೆ, ಕಳ್ಳಕಾಕರ ಕಾಟದಿಂದ ಪಾರುಮಾಡಲು ಇದ್ದ ಗಂಡಸರನ್ನೇ ನಿತ್ಯವೂ ಸಂಜೆಗೆ ಕಲೆಹಾಕಿ ರಾತ್ರಿಯೆಲ್ಲ ತಪ್ಪದೆ ಕೋಲಾಟನ್ನು ಆಡಿಸುತ್ತಿದ್ದರು. ಇವರ ಸಮರ್ಥ ಪಾಂಡಿತ್ಯದಲ್ಲಿ ಪಳಗಿದ ಹನ್ನೆರಡು ಜನ ಕೋಲಾಟ ಕಲಾವಿದರಲ್ಲಿ ಕೋಲಾಟದ ಚಿತ್ರಯ್ಯನವರೂ ಒಬ್ಬರು. ಚಿತ್ರದುರ್ಗ, ತುಮಕೂರು ಈ ಜಿಲ್ಲೆಗಳ ಕಾಡುಗೊಲ್ಲರ ಹಟ್ಟಿಗಳು ಜನಪದ ಹಾಡು ಗೀತೆಗಳ ಆಗರ. ಕೋಲಾಟವಿಲ್ಲದ ಹಟ್ಟಿ ಇಲ್ಲ, ಕೋಲು ಹಾಕದ ಯುವಕರಿಲ್ಲ. ಅಷ್ಟೊಂದು ಜನಪ್ರಿಯ ಅಗತ್ಯ ಕಲೆ ಎಂಬ ಭಾವನೆ ಈ ಜನಾಂಗದಲ್ಲಿದೆ. ಇದಕ್ಕೆ ಕಾಡುಗೊಲ್ಲರ ಹಿರಿಕ ಇಕ್ಕನೂರು ನಿಂಗಜ್ಜ ಹೇಳುವ ಕಥೆಯೂ ಸ್ವಾರಸ್ಯಕರವಾಗಿದೆ.

ಶ್ರೀಕೃಷ್ಣನನ್ನು ಸಾಕುತಾಯಿ ಯಶೋದೆ ಗೊಲ್ಲರಹಟ್ಟಿಗೆ ತಂದಳು. ಆಗ ಮಗುವಿನ ಲಾಲನೆ-ಪಾಲನೆಯ ಜೊತೆಗೆ ಮನರಂಜನೆಯನ್ನು ಒದಗಿಸುವುದೂ ಮುಖ್ಯವಾಯಿತು. ಆಗ ಗೊಲ್ಲರಹಟ್ಟಿಯಲ್ಲಿ ಮೊದಲು ಹೆಂಗಸರು ಬಣ್ಣದ ಕೋಲು ಆಡಿದರು. ಕೃಷ್ಣನಿಗೆ ಪರಮಪ್ರಿಯವಾಯಿತು. ಗೊಲ್ಲರಹಟ್ಟಿಯ ಯುವಕರೊಂದಿಗೆ ಮೊದಲು ಕೃಷ್ಣಪರಮಾತ್ಮ ಬಣ್ಣದ ಕೋಲಾಟ ಆಡಿದನು. ಇದೇ ಪರಂಪರೆ

ಮುಂದುವರಿದು ನಮ್ಮ ಜನಾಂಗದ ಪ್ರಮುಖ ಕಲೆಯಾಗಿ ಕೋಲಾಟ ಬಂದಿದೆ ಎಂದು ಹೇಳುತ್ತಾರೆ. ಕೋಲಾಟಕ್ಕೆ ಕಣಿಗಲೆ, ಆಲೆ, ಕಾರೆ, ಗಟ್ಟಿ ಬಿದಿರಿನ ಕೋಲು ಅದಕ್ಕೆ ಗೆಜ್ಜೆಯನ್ನು ಬಳಸುತ್ತಾರೆ. ಗೊಲ್ಲರು ಮದುವೆ, ಜಾತ್ರೆ, ದೇವರ ಉತ್ಸವವಲ್ಲದೆ ವಾರದ ವಿಶೇಷ ಪೂಜೆಯ ದಿನಗಳಲ್ಲಿ ಕಡ್ಡಾಯವಾಗಿ ಕೋಲುಮೇಳವನ್ನು ಆಡುತ್ತಾರೆ.

ಕೋಲಾಟದ ಚಿತ್ರಯ್ಯನವರಿಗೆ ೨೦ನೇ ವಯಸ್ಸಿಗೆ ನಾಗಮ್ಮ ಎಂಬುವವರೊಂದಿಗೆ ವಿವಾಹವಾಯಿತು. ತಿಪ್ಪೇಸ್ವಾಮಿ ಎಂಬ ಒಬ್ಬ ಮಗನಿದ್ದಾನೆ. ಮಗನನ್ನು ಪಿಯುಸಿ ಹಂತದವರೆಗೆ ಓದಿಸಿದ್ದಾರೆ. ಈತನಿಗೆ ವಿವಾಹವೂ ಆಗಿ ನಾಲ್ಕು ಜನ ಮಕ್ಕಳಿದ್ದಾರೆ. 'ಆಸ್ತಿ ಇಲ್ಲದಿದ್ದರೂ ಕಲಿತ ಕೋಲುಕಲೆ ನನಗೆ ಗುರುಸ್ಥಾನ ತಂದುಕೊಟ್ಟಿದೆ' ಎನ್ನುವ ಚಿತ್ರಯ್ಯ ಹಿರಿಯೂರು, ಚಳ್ಳಕೆರೆ, ಸಿರಾ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳ ಹಲವು ಗೊಲ್ಲರಹಟ್ಟಿಗಳಿಗೆ ಬಂದು ಕೋಲಾಟ ಕಲಿಸುತ್ತಾರೆ. ಅವರು ಸಂಭಾವನೆಯಾಗಿ ಕೊಡುವ ರಾಗಿ, ಭತ್ತ, ತೆಂಗುಗಳನ್ನು ಪಡೆಯುತ್ತಾರೆ.

ಹಿರಿಯೂರು ತಾಲೂಕು ರಂಗೇನಹಳ್ಳಿಯಲ್ಲಿ ಒಂದು ೧೦೦ಕ್ಕೂ ಹೆಚ್ಚು ಕೋಲಾಟ ಕಲಾವಿದರನ್ನು ರೂಪಿಸಿದ್ದಾರೆ. ಇಂದಿಗೂ ಕೋಲಾಟ ಕಲಾಮಂಡಲಿಯಲ್ಲಿ ಜೂಲಪ್ಪನವರ ನಿಂಗಪ್ಪ, ಚಿತ್ರಲಿಂಗಪ್ಪ, ಧೂಳಿರಜ್ಜ, ತಿಪ್ಪೇಸ್ವಾಮಿ, ಚಿತ್ರಯ್ಯ, ಮುದಿಯಪ್ಪ, ಶಿವಣ್ಣ, ಚಿಕ್ಕಣ್ಣ, ಈರಣ್ಣ, ಮುದಿಯಣ್ಣ ಈ ಕಲಾವಿದರ ಒಂದು ತಂಡವಿದೆ. ಪರ್ತಿಕೋಟೆ ಪಿ.ಆರ್. ತಿಪ್ಪೇಸ್ವಾಮಿ ಅವರ ನೇತೃತ್ವದಲ್ಲಿ ಉದ್ಘಾಟನೆಗೊಂಡ ಈ ಕಲಾತಂಡ ಮೈಸೂರಿನ ದಸರಾ ಉತ್ಸವ, ಪರ್ತಿಕೋಟೆಯಲ್ಲಿ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಚಿತ್ರದುರ್ಗ ಜಿಲ್ಲಾ ಕಲಾಮೇಳಗಳಲ್ಲಿ ವಿಶೇಷ ಮೆಚ್ಚುಗೆ ಪಡೆದರು. ಆರಂಭದಲ್ಲಿ ಜಿಲ್ಲಾ ಯುವಜನ ಮೇಳಗಳಲ್ಲಿ ಭಾಗವಹಿಸುತ್ತಾ ಬಂದರು. ಈಗ ಸರ್ಕಾರದ ಸಾಂಸ್ಕೃತಿಕ ಸಭೆ, ಸಮಾರಂಭಗಳಲ್ಲಿ ಆಹ್ವಾನಿತ ಕಲಾವಿದರಾಗಿ ಭಾಗವಹಿಸುತ್ತಿದ್ದಾರೆ. ಕರ್ನಾಟಕದ ಪ್ರಮುಖ ಗಣಪತಿ ಉತ್ಸವ, ಕನ್ನಡ ರಾಜ್ಯೋತ್ಸವ ಸಮಾರಂಭಗಳಲ್ಲಿ ಈ ತಂಡ, ಚಿತ್ರಯ್ಯನವರ ಮಾರ್ಗದರ್ಶನದಲ್ಲಿ ಕೋಲುಮೇಳವನ್ನು ನೀಡುತ್ತಾ ಬಂದಿದೆ.

ಚಿತ್ರದುರ್ಗದ ಮುರುಘಮಠ, ಸಾಣೆಹಳ್ಳಿಯ ತರಳಬಾಳುಮಠ, ಕನಕ ಗುರುಪೀಠ ಹೊಸದುರ್ಗ ಇವು ಚಿತ್ರಯ್ಯನವರಿಂದ ಕೋಲಾಟ ಪ್ರದರ್ಶನ ಏರ್ಪಡಿಸಿ ಇವರನ್ನು ಗೌರವಿಸಿವೆ. ೨೦೦೧ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಇವರ ಕೋಲಾಟ ಕಲೆಗಾಗಿ 'ಜಾನಪದ ಜ್ಞಾನ ವಿಜ್ಞಾನ' ಪ್ರಶಸ್ತಿ ನೀಡಿ ಗೌರವಿಸಿದೆ. ವಯಸ್ಸಿನ ಕಾರಣದಿಂದ ಸುಸ್ತಾದವರಂತೆ ಕಾಣುವ ಚಿತ್ರಯ್ಯ, ಹೆಗಲಮೇಲಣ ವಲ್ಲಿಯನ್ನು ಸೊಂಟಕ್ಕೆ ಬಿಗಿದು ಕೋಲುಹಿಡಿದರೆ, ಇಪ್ಪತ್ತರ ಯುವಕರನ್ನೂ ನಾಚಿಸುವಂತೆ ಕೋಲಾಟ ಆಡುತ್ತಾರೆ. ಇದೇ ಇವರ ವಿಶೇಷ.

ಕೋಲಾಟದ ಚಿತ್ರಯ್ಯ, ರಂಗೇನಹಳ್ಳಿ ಅಂಚೆ, ಹಿರಿಯೂರು ತಾಲೂಕು.

## ಪೆನ್ನಪ್ಪ

ಕೋನಸಾಗರ ಪೆನ್ನಪ್ಪ ಹುಟ್ಟಿದ್ದು ಮೊಳಕಾಲ್ಮೂರು ತಾಲೂಕಿನ ಕೋನಸಾಗರ ಹಳ್ಳಿಯಲ್ಲಿ. ಆಂಧ್ರದ ರಾಮಪುರಕ್ಕೆ ಸಮೀಪದ ಈ ಪ್ರದೇಶ ತೆಲುಗು, ಕನ್ನಡ ಮಿಶ್ರನೆಲ. ಬರಗಾಲ ಪ್ರದೇಶವಾದುದರಿಂದ ಆಂಧ್ರ, ಕರ್ನಾಟಕದ ಒಡನಾಟ ಇಲ್ಲಿ ಹೆಚ್ಚು. ಹಾಗಾಗಿ ಇಲ್ಲಿನ ಜನ ದ್ವಿಭಾಷಿಗಳು. ಈ ಎರಡೂ ಪ್ರದೇಶಗಳ ಸಂಸ್ಕಾರ ಇಲ್ಲಿನ ಹಾಡು, ಕತೆ, ಕುಣಿತ, ವಾದ್ಯ ವಿಶೇಷಗಳಲ್ಲಿ ಪ್ರಕಟವಾಗುತ್ತದೆ. ಈ ಬಗೆಯ ಸಂಸ್ಕಾರದೊಂದಿಗೆ ಬೆಳೆದ ಪೆನ್ನಪ್ಪ, ಈ ಭಾಗದ ಅದ್ಭುತ ಸೋಬಾನೆ ಕಲಾವಿದ. ಹೆಂಗಸರೊಂದಿಗೆ ಹೆಂಗಸಾಗಿ, ಗಂಡಸರೊಂದಿಗೆ ಗಂಡಸಾಗಿ ಹಾಡುವ ಕಲಾವಿದ. ಒಮ್ಮೊಮ್ಮೆ ಒಂಟಿಯಾಗಿಯೂ ಹಾಡುತ್ತಾರೆ.

ತಂದೆ ದಾಸರಯ್ಯ ಯಕ್ಷಗಾನ ಕಲಾವಿದರು. ದುಶ್ಯಾಸನ ಕತೆ, ಲವಕುಶ ಮೊದಲಾದ ಯಕ್ಷಗಾನಗಳಲ್ಲಿ ಪಾತ್ರಧಾರಿ. ಹಿಮ್ಮೇಳ ಸಂಗೀತಗಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರ ಮಗನಾಗಿ ಬೆಳೆದ ಪೆನ್ನಪ್ಪ, ತಾಯಿ ನರಸಮ್ಮ ಹಾಡುತ್ತಿದ್ದ ಸೋಬಾನೆ, ಅರ್ಜುನ ಜೋಗಿ ಜೋಗುಳದ ಹಾಡುಗಳನ್ನು ಎಳವೆಯಲ್ಲಿಯೇ ಕಲಿತರು. ದೊಡ್ಡವರಾಗಿ ಕೂಲಿ ಕೆಲಸಕ್ಕೆ ಹೋಗುವಾಗ, ಹೊಲದ ಕೆಲಸದ ಮಧ್ಯೆ ಹಾಡುತ್ತಿದ್ದ ತಿಪ್ಪೇಸ್ವಾಮಿ, ಮದಕರಿನಾಯಕ, ಗೌರಸಂದ್ರದ ಮಾರಮ್ಮ, ಕೋಲಾರದಮ್ಮನ ಹಾಡು ಇವುಗಳನ್ನು ಪರಿಸರದಿಂದ ಕಲಿತರು.

ದೇವರಕಾರ್ಯ, ಒಸಗೆ, ಜಾತ್ರೆ ಸಂದರ್ಭಗಳಲ್ಲಿ ಆಹ್ವಾನಿತರಾಗಿ ಹಾಡುವ ಇವರನ್ನು ಮೊಟ್ಟಮೊದಲು ಗುರುತಿಸಿದವರು ಪಿ. ಆರ್. ತಿಪ್ಪೇಸ್ವಾಮಿ. ಮೈಸೂರಿನ ದಸರಾ ಮಹೋತ್ಸವ, ದಸರಾ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಪೊನ್ನಪ್ಪ ಹಾಗೂ ಇತರೆ ಮೂವರು ಹೆಂಗಸರೊಂದಿಗೆ ಸೋಬಾನೆ ಸಂಜೆ ಕಾರ್ಯಕ್ರಮದಲ್ಲಿ ಪೊನ್ನಪ್ಪ ಹಾಗೂ

ಇತರೆ ಮೂವರು ಹೆಂಗಸರೊಂದಿಗೆ ಸೋಬಾನೆ ಸಂಜೆ ಕಾರ್ಯಕ್ರಮ ಏರ್ಪಡಿಸಿದ್ದರು. ಮುಂದೆ ೧೯೯೬ರಲ್ಲಿ ಡಾ|| ಎಚ್. ಜೆ. ಲಕ್ಕಪ್ಪಗೌಡರ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಶ್ರೇಷ್ಠ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರು, ಭದ್ರಾವತಿ, ಚಿತ್ರದುರ್ಗ ಆಕಾಶವಾಣಿಗಳಿಂದಲೂ ಜನಪದ ಗೀತಗಾಯನ ನಡೆಸಿಕೊಟ್ಟಿರುವ ಪೆನ್ನಪ್ಪನವರ ಆರೋಗ್ಯ ದುಃಸ್ಥಿತಿಯಲ್ಲಿದೆ. ಸರ್ಕಾರದ ಮಾಸಾಶನ ಬಿಟ್ಟರೆ ಬೇರೆನನ್ನೂ ಕಾಣದ, ಈ ಕಲಾವಿದರಿಗೆ ಇದೀಗ ೮೦ರ ಪ್ರಾಯ. ಮಕ್ಕಳು, ಮೊಮ್ಮಕ್ಕಳು ಇವೆ, ಆದರೆ ಅವರ ಪಾಡಿಗೆ ಅವರು ಎಂಬಂತೆ. ಹಾಗಾಗಿ ಜೀವನದ ಮುಸ್ಸಂಜೆಯಲ್ಲಿರುವ ಈ ಬಗೆಯ ಕಲಾವಿದರಿಗೆ ಸಾರ್ವಜನಿಕರ, ಸರ್ಕಾರದ ಆಸರೆ ಅನಿವಾರ್ಯವಾಗಿದೆ.

ಪೆನ್ನಪ್ಪ, ಕೋನಸಾಗರ,
ಮೊಳಕಾಲ್ಮೂರು ತಾಲೂಕು.

## ಚನ್ನಬಸಪ್ಪ

ಷಹನಾಯ್ ಬಯಲುಸೀಮೆಯ ವಿಶಿಷ್ಟ ವಾದ್ಯ ಪ್ರಕಾರ ೨–೩ ಅಡಿ ಉದ್ದದ ಬಿದಿರುಕೋಲಿಗೆ ಕೊಳವೆ ಮಾಡಿ, ೨–೩ ರಂಧ್ರ ಕೊರೆದು ಬಾಯಿಂದ ಉಸಿರುಕಟ್ಟಿ ನುಡಿಸುವ ಅಪೂರ್ವ ವಾದನ. ಯಕ್ಷಗಾನದಲ್ಲೂ ಇದೇ ಬಗೆಯ ವಾದನವನ್ನು ಬಳಸುತ್ತಾರೆ. ಶೃತಿಯ ಏಕನಾದದ ಹಿನ್ನೆಲೆಯಲ್ಲಿ ಆಲಾಪ ತೆಗೆಯುವ, ಅನನ್ಯತೆ, ಸರಳ ಲಯ, ಜನಪ್ರಿಯ ಭಾವನೆಗಳ ನುಡಿಸುವಿಕೆಯಿಂದಾಗಿ ಗಾನಕಿನ್ನರ ಲೋಕವನ್ನೇ ಸೃಷ್ಟಿಸುವ ಅಪೂರ್ವತೆ ಇವರ ಕಲೆಗಿದೆ.

ಚನ್ನಬಸಪ್ಪ ಹುಟ್ಟಿದ್ದು ೧೯೩೭ ಚಳ್ಳಕೆರೆ ತಾಲೂಕು ಮುತ್ಸಮುದ್ರ ಗ್ರಾಮದಲ್ಲಿ. ಆದಿದ್ರಾವಿಡ ಜನಾಂಗಕ್ಕೆ ಸೇರಿದ ಈತ ಈ ಕಲೆಯನ್ನು ೧೫ ವರ್ಷದ ಬಾಲಕನಿರುವಾಗಲೇ ಕಲಿತ ಬಗ್ಗೆ ಹೇಳುತ್ತಾರೆ. ಷಹನಾಯ್ ವಾದ್ಯದ ಜೊತೆಗೆ ನಾಗಸ್ವರ, ವಾಲಗ, ಅರೆವಾದ್ಯವನ್ನು ಬಾರಿಸುತ್ತಾರೆ. ಧಾರ್ಮಿಕ, ಸರ್ಕಾರಿ ಸಭೆ–ಸಮಾರಂಭಗಳಲ್ಲಿ ಇಂದಿಗೂ ತಂಡದೊಂದಿಗೆ ಭಾಗವಹಿಸುತ್ತಾ ಗಡಿನೆಲದಲ್ಲಿ ಸಾಂಸ್ಕೃತಿಕ ಸೌರಭ ಪ್ರಚುರಪಡಿಸುತ್ತಿರುವುದು ಇವರ ವಿಶೇಷವಾಗಿದೆ.

ಚನ್ನಬಸಪ್ಪ ಹಲವು ಸಭೆ ಸಮಾರಂಭಗಳಲ್ಲಿ ಷಹನಾಯ್ ಕಲಾವಿದರಾಗಿ ಭಾಗವಹಿಸಿದ್ದಾರೆ. ಚಿತ್ರದುರ್ಗದ ಮುರುಘಾಮಠದ ಶರಣಸಂಸ್ಕೃತಿ ಉತ್ಸವ, ದುರ್ಗೋತ್ಸವ, ಹಂಪಿ ಉತ್ಸವ, ಕನ್ನಡ ರಾಜ್ಯೋತ್ಸವ ಇವು ಮುಖ್ಯವಾದವುಗಳು. ಪಿ.ಆರ್. ತಿಪ್ಪೇಸ್ವಾಮಿ ಅವರ ಸಂಪರ್ಕದಿಂದಾಗಿ ಮೈಸೂರಿನ ದಸರಾ ಉತ್ಸವದಲ್ಲೂ ಕಲಾಪ್ರದರ್ಶನ ನೀಡಿ ಸೈ ಎನಿಸಿಕೊಂಡ ಹೆಮ್ಮೆ ಈತನದು.

'ಸನಾದಿ ಅಪ್ಪಣ್ಣ' ಎಂದೇ ಜನಪ್ರಿಯವಾಗಿರುವ ಕಲಾವಿದ ಕಂಠದ ಸಂಗೀತ ಸಿರಿಯಿಂದಲೇ ಸಂಸಾರ ನೀಗಿಸಿದ ಕಲಾವಿದ, ತಮ್ಮ ಪೂರ್ಣ ಬದುಕನ್ನು ನಾಗಸ್ವರ,

ವಾದ್ಯವಿಶೇಷಗಳ ಮೂಲಕವೇ ಕಳೆದಿದ್ದಾರೆ. ಆಂಧ್ರ ಪ್ರದೇಶದ ಕಲ್ಯಾಣದುರ್ಗ, ಅನಂತಪುರ, ಬಳ್ಳಾರಿ ರಾಂಪುರಗಳಲ್ಲಿ ಇವರು ಪ್ರಸಿದ್ಧರು. ಇವರೊಂದಿಗೆ ಹತ್ತು ಜನರ ತಂಡವೂ ಇದ್ದು ಅದರ ಸಹಾಯದಿಂದ ಸಂಗೀತವಾದ್ಯ ವಿಶೇಷ ನಡೆಸಿಕೊಡುತ್ತಾರೆ. ಒಂದೇ ಒಂದು ಕ್ಷಣವೂ ನಿಲ್ಲಿಸದೆ ಗಂಟೆಗಟ್ಟಲೆ ನಾಗಸ್ವರ ನುಡಿಸುವ ಈ ಅಪೂರ್ವ ಕಲಾವಿದನಿಗೆ ಚಳ್ಳಕೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾಹಿತ್ಯ ಕೂಟ ಮೊದಲಿಗೆ ಕರೆಸಿ, ವಾದ್ಯಗೋಷ್ಠಿ ಏರ್ಪಡಿಸಿ ಸನ್ಮಾನಿಸಿದ್ದು ಇವರಿಗೆ ಹೆಮ್ಮೆ. ನಂತರ ೧೯೮೬ರಲ್ಲಿ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ' ಜಾನಪದ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ. ತಾವು ಕಲಿತ ರಾಗಗಳನ್ನು ಹಲವು ವಿದ್ಯಾರ್ಥಿಗಳಿಗೆ ಕಲಿಸಿ ಅವರಿಗೂ ಅನ್ನಕ್ಕೆ ದಾರಿಮಾಡಿಕೊಟ್ಟಿರುವ ಆತ್ಮತೃಪ್ತಿ ಈ ಕಲಾವಿದನಿಗಿದೆ.

ಚನ್ನಬಸಪ್ಪ,
ಮುತ್ತಮುದ್ರ ಗ್ರಾಮ, ಚಳ್ಳಕೆರೆ ತಾಲೂಕು.

## ಈರಬಡಪ್ಪ

ಜನಪದ ಗೀತೆ, ಕತೆ, ಹಾಡ್ಗಿತೆ, ಹಾಸ್ಯ ಶಿವಭಜನೆ, ಜನಪದ ಮಹಾಕಾವ್ಯ ಈ ಎಲ್ಲ ಪ್ರಕಾರಗಳಲ್ಲಿ ಅನನ್ಯ ಸಾಧನೆ ಮಾಡಿರುವ ಈರಬಡಪ್ಪ ಚಳ್ಳಕೆರೆ ತಾಲ್ಲೂಕು ಕಲಮರಹಳ್ಳಿಯವರು. ೧೯೩೬ರಲ್ಲಿ ಜನಿಸಿದ ಇವರು ಜನಪದ ಕತೆಗಳ ಕಣಜ. ಇವರ ಕಲಾಸಿರಿಯನ್ನು ಮೊದಲಿಗೆ ಗುರುತಿಸಿ ೨೦೦೦ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ಕಲಮರಹಳ್ಳಿಯ ಹಾಲುಮತ ಜನಾಂಗಕ್ಕೆ ಸೇರಿದ ಚಿಕ್ಕೀರಪ್ಪ-ತಿಪ್ಪಮ್ಮ ದಂಪತಿಗಳಿಗೆ ೧೪ ಜನ ಮಕ್ಕಳು. ಇವರಲ್ಲಿ ೬ ಜನ ಗಂಡು, ೮ ಜನ ಹೆಣ್ಣುಮಕ್ಕಳು. ಈ ದಂಪತಿಗಳ ಕೊನೆಯ ಮಗ ಕಲಮರಹಳ್ಳಿಯ ಈರಬಡಪ್ಪ. ಈರಬಡಪ್ಪ ಹೆಚ್ಚು ಓದಿದವರಲ್ಲ, ಆಗಿನ ಕಾಲದಲ್ಲಿ ಪ್ರಾಥಮಿಕ ಶಾಲೆಯನ್ನು ದೂರದ ಚಳ್ಳಕೆರೆಗೆ ಹೋಗಿ ಕಲಿಯಬೇಕಾದುದರಿಂದ ಓದಿಗೆ ಅಷ್ಟೇನು ಗಮನ ಕೊಟ್ಟ ಕುಟುಂಬವಲ್ಲ. ೫೦೦ ಕುರಿಗಳ ಒಡೆಕಾರ ಮನೆತನ ಚಿಕ್ಕೀರಪ್ಪನವರದು. ಒಬ್ಬರ ಮೇಲೆ ಒಬ್ಬರಂತೆ ಗಂಡುಮಕ್ಕಳೆಲ್ಲರೂ ಕುರಿಕಾಯುವ ಕಾಯಕದವರು. ಬೇಡರು. ಗೊಲ್ಲರ ಹುಡುಗರ ಸಹಾಯದೊಂದಿಗೆ ಬೇಸಿಗೆಯ ಕಾಲಕ್ಕೆ ಹುಲ್ಲು-ನೀರಿನ ಆಶ್ರಯಕ್ಕಾಗಿ ಬಹಳ ದೂರ ಕುರಿಗಳನ್ನು ಮೇಯಿಸಿಕೊಂಡು ತಿರುಗಿ, ಮಳೆ ಬಂದಾಗ ಊರಿಗೆ ವಾಪಸ್ಸಾಗುತ್ತಿದ್ದರು. ಈರಬಡಪ್ಪ ೩೦ ವರ್ಷಗಳ ಕಾಲ ನಿರಂತರವಾಗಿ ಕುರಿಕಾಯುವ ಕಾಯಕ ಮಾಡಿದವರು.

೧೯೫೬ರಲ್ಲಿ ಗಂಗಮಾಳಮ್ಮ ಎಂಬುವರೊಂದಿಗೆ ವಿವಾಹವಾದರು. ಈಗ ಈರಬಡಪ್ಪನವರಿಗೆ ೭೨ರ ಪ್ರಾಯ. ಕೆಲಕಾಲ ಮಡದಿಯೊಂದಿಗೂ ಕುರಿಗಳನ್ನು ಹುಲ್ಲು-ನೀರಿಗೆ ಕರೆದುಕೊಂಡುಹೋದ ನೆನಪನ್ನು ತೋಡಿಕೊಳ್ಳುತ್ತಾರೆ. ಇವರಿಗೆ ೩

ಗಂಡುಮಕ್ಕಳು. ಈ ಮೂವರೂ ವ್ಯವಸಾಯಗಾರರು. ಅಪಾರ ಖ್ಯಾತಿಯ ಹಾಡುಗಾರ, ಕತೆಗಾರರಾದರೂ ಮಕ್ಕಳ್ಯಾರೂ ಅಪ್ಪನ ಕಲೆಯ ಕಡೆಗೆ ತಿರುಗಿ ನೋಡದಿರುವುದರ ಬಗೆಗೆ ಕಲಾವಿದರಿಗೆ ಬೇಸರವಿದೆ.

ಈರಬಡಪ್ಪನವರಿಗೆ ಕಲಾಗುರು ಇವರ ಚಿಕ್ಕಪ್ಪ ಕುರಿಲಿಂಗಪ್ಪ. ಕುರಿ ಮೇಯಿಸಿಕೊಂಡೇ ೯೦ ವರ್ಷಗಳ ಕಾಲ ಆರೋಗ್ಯವಾಗಿಯೇ ಬದುಕಿದ್ದ, ಜಾನಪದ ತವನಿಧಿಯಾಗಿದ್ದರು. ಸುತ್ತಲ ಆರೇಳು ಹಳ್ಳಿಗಳಲ್ಲಿ ಇಂದಿಗೂ ಕುರಿಲಿಂಗಪ್ಪನವರ ಹಾಡುಗಾರಿಕೆ, ಕಥನಕ್ರಮ ಮನೆಮಾತಾಗಿದೆ. ಇವರೊಂದಿಗೆ ಕುರಿ ಮೇಯಿಸುವ ಕಾಯಕ ಮಾಡುತ್ತಿದ್ದುದರಿಂದ ರಾತ್ರಿ ಮಂದೆ ಕಾಯುವಾಗ ಈರಬಡಪ್ಪ ಶಾಸ್ತ್ರವಾಗಿ ಜನಪದ ಕಾವ್ಯ, ಕಥೆಯನ್ನು ಕುರಿಲಿಂಗಪ್ಪನವರಿಂದ ಕಲಿತರು. ಈರಬಡಪ್ಪನವರು ಗಂಗೆಗೌರಿ ಕತೆ, ಬಸವಣ್ಣನ ಕಥನ, ಗೌರಸಂದ್ರದ ಮಾರಮ್ಮ, ಜುಂಜಪ್ಪ, ಮೈಲಾರಲಿಂಗ, ಕಾಟಂಲಿಂಗನ ಬಗ್ಗೆ ಕಾವ್ಯ ಹಾಡುತ್ತಾರೆ. ಯಾವುದೇ ಪುನರಾವರ್ತನೆ ಇಲ್ಲದಂತೆ ಸರಾಸರಿ ಆರು ರಾತ್ರಿ ಹಾಡುವುದು ಇವರ ವಿಶೇಷ. ಹಗಲು ಹಾಡುವುದು ಇವರಿಗೆ ಕೊಂಚ ಮುಜುಗರ. ರಾತ್ರಿ ನಿದ್ರೆಬಿಟ್ಟು, ಸಂದುಸಂದಿಗೆ ಹೂಂಗುಟ್ಟುವವರು ಸಿಕ್ಕರೆ ಕಥೆಮಾಡುವುದು ಇವರ ಪ್ರಿಯವಾದ ಕೆಲಸವಾಗಿದೆ.

ಚಳ್ಳಕೆರೆ, ಗೌರಸಂದ್ರ, ಚಿತ್ರದುರ್ಗದ ಮುರುಘಾಮಠ, ಹರ್ತಿಕೋಟೆ, ಪಗಲಬಂಡೆ, ಪಾವಗಡ, ಧರ್ಮಪುರ, ಹಿರಿಯೂರು ಇಲ್ಲೆಲ್ಲ ಶಿವಭಜನೆ ಪಂಢರಾಪುರಿ ಭಜನೆ ಸಂಘಗಳ ಉಗಮಕ್ಕೆ ಪ್ರೇರಣೆ. ಭಜನೆ ತಂಡದ ಕಲಾಗುರುಗಳಾಗಿ ಕಾರ್ಯ ನಿರ್ವಹಣೆಮಾಡಿದ್ದಾರೆ. ಇವರ ಅದ್ಭುತ ಹಾಡುಗಾರಿಕೆಯುನ್ನು ಮೊದಲು ಗುರುತಿಸಿದವರು ಲೇಖಕ, ಪ್ರಾಧ್ಯಾಪಕ ಕಲಮರಹಳ್ಳಿ ಮಲ್ಲಿಕಾರ್ಜುನ ಅವರು. ಇವರು ಹೇಳಿದ ಕತೆಗಳನ್ನು ಸಂಗ್ರಹಿಸಿ ಮೊದಲು 'ಕಲಮರಹಳ್ಳಿಯವರ ಕತೆಗಳು' ಪುಸ್ತಕವನ್ನು ಪ್ರಕಟಿಸಿದರು. ನಂತರ ಡಾ|| ಮೀರಾ ಸಾಬಿಹಳ್ಳಿ ಶಿವಣ್ಣ ಇವರ ಹಾಡುಗಳನ್ನು ಸಂಗ್ರಹಿಸಿದರು. ಇವರ ಸಂಶೋಧನೆಗೆ ವಕ್ತೃವನ್ನಾಗಿ ಮಾಡಿಕೊಂಡರು. ಇವರ ಸಂಪರ್ಕದಿಂದಾಗಿ ಈರಬಡಪ್ಪ ಅವರಿಗೆ ಅಪಾರ ಖ್ಯಾತಿ, ಅವಕಾಶ ಲಭ್ಯವಾಯಿತು.

ಈರಬಡಪ್ಪನವರು ಚಿತ್ರದುರ್ಗ ಆಕಾಶವಾಣಿಯಲ್ಲಿ ೧೯೯೦ ರಿಂದಲೂ ಹಾಡುತ್ತಾ ಬಂದಿದ್ದಾರೆ. ಬೆಂಗಳೂರು ದೂರದರ್ಶನದ ಸಿರಿಗಂಧ, ಬೆಂಗಳೂರು-ಮೈಸೂರು ಆಕಾಶವಾಣಿಗಳಲ್ಲೂ ಹಾಡಿದ್ದಾರೆ. ದಸರಾ ಉತ್ಸವ-ಮೈಸೂರು, ತರಳಬಾಳು ಉತ್ಸವ, ಮುರುಘಾಮಠದ ಉತ್ಸವಗಳಲ್ಲಿಯೂ ವಿಶೇಷ ಆಹ್ವಾನಿತ ಕಲಾವಿದರಾಗಿ ಹಾಡುವುದು ಇವರ ವಿಶೇಷವಾಗಿದೆ. ಯಕ್ಷಗಾನದ ಹಿನ್ನೆಲೆ ಭಾಗವತರಾಗಿ, ಪೌರಾಣಿಕ ನಾಟಕಗಳ ಭಪನ್ ಪಾತ್ರಧಾರಿಯಾಗಿ, ಅಪರೂಪದ ಕತೆಗಾರರಾಗಿ, ಭವ್ಯಬಾಳನ್ನು

ಬಾಳಿದ ಈ ಕಲಾವಿದನಿಗೆ ತನ್ನ ಮಡದಿ ಗಂಗಮಾಳಮ್ಮ ಸರ್ವವೂ ಆಗಿದ್ದು, ಆಕೆಯ ಸಾವು ಇವರ ಬದುಕನ್ನೇ ಬದಲಿಸಿದೆ. ಇಂದು ಕಣ್ಣು ಕಾಣುವುದಿಲ್ಲ, ಆರೈಕೆ ಸಾಲದು. ಆದರೂ ಹಾಡುವ ಕಥೆ ಹೇಳುವ ಛಲ ಬಿಡದ ಅದ್ಭುತ ಅನನ್ಯ ಕತೆಗಾರ.

ಈರಬಡಪ್ಪ,
ಜನಪದ ಕಲಾವಿದ, ಕಲಮರಹಳ್ಳಿ,
ಚಳ್ಳಕೆರೆ ತಾಲೂಕು.

# ತೊರೆ ಸಾಲಪ್ಪ

ಬಯಲುಸೀಮೆಯಲ್ಲಿ ಕೋಲಾಟ ಜನಪ್ರಿಯ ಕಲೆ. ಹಲವು ವೈವಿಧ್ಯತೆಗಳ ಕೋಲು ಕಲೆ, ಕೈ-ಮೈ-ಮನಸ್ಸಿಗೂ ಕಸರತ್ತಿನ ಕೆಲಸ. ಚಮತ್ಕಾರಿಕ ಕೋಲು ಬಡಿತ, ಗೆಜ್ಜೆಗೆ ತಕ್ಕ ಲಯ, ಪೂರಕ ಹೆಜ್ಜೆ, ಹೆಜ್ಜೆ-ಗೆಜ್ಜೆಗೆ ತಕ್ಕ ಕೋಲಿನ ಲಯ ಈ ಮೂರನ್ನೂ ಸೇರುವ ಸೊಗಸಾದ ಸಂಗೀತ. ಬನಿಯನ್ ಕಾಲಲ್ಲಿ ಗೆಜ್ಜೆ, ತಲೆಯ ಮೇಲೆ ಕೆಂಪು-ಹಳದಿ ಬಣ್ಣದ ಟೇಪು-ನಿಕ್ಕರ್. ಇವು ಕೋಲಾಟದ ವೇಷಭೂಷಣಗಳು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹೊಸದುರ್ಗ, ಹಿರಿಯೂರು, ತುಮಕೂರು ಜಿಲ್ಲೆಯ ಸಿರಾ, ಗುಬ್ಬಿ, ಪಾವಗಡ, ಮಧುಗಿರಿ ಈ ಭಾಗಗಳಲ್ಲಿ ಇಂದಿಗೂ ಕೋಲಾಟ ಕಲಾತಂಡದವರಿದ್ದು ಕೋಲಾಟ ಕಲೆಯನ್ನು ಜೀವಂತಗೊಳಿಸಿದ್ದಾರೆ.

ಈ ಬಗೆಯ ಕೋಲಾಟದ ಕಲೆಯನ್ನು ಸಮರ್ಥವಾಗಿ ಮುನ್ನಡೆಸಿದ ಹಿರಿಮೆ ತೊರೆಸಾಲಪ್ಪನವರದು. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಸಾಣೆಹಳ್ಳಿಯವರು. ಇಲ್ಲಿನ ಆದಿಕರ್ನಾಟಕ ವರ್ಗಕ್ಕೆ ಸೇರಿದ ಈ ಕಲಾವಿದ ಜೀತಪದ್ಧತಿಯಿಂದ ಬದುಕು ಸವೆಸಿದವರು. ಜೀತದಾಳಾಗಿ ಕಳೆದ ಇವರು ತಮ್ಮ ಬದುಕಿನ ನೋವನ್ನು ಮರೆಯಲು ಕೋಲಾಟವನ್ನು ಮೊರೆಹೊಕ್ಕರು. ಕೋಲುಗಳ ಬಡಿತ, ಕಾಲಿನ ಗೆಜ್ಜೆಯ ಘಳಿರು ಕಿವಿಯ ಮೇಲೆ ಬೀಳದಿದ್ದರೆ ಇವರ ಕಣ್ಣಿಗೆ ನಿದ್ರೆ ಹತ್ತುವುದಿಲ್ಲ. ನಿರಂತರವಾಗಿ ನಾಲ್ಕರು ಗಂಟೆಗಳ ಸಮಯ ಪುನರಾವೃತ್ತಿಗೊಳ್ಳುವಂತೆ ಕೋಲಾಟದ ಪದಗಳನ್ನು ಹಾಡುತ್ತಾರೆ. ಕೊರವಂಜಿ ಕೋಲು, ಜೋಡುಗೋಲು, ನೆಲಗೋಲು, ಜಡೆಕೋಲು-ಕೋಲಾಟದ ವೈವಿಧ್ಯತೆಯ ಪಟ್ಟುಗಳು. ತೊರೆಸಾಲಪ್ಪ ಉತ್ತಮ ಸಂಘಟಕರೂ ಹೌದು. ಚಿತ್ರದುರ್ಗ, ಹಿರಿಯೂರು, ಹೊಸದುರ್ಗ ಭಾಗಗಳಲ್ಲಿ ಕೋಲಾಟದ ಮೇಷ್ಟು ಎಂದೇ ಕರೆಯುತ್ತಿದ್ದ ತೊರೆಸಾಲಪ್ಪ ಇಂದು ಹಣ್ಣಾಗಿದ್ದಾರೆ.

ಮೂವರು ಮಕ್ಕಳೂ ಉತ್ತಮ ಸ್ಥಿತಿಯಲ್ಲಿಲ್ಲ. ಕೂಲಿ ಕಸುಬಿನಿಂದಲೇ ಜೀವನ. ಕೋಲಾಟದ ಜೊತೆಗೆ ಒಳ್ಳೆಯ ಪದಗಳ ಹಾಡುಗಾರರೂ ಹೌದು. ನೂರಾರು ಯುವಕರಿಗೆ ಕೋಲಾಟದ ಪದಗಳನ್ನು ಹೇಳಿಕೊಟ್ಟಿರುತ್ತಾರೆ. ಜೊತೆಗೆ ಯುವಕ ಸಂಘಗಳನ್ನು ಕಟ್ಟಿ ಅವರಿಗೆ ಕೋಲಾಟ ಕಲಿಸಿ, ವಿವಿಧ ಕಡೆಗೆ ಕರೆದುಕೊಂಡು ಹೋಗಿ, ಕೋಲಾಟದ ಸ್ಪರ್ಧೆ ಏರ್ಪಡಿಸುವುದು ಇವರ ಹವ್ಯಾಸ. ಮೈಸೂರಿನ ದಸರಾ ಉತ್ಸವ, ಬೆಂಗಳೂರಿನ ಕರಗದ ಉತ್ಸವ, ಚಿತ್ರದುರ್ಗದ ದುರ್ಗದ ಉತ್ಸವ, ಇವುಗಳಲ್ಲಿ ಕಲಾಸಮಾವೇಶಗಳಲ್ಲೂ ಭಾಗವಹಿಸಿದ್ದಾರೆ. ಯಕ್ಷಗಾನ ಕಲೆಯ ಬಗೆಗೂ ಆಸಕ್ತರಾಗಿದ್ದರು. ಭದ್ರಾವತಿ, ಮೈಸೂರು ಆಕಾಶವಾಣಿ ಕೇಂದ್ರಗಳಿಂಧ ಇವರು ಕಲಿಸಿದ ಕೋಲುಮೇಳದ ಪ್ರದರ್ಶನ ನೀಡಲಾಗಿದೆ. ಇವರ ಸದ್ದಿಲ್ಲದ ಸಾಧನೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೪ರಲ್ಲಿ ಜಾನಪದ ಕಲಾವಿದ, ಪ್ರಸಾರಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ತೊರೆಸಾಲಪ್ಪ,**
**ಸಾಣೇಹಳ್ಳಿ ಹೊಸದುರ್ಗ ತಾಲೂಕು.**

# ಸಣ್ಣನರಸಿಂಹಪ್ಪ

ಯಕ್ಷಗಾನ, ಭಾಗವಂತಿಕೆ, ಆಸಾದಿ ಪದ, ತಂಬೂರಿ ಪದಗಳ ಸರದಾರನಾದ ಸಣ್ಣನರಸಪ್ಪ ತುರುವನೂರಿನವರು. ಆದಿಕರ್ನಾಟಕ ಜಾತಿಗೆ ಸೇರಿದ ಈ ಕಲಾವಿದ ಅವಿದ್ಯಾವಂತ. ಜೀತಗಾರರ ಪರಂಪರೆ, ತನ್ನ ಜೀತ ಬದುಕಿನ ಮಧ್ಯೆಯೇ ಯಕ್ಷಗಾನ ಕಲೆಯನ್ನು ನೋಡುನೋಡುತ್ತಲೇ ಕಲಿತರು. ಬಾಲಕ ಪಾತ್ರವಾದ ಗೋಪಾಲ, ಗಣೇಶ, ಶಾರದೆ, ಸಖಿ ಪಾತ್ರಗಳಲ್ಲಿ ಆಕರ್ಷಕ ಅಭಿನಯ ನೀಡಿದರು. ಈತನ ಕಲಾನೈಪುಣ್ಯತೆ ಕಂಡು ಮುಂದೆ ಕರಿಭಂಟ ನಾಟಕದಲ್ಲಿ ಕರಿಭಂಟನಾಗಿ ವಿಶೇಷ ಅಭಿನಯ ನೀಡಿದ್ದಾರೆ. ೧೯೭೩ರ ಸಂದರ್ಭದಲ್ಲಿ ಸಿಡುಬು ರೋಗಕ್ಕೆ ತುತ್ತಾಗಿ ಎರಡೂ ಕಣ್ಣುಗಳನ್ನು ಕಳೆದುಕೊಂಡರು. ಜಮೀನಿಲ್ಲ, ಕೂಲಿಗೂ ಕಲ್ಲು ಬಿತ್ತು. ಮಡದಿ, ಮಕ್ಕಳ ಪೋಷಣೆಗಾಗಿ ಭಿಕ್ಷಾಟನೆಯನ್ನು ಅವಲಂಬಿಸಬೇಕಾಯಿತು.

ಕರಿಭಂಟನ ಕತೆಯನ್ನು ಬಾಯಿಯಿಂದಲೇ ಯಕ್ಷಗಾನ ರೂಪದಲ್ಲಿ ಹಾಡುವುದು ಈತನ ವಿಶೇಷ. ಈ ಹಿಂದೆ ಕಲಿತಿದ್ದ ಭಾಗವಂತಿಕೆಯು ಈಗ ಹಾಡುವುದಕ್ಕೆ ಪ್ರೇರಕವಾಗುತ್ತದೆ. ಯಾರಾದರೂ ಕರೆದರೆ ಯಕ್ಷಗಾನ ಹಿಮ್ಮೇಳ ಕಲಾವಿದರಾಗಿ ಕಾರ್ಯಕ್ರಮ ನಡೆಸಿಕೊಡುವುದು ಇವರ ರೂಢಿಯಾಗಿದೆ.

ಕೋಲಾಟದ ಪದ, ಭಜನೆ ಪದ, ಆಸಾದಿ ಪದಗಳನ್ನು ಹಾಡುತ್ತಾರೆ. ತಾಳ ಹಿಡಿಯ ಬೇಕಾದ ಕೈ ಈಗ ತಂಬೂರಿ ಹಿಡಿದಿದೆ. ಆದರೆ ತಾಳ-ತಂಬೂರಿ ಎರಡೂ ಮೇಳಗಳ ರಾಗ, ಕಥೆ ನಿರಂತರವಾಗುತ್ತಿದೆ.

ಸಣ್ಣನರಸಪ್ಪನವರಿಗೆ ಇಬ್ಬರು ಮಕ್ಕಳು. ಅವರೂ ಆಸ್ತಿವಂತರಲ್ಲ. ಕೂಲಿ-ನಾಲಿ ಬದುಕಿನವರು. ಅವರಿಗೂ ಮದುವೆಯಾಗಿದೆ, ಮೊಮ್ಮಕ್ಕಳಾಗಿವೆ. ಅವರ ಪಾಡಿಗೆ

ಅವರಿದ್ದಾರೆ. ತುಂಬು ವಯಸ್ಸಿನ ನರಸಪ್ಪ ಇದೀಗ ಹಣ್ಣಾಗಿದ್ದಾರೆ. ತಿರುಗಾಟ ಅಸಾಧ್ಯ, ಹಾಡುವ ಮನಸ್ಸು, ಕೇಳುವ ದಾತರೇ ಇಲ್ಲ. ನಾಯಕನಹಟ್ಟಿ ತಿಪ್ಪೇಸ್ವಾಮಿ ಕುರಿತಂತೆ ಕತೆ ಕೇಳುವುದಕ್ಕೆ ಅವರಿವರು ಬರುತ್ತಾರೆ. ಬಂದಾಗ ಮಾಹಿತಿ ಸಂಗ್ರಹಿಸಿಕೊಂಡು ಹೋಗುತ್ತಾರೆ. ಈ ಹಿರಿಯ ಕಲಾವಿದ ಸರ್ಕಾರದಿಂದ ಬರುವ ೧೦೦ ರೂ. ಗಳ ಅಂಗವಿಕಲ ಗೌರವಧನ ಬಿಟ್ಟರೆ ಬೇರೆ ಏನೂ ಪಡೆದಿಲ್ಲ. ಇವರ ಅದ್ಭುತ ಜನಪದ ವಾಙ್ಮಯವನ್ನು ಮೊದಲು ಗುರುತಿಸಿದವರು ಡಾ|| ಎಂ. ಜಿ. ಈಶ್ವರಪ್ಪ. ೧೯೯೩ರಲ್ಲಿ ಈ ಕಲಾವಿದನನ್ನು ಗುರುತಿಸಿ, ಜೀಶಂಪ ಅವರೊಂದಿಗೆ ಕಾರ್ಯಕ್ರಮವವನ್ನು ಚಿತ್ರದುರ್ಗದಲ್ಲಿ ಏರ್ಪಡಿಸಿದ್ದರು. ನಂತರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೯೩ರಲ್ಲಿ ಜಾನಪದ ಕಲಾವಿದ ಪ್ರಶಸ್ತಿ ನೀಡಿ ಗೌರವಿಸಿದೆ.

ಸಣ್ಣನರಸಪ್ಪ

ತುರುವನೂರು, ಚಿತ್ರದುರ್ಗ ತಾಲೂಕು.

## ಶಾಂತಮ್ಮ

ಕತೆಗಾರ್ತಿ, ಹಾಡುಗಾರ್ತಿ ಎರಡೂ ಆಗಿರುವ ಶಾಂತಮ್ಮನವರು ತುರುವನೂರಿನವರು. ದುರ್ಗದ ಸಮೀಪದ ಮಾಡನಾಯಕನಹಳ್ಳಿಯಲ್ಲಿ ಹುಟ್ಟಿದ ಶಾಂತಮ್ಮ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡರು. ಅಜ್ಜಿ ಮಲ್ಲಮ್ಮನೇ ಈಕೆಯನ್ನು ಬೆಳೆಸಿ ಪಾಲನೆಮಾಡಿದ್ದ. ಮಹಾನ್ ಹಾಡುಗಾರ್ತಿ, ಕತೆಗಾರ್ತಿಯೂ ಆಗಿದ್ದ ಮಲ್ಲಮ್ಮ ಬಿತ್ತಿದ ಬೀಜವೇ ಶಾಂತಮ್ಮನಲ್ಲಿ ಜಾನಪದ ಎಂಬ ಬೆಳೆ ಹುಲುಸಾಗಿ ಬೆಳೆದಿದೆ. ಮುಂದೆ ತುರುವನೂರಿನ ನಿಂಗಪ್ಪ ಎಂಬುವವರೊಂದಿಗೆ ವಿವಾಹವಾಯಿತು. ೪ ಮಕ್ಕಳ ತಾಯಿ, ರೈತಾಪಿ ಬದುಕು. ನಿಂಗಪ್ಪ ಒಳ್ಳೆಯ ಜನಪದ ಕಲಾವಿದರು. ಯಕ್ಷಗಾನ ವೇಷಗಾರಿಕೆ, ಭಾಗವಂತಿಕೆಗೆ ಹಿಮ್ಮೇಳಗಾರರಾಗಿಯೂ ಹೆಸರುವಾಸಿ. ದುಶ್ಯಾಸನ ಕಾಳಗ, ಕುಶ-ಲವರ ಕಾಳಗ, ದೇವಿಮಹಾತ್ಮೆ ಮುಂತಾದ ಯಕ್ಷಗಾನಗಳಲ್ಲಿ ಘೋರ ಪಾತ್ರಗಳ ಅಭಿನಯ. ಶಾಂತಮ್ಮ ಇವರಿಗೆ ತಕ್ಕ ಮಡದಿ. ತೋಪಮ್ಮ, ತಿಪ್ಪಮ್ಮ, ಮಾಳಮ್ಮ ಈ ಮೊದಲಾದ ಜನಪದ ಕಲಾವಿದೆಯರ ಜೊತೆಗೂಡಿ ಹಾಡುವುದನ್ನು ಕಲಿತರು. ಅಜ್ಜಿ ಮಲ್ಲಮ್ಮನ ಹಾಡುಗಳಿಗೆ ಹೊಸ ರಾಗ ಹಾಕಿ ಹಾಡುತ್ತಾ ಬಂದರು. ಗುಣಸಾಗರಿ, ಕಾಳಿಂಗರಾಯ, ಸುಭದ್ರೆ-ಅರ್ಜುನ ಜೋಗಿ, ನಾಯಕನಹಟ್ಟಿ ತಿಪ್ಪೇಸ್ವಾಮಿ ಈ ಕಥನಗೀತೆಗಳನ್ನು ಸೊಗಸಾಗಿ ಹಾಡುತ್ತಾರೆ, ಮಾತ್ರವಲ್ಲ ಈ ಹಾಡುಗಳಲ್ಲಿ ಅಪೂರ್ವ ಒಳಅರ್ಥಗಳೂ ಇವೆ.

ಶಾಂತಮ್ಮ ಪ್ರಮುಖವಾಗಿ ಕತೆಗಾರ್ತಿ. ಕುಲ್ಡ ಗುಂಬಾರ್ತಿ, ಹುಲಿರಾಜನ ಕತೆ, ಬರಗಾಲದ ಬಳ್ಳಾರಿ, ರಾಮಣ್ಣ-ಲಚ್ಚಣ್ಣ, ಅಣ್ಣ-ತಂಗಿ, ಸೋಜಿಗದ ಮಾತು ಈ ಮೊದಲಾದ ಕತೆಗಳು ಕೇಳುಗರನ್ನು ರೋಮಾಂಚನಗೊಳಿಸುತ್ತವೆ. ಇವರು ಹೇಳಿರುವ ೩೦ ಕತೆಗಳನ್ನು ಮೈಸೂರು ವಿಶ್ವವಿದ್ಯಾಲಯ ತನ್ನ ಜಾನಪದ ಮಾಲೆಯಲ್ಲಿ ಪ್ರಕಟಿಸಿದೆ.

ಇವರ ಹಾಡುಗಳನ್ನು ಕ.ರಾ.ಕೃ ಅಂಬಳಿಕೆ ಹಿರಿಯಣ್ಣ ಮೊದಲಾದವರು ಸಂಗ್ರಹಿಸಿದ್ದಾರೆ. ಮೀರಾಸಾಬಿಹಳ್ಳಿ ಶಿವಣ್ಣ ಇವರ ಸಂಕಲನದಲ್ಲೂ ಶಾಂತಮ್ಮನ ವಕ್ತೃತನ ಕೆಲಸಮಾಡಿದೆ.

ರೈತಾಪಿ ಬದುಕಿನ, ಒಳಗಾದರೆ ಜನಪದ ಬದುಕು. ಹಾಗಾಗಿ ರಾತ್ರಿ ವೇಳೆಯಲ್ಲಿ ನಕ್ಷತ್ರಗಳಿಂದ ತುಂಬಿದ ನೀಲಿ ಆಕಾಶದ ಕೆಳಗೆ ಕುಳಿತು ತನ್ನ ಅಜ್ಜಿಯಿಂದ ಕಲಿತ ಹಾಡು, ಕತೆಗಳು ಶಾಂತಮ್ಮನನ್ನು ಜಾನಪದ ಶಾಂತಮ್ಮಳನ್ನಾಗಿಸಿದೆ. ಮೂರು ಮಕ್ಕಳ ತಾಯಿಯೂ ಆಗಿರುವ ಶಾಂತಮ್ಮನಿಗೆ, ಇದೀಗ ೩೦ ವರ್ಷ ತುಂಬಿದೆ. ಗಂಡ ನಿಂಗಪ್ಪ ಈಗ್ಗೆ ೨೫ ವರ್ಷಗಳ ಹಿಂದೆಯೇ ತೀರಿಕೊಂಡರು. ಈಕೆಯ ಅಪೂರ್ವ ಕಥನಕ್ರಮ, ಹಾಸ್ಯ ಭಾವತೀವ್ರತೆಯನ್ನು ಪರಿಗಣಿಸಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೯೯ನೇ ಸಾಲಿನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶಾಂತಮ್ಮ,<br>
ಎ.ಕೆ. ಕಾಲೋನಿ, ತುರುವನೂರು,<br>
ಚಿತ್ರದುರ್ಗ ತಾಲೂಕು.

# ನೀಲಪ್ಪ

ನೀಲಪ್ಪ ನಮ್ಮೊಳಗಣ ಅದ್ಭುತ ಕಥೆಗಾರ. ಹುಟ್ಟಿದ್ದು ೧೯೪೦ರಲ್ಲಿ. ಚಿತ್ರದುರ್ಗ ತಾಲೂಕಿನ ಸೂರೇನಹಳ್ಳಿಯ ದಲಿತ ಕುಟುಂಬದಲ್ಲಿ. ತಂದೆ ಮಲ್ಲಪ್ಪ, ತಾಯಿ ಕರಿಯಮ್ಮ. ಕರಿಯಮ್ಮ ಅವರೂ ಒಳ್ಳೆಯ ಕಥೆಗಾರ್ತಿ. ಜಾನಪದ ಕಥೆ, ಹಾಡು, ಗಾದೆಗಳನ್ನು ಪುಂಖಾನುಪುಂಖವಾಗಿ ಹಾಡುತ್ತಿದ್ದರು. ನೀಲಪ್ಪ ಬೆಳೆದಿದ್ದು ಅಜ್ಜಿಯ ಮನೆಯಲ್ಲಿ. ತಾಯಿಯ ತವರೂರಾದ ಸಿದ್ಧಾಪುರದಲ್ಲಿ ಬಾಲ್ಯ ಕಳೆದ ನೀಲಪ್ಪ, ದನ ಮೇಯಿಸುವ ಕಾಯಕದ ನಡುವೆಯೂ ಅಜ್ಜಿಯಿಂದ ಕಥೆಗಳನ್ನು ಕಲಿತರು. ೧೯೬೦ ರಿಂದ ಇತ್ತೀಚೆಗೆ ಅಜ್ಜಿ ಹೇಳಿದ ಕಥೆಗಳ ಜೊತೆಗೆ ಸಿದ್ದಾಪುರ, ದುರ್ಗ ಸೀಮೆಯ ಕತೆಗಳನ್ನೂ ಕಲಿತರು. ತಾವು ಕಲಿತ ಕಥೆಯನ್ನು ಎದುರು ಕುಳಿತು ಕೇಳುತ್ತಿದ್ದವರ ಮೇಲೆ ಕಥಾ ಮೋಡಿಯ ಜಾಲವನ್ನೇ ಹರಡುವ ನೀಲಪ್ಪನವರಿಗೆ ಸಮಯ ಹೋಗುವುದೇ ತಿಳಿಯುವುದಿಲ್ಲ. ವರ್ಣನಾತ್ಮಕವಾಗಿ, ರಂಜನೀಯವಾಗಿ ಕಥೆ ಹೇಳುವುದರಲ್ಲಿ ಪರಮ ನಿಷ್ಣಾತರು. ಇವರ ಕಥೆಗಳನ್ನು ಮೈಲನಹಳ್ಳಿ ರೇವಣ್ಣ ಮೊದಲಾದ ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕಳೆದ ೫೫ ವರ್ಷಗಳಿಂದಲೂ ಉಂಡೂಟ ಉಂಡಂಗೆ, ಕಂಡ ಕಲ್ಪನೆ ಕಾಣುವ ಹಾಗೆ ಕಥೆ ಹೇಳುತ್ತಾ, ನೂರು ಜನರಿಗೆ ಕಥೆ ಕಲಿಸುತ್ತಾ ಬಂದಿರುವ ನೀಲಪ್ಪನವರಿಗೆ ಬಡತನ ಕಿತ್ತು ತಿನ್ನುತ್ತದೆ. ಹಾಡುಗಾರರಿಗೆ ಎಲ್ಲೆಡೆ ಮನ್ನಣೆ. ಕಥೆಗಾರರಿಗಿಲ್ಲ. ಬೆಳಗೂ ಬೈಗೂ ಕಥೆ ಹೇಳಿದರೂ ಒಂದು ಅಡಿಕೆ ಪ್ರಯೋಜನವಿಲ್ಲ ಎನ್ನುವುದು ನೀಲಪ್ಪನ ಮಾತು. 'ಯಾರ್‍ಯಾರೋ ಬಂದು ಕಥೆ ಕೇಳುತ್ತಾರೆ, ಇಲ್ಲ ಅನ್ನಲಾರೆ ಹೇಳುತ್ತೇನೆ, ಸಮಯ ಹೋಗುತ್ತದೆ, ಕೆಲಸ ಕೊಡುತ್ತದೆ. ಇದೇ ನನ್ನ ಬದುಕು. ಒಬ್ಬ ಮಗ ಒಂದಿಷ್ಟು ದುಡಿಯುತ್ತಿದ್ದಾನೆ. ಅವನಿಂದಲೇ ಒಂದಿಷ್ಟು ಅನ್ನ. ಏನು ಮಾಡೋದು, ಅವರವರ ಹಣೆಬರಹ ಇದ್ದಂತೆ ಆಗಲಿ ಬಿಡಿ' ಎನ್ನುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಕನ್ನಡ ಸಂಸ್ಕೃತಿ ಇಲಾಖೆಯ ಸಹನಿರ್ದೇಶಕರೂ ಸೇರಿದಂತೆ ಹಲವರು ಇವರ ಕಥಾಹಂದರವನ್ನು ಮೆಚ್ಚಿದ್ದಾರೆ. ೨೦೦೨ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನವೂ ಬಂದಿದೆ. ಇತ್ತೀಚೆಗೆ ಕರ್ನಾಟಕ ಅಶಕ್ತ ಕಲಾವಿದರ ಮಾಸಾಶನವೂ ಬರುತ್ತಿದ್ದು ನನ್ನ ಶ್ರಮಕ್ಕೆ ಸಾರ್ಥಕ್ಯ ಎಂಬ ಭಾವವಿದೆ.

ನೀಲಪ್ಪ,
ಸೂರೇನಹಳ್ಳಿ,
ಚಿತ್ರದುರ್ಗ ತಾಲೂಕು.

# ಬಂಗಾರಮ್ಮ

ಕಲಾವಿದರ ಮಕ್ಕಳು ಕಲಾವಿದರಾಗಬೇಕೆಂಬುದು ಸಾಮಾನ್ಯ ಬಯಕೆ. ಆದರೆ ಇದು ಎಲ್ಲರಿಂದಲೂ ಸಾಧ್ಯವಾಗುವುದಿಲ್ಲ. ಬಂಗಾರಮ್ಮ ಅವರಿಗೆ ಈ ಮಾತು ಅನ್ವಯವಾಗುತ್ತದೆ. ಬಂಗಾರಮ್ಮನವರ ತಂದೆ ಸಣ್ಣಕುರುಡಪ್ಪ ಯಕ್ಷಗಾನ ಭಾಗವತರು, ಹಾಡುಗಾರರು, ರಂಗಕಲಾವಿದರು. ಬಂಗಾರಮ್ಮ ಅವರು ಇವರ ಪರಿವಾರದಲ್ಲಿ ಬೆಳೆದವರು.

ಜಗಳೂರು ತಾಲೂಕು ಬಂಗಾರಗುಡ್ಡ ಬಂಗಾರಮ್ಮನವರ ಹುಟ್ಟೂರು. ೧೯೩೦ರಲ್ಲಿ ಜನಿಸಿದವರು. ತಂದೆ ಸಣ್ಣಕುರುಡಪ್ಪ ತಾಯಿ ರಂಗಮ್ಮ. ರಂಗಮ್ಮನವರೂ ಭಜನೆ, ಜೋಗುಳ ಕಲಾವಿದರು. ತಾಯಿ ರಂಗಮ್ಮನವರಿಂದ ಸೋಬಾನೆ, ಭಜನೆ ಪದ, ಬಾಗಿಲು ತಡೆಯುವ ಪದ ಕಲಿತರು. ಚಿತ್ರದುರ್ಗದ ಪಾಳೆಯಗಾರರ ಮೇಲೂ ಪದಹಾಡುವುದು ಇವರ ವಿಶೇಷ. ಜೊತೆಗೆ ಚಳ್ಳಕೆರೆ, ಮೊಳಕಾಲ್ಮೂರು, ಜಗಳೂರು ಭಾಗಗಳಲ್ಲಿ ಹಿರಿಯರಲ್ಲಿ ಯಾರಾದರೂ ತೀರಿಕೊಂಡಾಗ ಬಂಗಾರಮ್ಮ ತಮ್ಮ ಸಂಗಡಿಗರೊಂದಿಗೆ ಹಾಜರು. ಬೆಳಗು ಬೈಗು ಶವದ ಸಮೀಪ ಕುಳಿತು ಮರಣ ಗೀತೆಗಳನ್ನು ಶೋಕ ಗೀತೆಗಳನ್ನು ಹಾಡುತ್ತಾರೆ. ದಿವಂಗತರ ಗುಣಗಾನವನ್ನು ಹಾಡಿನೊಂದಿಗೆ ಬೆರೆಸಿ ಹಾಡುವುದು ಅಪರೂಪದ ಸಂಗತಿ. ಹಾಗಾಗಿಯೇ ಬಂಗಾರಮ್ಮ 'ಭಜನೆ ಬಂಗಾರಮ್ಮ'ವಾಗಿ ಪ್ರಸಿದ್ಧರು.

ಬಂಗಾರಮ್ಮನವರನ್ನು ಅದೇ ಗ್ರಾಮದ ಸಂಜೀವಪ್ಪ ವಿವಾಹವಾದರು. ೧೯೪೨ರಲ್ಲಿ ವಿವಾಹ. ಬಾಲ್ಯವಿವಾಹದ ಸಂದರ್ಭ. ಯಕ್ಷಗಾನದ ಭಾಗವತರೂ ಆಗಿದ್ದ ಸಂಜೀವಪ್ಪನವರು ಚಿತ್ರದುರ್ಗ, ಬಳ್ಳಾರಿ, ಹೊಸಪೇಟೆ, ದಾವಣಗೆರೆ ಈ ಭಾಗಗಳಲ್ಲಿ ಯಕ್ಷಗಾನ ಭಾಗವತರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜೊತೆಗೆ ಮಾವನವರಾದ ಸಣ್ಣಕುರುಡಪ್ಪ

ಒಳ್ಳೆಯ ಮದ್ದಲೆ ಕಲಾವಿದರು. ಬಂಗಾರಮ್ಮನವರು ಹಿನ್ನೆಲೆ ಸಂಗೀತಗಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು.

ಬಂಗಾರಮ್ಮನವರು ಬಾಲ್ಯದಿಂದಲೂ ಭಜನೆ ಮತ್ತು ಜೋಗುಳ ಪದಗಳ ಕಲಿಕೆಯಲ್ಲಿ ಅತೀವ ಉತ್ಸಾವ ಹೊಂದಿದ್ದರು. ಇವರ ಮಧುರ ಕಂಠದಿಂದ ಹೊರಹೊಮ್ಮುವ ಹಾಡುಗಳು ಕೇಳುಗರನ್ನು ಆಧ್ಯಾತ್ಮಿಕ ಲೋಕಕ್ಕೆ ಕೊಂಡೊಯ್ಯುತ್ತದೆ. ದಾವಣಗೆರೆ, ಚಿತ್ರದುಗ ಜಿಲ್ಲೆಗಳಾದ್ಯಂತ ಭಜನೆ ಕ್ಷೇತ್ರದಲ್ಲಿ ತಮ್ಮದೇ ಛಾಪು ಒತ್ತಿ ಬಹುಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಕಳೆದ ೩೫ ವರ್ಷಗಳಿಗೂ ಹೆಚ್ಚು ವರ್ಷಗಳಿಂದ ಜನಪದ ಗೀತೆಗಳನ್ನು ಹಾಡುತ್ತಾ ಬಂದಿರುವ ಬಂಗಾರಮ್ಮ ಏಳು ಕ್ಯಾಸೆಟ್‌ಗಳನ್ನು ಹೊರತಂದಿರುವುದು ವಿಶೇಷವಾಗಿದೆ. ಸರ್ಕಾರದ ಹಲವು ಸಭೆ, ಸಮಾರಂಭ, ಸಾಂಸ್ಕೃತಿಕ ಉತ್ಸವಗಳಲ್ಲಿ ಭಾಗವಹಿಸಿರುವ ಇವರು ರಾಜಕಾರಣದಲ್ಲೂ ಆಸಕ್ತರು. ಇವರ ಮಧುರ ಕಂಠದ ಹಾಡುಗಾರಿಕೆಗಾಗಿ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೨ನೇ ಸಾಲಿನ ಜಾನಪದ ಕಲಾವಿದೆ ಪ್ರಶಸ್ತಿ ನೀಡಿ ಗೌರವಿಸಿದೆ.

**ಬಂಗಾರಮ್ಮ,**
**ಬಂಗಾರಮ್ಮನಗುಡ್ಡ, ಜಗಳೂರು ತಾಲೂಕು.**

# ಗಿಡ್ಡಜ್ಜ

ಮಧ್ಯಕರ್ನಾಟಕದ ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ದಟ್ಟವಾಗಿ ನೆಲೆಸಿರುವ ಕಾಡುಗೊಲ್ಲರು ಒಂದು ಅರ್ಥದಲ್ಲಿ ಕರ್ನಾಟಕ ಸಂಸ್ಕೃತಿಯ ವಕ್ತಾರರು. ಊರವರ ಗೋಜಲುಗಳಿಂದ ಹೊರಗೆ ಕಳ್ಳಿಬೇಲಿ ಹಾಕಿಕೊಂಡು ತಮ್ಮದೇ ಸಂಸ್ಕೃತಿಯ ಒಳಹೊರಗೆ ಅರ್ಥಪೂರ್ಣವಾಗಿ ಬದುಕು ಸವೆಸುವ ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ. ಕಾಡುಗೊಲ್ಲರಲ್ಲಿ ಜುಂಜಪ್ಪನ ಹೆಸರು ಮನೆಮಾತು. ಹಟ್ಟಿಗೆ ಹಟ್ಟಿಯೇ ಜುಂಜಪ್ಪನ ಕತೆ ಹಾಡುತ್ತಾರೆ. ಕೆಲವರು ಒಂದೆರಡು ಸಂದು ಹಾಡಿದರೆ ಕೆಲವರು ಆರೇಳು ರಾತ್ರಿ ನಿರಂತರವಾಗಿ ಹಾಡುತ್ತಾರೆ. ಈ ಬಗೆಯವರು ವಿರಳ ಸಂಖ್ಯೆಯಲ್ಲಿ ಲಭ್ಯವಾಗುತ್ತಿದ್ದಾರೆ. ಈ ಬಗೆಯ ಅಪೂರ್ವ ಮಹಾಕಾವ್ಯ ಪ್ರತಿಭೆ ಚಳ್ಳಕೆರೆ ಕಾಟಪ್ಪನಹಟ್ಟಿಯ ಗಿಡ್ಡಜ್ಜ. ಕರಿಕಂಬಳಿ ಹಾಸಿ, ಹಣೆಗೆ ಗಣೆಗೆ ವಿಭೂತಿಯಿಟ್ಟು ಭಯಭಕ್ತಿಯಿಂದ ಗಣೆವಾದ್ಯಕ್ಕೆ ನಮಸ್ಕರಿಸಿ ಹಾಡತೊಡಗಿದರೆ ಗಾನಗಂಧರ್ವರೂ ನಾಚುವ ಮಾದರಿ. ಗಿಡ್ಡಜ್ಜನಿಗೆ ವರದಾನವಾಗಿ ಬಂದಿರುವ ಕಂಚಿನಕಂಠ ಸಿರಿ ಗಣೆನಾದದ ಝೇಂಕಾರ ಕೂಡಿ ಹಾಡುಗಾರಿಕೆಗೆ ಅಪೂರ್ವತೆ ತರಿಸಿದೆ.

ಗಿಡ್ಡಜ್ಜ ಕಾಟಪ್ಪನಹಟ್ಟಿ. ಎತ್ತಪ್ಪನ ದೇವಸ್ಥಾನದ ಗುಡಿಗೌಡರೂ ಹೌದು. ಕಟ್ಟೆಮನೆ ಗುಡಿಮನೆಗಳ ಯಜಮಾನಿಕೆ. ಪಶುಪಾಲನೆ, ಅರ್ಚಕ ವೃತ್ತಿಗಳೂ ಈತನ ಹೆಗಲಮೇಲಿದೆ. ಮೂವರು ಮಕ್ಕಳು. ಅವರೆಲ್ಲರೂ ಕೃಷಿ ಬದುಕಿನವರು. ಇವರ್‍ಯಾರೂ ಹಾಡು ಕಲಿಯಲಿಲ್ಲ ಎಂಬ ಕೊರಗು ಗಿಡ್ಡಜ್ಜನಿಗೆ. ಪಾಳೆಗಾರರ ವಂಶಸ್ಥ ಪಿ.ಆರ್. ವೀರಭದ್ರನಾಯಕರ ಮೂಲಕ ಬೆಳಕಿಗೆ ಬರಲು ಸಾಧ್ಯವಾಯಿತು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಗಿಡ್ಡಜ್ಜನಿಗೆ ಇದೀಗ ೮೦ರ ಪ್ರಾಯ.

ಭದ್ರಾವತಿ, ಚಿತ್ರದುರ್ಗ ಆಕಾಶವಾಣಿಗಳಲ್ಲಿ ಇವರು ಹಾಡಿರುವ ಜುಂಜಪ್ಪನ ಹಾಡುಗಳನ್ನು ಪ್ರಸಾರ ಮಾಡಲಾಗಿದೆ. ಉಡುಪಿಯ ಪ್ರಾದೇಶಿಕ ಜಾನಪದ ಕಲೆಗಳ ಅಧ್ಯಯನ ಕೇಂದ್ರ, ಗಿಡ್ಡಜ್ಜ ಹಾಡಿರುವ ಜುಂಜಪ್ಪನ ಪದಗಳ ಅಡಿಯೋ ವಿಡಿಯೋ ಮಾಡಿಲಾಗಿದೆ. ಸಂಶೋಧಕ ಎಸ್. ಎ. ಕೃಷ್ಣಯ್ಯ ಇದರ ನಿರ್ವಾಹಕರಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಚಿತ್ರದುರ್ಗ ಉತ್ಸವ, ರಾಜ್ಯೋತ್ಸವ ಸಮಾರಂಭಗಳಲ್ಲಿ ಚಳ್ಳಕೆರೆ ತಾಲ್ಲೂಕು ಆಡಳಿತ ಈ ಕಲಾವಿದರನ್ನು ಗೌರವಿಸಿದೆ. ಹಲವು ರಾಜ್ಯಮಟ್ಟದ ಜಾನಪದ ಸಮಾವೇಶ, ಕಲಾಮೇಳಗಳಲ್ಲಿ ಭಾಗವಹಿಸಿ ಜನಪದ ಮಹಾಕಾವ್ಯ ಜುಂಜಪ್ಪನ ಪದ ಹಾಡಿರುವುದು ವಿಶೇಷವಾಗಿದೆ. ಡಾ॥ ಮೀರಾಸಾಬಿಹಳ್ಳಿ ಶಿವಣ್ಣ ಅವರ ಜಾನಪದ ಸಂಶೋಧನೆಗೆ ಆಕರವೂ ಆಗಿರುವ ಗಿಡ್ಡಜ್ಜ ಸದ್ದಿಲ್ಲದ ಜಾನಪದ ಸರದಾರ.

**ಗಿಡ್ಡಜ್ಜ, ಗುಡಿಗೌಡರು,**
**ಕಾಟಪ್ಪನಹಟ್ಟಿ ಚಳ್ಳಕೆರೆ ತಾಲೂಕು.**

# ಗುರುವಯ್ಯ ಒಡೆಯರ್

ಅಧ್ಯಾಪನ, ಯಕ್ಷಗಾನ, ವೇಷಗಾರಿಕೆ, ಭಾಗವಂತಿಕೆ, ವೇಷ ಭೂಷಣಗಳ ತಯಾರಿಕೆ, ಜನಪದ ಸಂಗೀತ ಹೀಗೆ ಬಹುಮುಖಿ ಕಲೆಯ ಮೂರ್ತರೂಪ ಶ್ರೀ ಗುರುವಯ್ಯ ಒಡೆಯರು. ಹುಟ್ಟಿದ್ದು ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆಯಲ್ಲಿ. ತಂದೆ ಚನ್ನಯ್ಯ ಒಡೆಯರು. ತಾಯಿ ಗಂಗಮ್ಮ ಒಡೆಯರು. ಇವರೂ ಉತ್ತಮ ಕಲಾವಿದರು. ಹಾಡುಗಾರಿಕೆಯಲ್ಲಿ ಪಳಗಿದವರು. ತಾಳಿಕಟ್ಟೆ, ಹೊಳಲ್ಕೆರೆ, ಹರ್ತಿಕೋಟೆ, ಸಿರಿಗೆರೆ ಈ ಭಾಗಗಳಲ್ಲಿ ಸದಾ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದವರು. ಅಂಥವರ ಮಗನಾಗಿ ಜನಿಸಿದ ಸಿ. ಗುರುವಯ್ಯ ಒಡೆಯರ್, ತಾಯಿಯ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಯಥಾವತ್ತಾಗಿ ರೂಢಿಸಿಕೊಳ್ಳುವುದಲ್ಲದೆ, ಪರಿಪಕ್ವವಾಗಿ ರೂಪಿಸಿಕೊಂಡ ಕಲೆಯಲ್ಲಿ ವೈವಿಧ್ಯತೆ ತಂದವರು.

ಶ್ರೀ ಸಿ. ಗುರುವಯ್ಯ ಅವರಿಗೆ ಇದೀಗ ಅರವತ್ತೈದು ವರ್ಷಗಳ ಪ್ರಾಯ. ತಮ್ಮ ೩೫ ವರ್ಷಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಿವೃತ್ತರಾದವರು. ತಾವು ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಲೇ ಸಂಗೀತ, ನಾಟಕ, ಯಕ್ಷಗಾನಗಳ ಶಿಕ್ಷಣವನ್ನು ನೀಡುತ್ತಾ ಬಂದರು. ಪೌರಾಣಿಕ ನಾಟಕಗಳ ನಿರ್ದೇಶಕ, ಹಾರ್ಮೋನಿಯಂ ನಿರ್ದೇಶಕರಾಗಿ, ಯಕ್ಷಗಾನ ಭಾಗವತರಾಗಿ, ಮೃದಂಗ ವಾದಕರಾಗಿ ಕಾರ್ಯನಿರ್ವಹಿಸುತ್ತಾ ಬಂದರು. ಭಜನೆ, ಜನಪದ ಸಂಗೀತ, ದಾಸರ ಕೀರ್ತನೆಗಳನ್ನು ತಮ್ಮ ಬದುಕಿನ ಉದ್ದಕ್ಕೂ ಮಾಡುತ್ತಾ ಬಂದರು.

ಸಿ. ಗುರುವಯ್ಯ ಒಡೆಯರ್ ಅವರಿಗೆ ಒಟ್ಟು ಐದು ಜನ ಮಕ್ಕಳು. ಇವರಲ್ಲಿ ನಾಲ್ವರು ಗಂಡುಮಕ್ಕಳಾದರೆ, ಒಂದು ಹೆಣ್ಣು. ಗಂಡುಮಕ್ಕಳು ಒಳ್ಳೆಯ ವಿದ್ಯಾವಂತರು.

ಮೊದಲ ಮಗ ಧಾರ್ಮಿಕ, ಶೈಕ್ಷಣಿಕವಾಗಿ ಪ್ರಬುದ್ಧರು. ಹೃಶಿಕೇಷ, ಹರಿದ್ವಾರಗಳಲ್ಲಿ ವೇದ, ಸಂಸ್ಕೃತ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಕಾಗಿನೆಲೆ ಕನಕಗುರುಪೀಠದ ಹೊಸದುರ್ಗ ಶಾಖಾಮಠದ ಪೀಠಾಧಿಕಾರಿಯಾಗಿದ್ದಾರೆ. ಉತ್ತಮ ಹಾಡುಗಾರರೂ ಹೌದು. ಅಜ್ಜಿಯ ಕಲಾನೈಪುಣ್ಯತೆ, ತಂದೆಯ ಸಂಗೀತ ಪರಿಕರಗಳ ಸಹವಾಸ ಇವರನ್ನು ಸಂಗೀತ ಕಲಾವಿದರನ್ನಾಗಿ ರೂಪಿಸಿರುವುದು ವಾಸ್ತವ ಸಂಗತಿ. ಈಶ್ವರಾನಂದಪುರಿ ಶ್ರೀಗಳು ಜಾತ್ಯಾತೀತ ಮನಃಸ್ಥಿತಿಯ ಉತ್ತಮ ಸಂಘಟಕರೆಂಬುದನ್ನು ಈಗಾಗಲೇ ಸಾಬೀತುಪಡಿಸಿದ್ದಾರೆ.

ಸಿ. ಗುರುವಯ್ಯ ಒಡೆಯರ್ ಡೊಳ್ಳುಕಲೆಯ ಕಲಾವಿದರು. ಹತ್ತಾರು ಶಿಷ್ಯರನ್ನು ತಯಾರಿಸಿರುವುದಲ್ಲದೆ, ಡೊಳ್ಳಿನ ಪರಿಕರ ತಯಾರಿಕೆ, ಡೊಳ್ಳುಕಟ್ಟುವುದೂ ಸೇರಿದಂತೆ ಡೊಳ್ಳುವಾದ್ಯದ ವಾದ್ಯವಿಶೇಷವನ್ನು ಅದರಲ್ಲಿ ಬಳಸುವ ಒಂದೊಂದು ಭಾಗಗಳು ಪೌರಾಣಿಕ ಐತಿಹ್ಯವನ್ನು ನಿರೂಪಿಸುವ ಏಕೈಕ ಕಲಾವಿದರು.

ಮೃದಂಗ, ತಬಲಾ, ತಂತಿವಾದ್ಯ, ತಮಟೆ ವಾದ್ಯವನ್ನು ತಯಾರಿಸುವುದು ಇವರ ಇನ್ನೊಂದು ವಿಶೇಷ. ತಮ್ಮ ತಾತ, ತಂದೆಯವರ ಕಾಲದಿಂದಲೂ ವಾದ್ಯಪರಿಕರಗಳ ತಯಾರಿಕೆಯನ್ನು ಮಾಡಿಕೊಂಡು ಬರುತ್ತಿರುವುದಾಗಿ ಶ್ರೀ ಒಡೆಯರ್ ಹೇಳುತ್ತಾರೆ. ಅಂಥದ್ದೇ ಪರಂಪರೆಯನ್ನು ಕಲಾತ್ಮಕವಾಗಿ, ಸಾಂದರ್ಭಿಕ ಸಂದರ್ಭಗಳಿಗೆ ಒಪ್ಪವಾಗಿ ತಯಾರಿಸಿಕೊಡುವುದು ಇವರ ವಿಶೇಷವಾಗಿದೆ.

ತಾವು ತಯಾರಿಸಿದ ಡೊಳ್ಳನ್ನು ಧಾರವಾಡ, ಶಿವಮೊಗ್ಗ, ಸಾಗರ, ಚಿಕ್ಕಮಗಳೂರು, ಕಾರವಾರ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಿಗೆ ಪೂರೈಸಿದ ಸಿ. ಗುರುವಯ್ಯ ಒಡೆಯರ್‌ರವರು, ಒಂದು ಕ್ಷಣಕಾಲವೂ ವ್ಯಯಮಾಡದ ಕರ್ಮಯೋಗಿ. ಸದಾ ಚಟುವಟಿಕೆಯಿಂದ ಕೂಡಿರುವ ಇವರು ಪ್ರಚಾರ, ಸಭೆ, ಸಮಾರಂಭಗಳಿಂದ ದೂರ ಉಳಿಯುವರು. ಕಲೆಯನ್ನೇ ದೇವರು ಎಂದು ಭಾವಿಸಿರುವ ಇವರು ರಾಜಾ ಸತ್ಯವ್ರತ, ದಕ್ಷಯಾಗ, ಊರ್ಮಿಳಾ ಪರಿಣಯ, ಕರ್ಣಾರ್ಜುನರ ಕಾಳಗ, ದುಶ್ಯಾಸನನ ಕಥೆ, ಲವಕುಶರ ಕಾಳಗ ಮುಂತಾದ ಯಕ್ಷಗಾನವನ್ನು ಕಳೆದ ೪೦ ವರ್ಷಗಳಿಂದ ಕಲಿಸುತ್ತಲೇ ಬಂದಿದ್ದಾರೆ. ಇದರ ಜೊತೆಗೆ ತಮ್ಮದೇ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ, ಭಕ್ತ ಕನಕದಾಸ, ಕಿತ್ತೂರು ಚೆನ್ನಮ್ಮ, ವೀರ ಮದಕರಿನಾಯಕ ಈ ಐತಿಹಾಸಿಕ ನಾಟಕಗಳಿಗೆ ಸಮರ್ಥವಾಗಿ ನಿರ್ದೇಶನ ಮಾಡಿದ್ದಾರೆ.

ಇವರ ಕಲಾ ಬದುಕನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಗೌರವಿಸಿದೆ. ಜಿಲ್ಲಾಮಟ್ಟದಲ್ಲಿ ಉತ್ತಮ ಕಲಾಶಿಕ್ಷಕ, ಆದರ್ಶ ಶಿಕ್ಷಕ ಗೌರವಗಳೂ ಲಭ್ಯವಾಗಿವೆ. ಸಿರಿಗೆರೆ, ಮುರುಘಾಮಠ ಹೊನ್ನಾಳಿ ಮಠಗಳು ಇವರನ್ನು ಸತ್ಕರಿಸಿವೆ. ಹತ್ತಾರು ಕನ್ನಡಪರ

ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಮಡದಿ ಸತ್ಯಮ್ಮರೊಂದಿಗೆ ಯಾವುದೋ ತೋರಿಕೆ, ಆರ್ಭಟಗಳಿಲ್ಲದೆ ತಮ್ಮ ಪಾಡಿಗೆ ತಾವು ಸಂಗೀತ ನಿರ್ದೇಶನದಲ್ಲೋ, ವಾದ್ಯ ತಯಾರಿಕೆಯಲ್ಲೋ ತಲ್ಲೀನರಾಗಿರುವ ಶ್ರೀ ಒಡೆಯರ್ ಬೀರೇದೇವರ ಕಾವ್ಯ ಹಾಡುವುದನ್ನು ಅಭ್ಯಾಸ ಮಾಡಿಕೊಂಡು ವಿಶೇಷ ಸಂದರ್ಭಗಳಲ್ಲಿ ಗೌರವಾನ್ವಿತ ಆಹ್ವಾನಿತರಾಗಿ ಕಾವ್ಯ ಹಾಡುತ್ತಾರೆ.

**ಸಿ. ಗುರುವಯ್ಯ ಒಡೆಯರ್,**
**ತಾಳಿಕಟ್ಟೆ, ಹೊಳಲ್ಕೆರೆ ತಾಲೂಕು.**

# ಸುಡುಗಾಡಮ್ಮ

ಚಿತ್ರದುರ್ಗ ಜಿಲ್ಲೆಯ ಹಿರಿಯ ಜನಪದ ಹಾಡುಗಾರ್ತಿಯಾಗಿದ್ದ ಸುಡುಗಾಡಮ್ಮ ತಮ್ಮ ೯೦ನೇ ವಯಸ್ಸಿಗೆ ತೀರಿಕೊಂಡರು. ತುರುವನೂರಿನ ತಿಪ್ಪಣ್ಣ ಓಬವ್ವನ ಹನ್ನೆರಡನೆಯ ಮಗು. ಓಬವ್ವನಿಗೆ ಹುಟ್ಟಿದ್ದ ೧೧ ಮಕ್ಕಳೆಲ್ಲರೂ ತೀರಿಕೊಂಡ ಮೇಲೆ ೧೨ನೆಯವಳಾಗಿ ಹುಟ್ಟಿದ್ದರಿಂದ ಊರಿನ ಹಿರಿಯರು ಸುಡುಗಾಡಿನ ಹೆಸರಿಟ್ಟರೆ ಮಗು ಉಳಿಯುವುದೆಂಬ ನಂಬಿಕೆಯಿಂದಾಗಿ ಮಗುವಿಗೆ ಸುಡುಗಾಡಮ್ಮ ಎಂದು ಹೆಸರಿಟ್ಟಿರುವುದಾಗಿ ಹೇಳಲಾಗುತ್ತದೆ.

ಸುಡುಗಾಡಮ್ಮನನ್ನು ಇದೇ ಗ್ರಾಮದ ಶೆಟಿಗಪ್ಪನವರ ತಿಪ್ಪಯ್ಯನವರೊಂದಿಗೆ ವಿವಾಹ ಮಾಡಿದರು. ಸುಡುಗಾಡಮ್ಮನವರು ಚಿಕ್ಕ ವಯಸ್ಸಿನಲ್ಲೇ ಹಾಡುವುದನ್ನು ಕಲಿತರು. ಶ್ರೀಮತಿ ಮಲ್ಲವ್ವ ಎಂಬ ಹಾಡುಗಾರ್ತಿಯಿಂದ ಹಾಡುವುದನ್ನು ಕಲಿತರು. ಮದುವೆ, ದೇವರ ಕಾರ್ಯ, ಹೊಲ-ತೋಟಗಳ ಕೆಲಸದಲ್ಲಿ ಇವರು ಕೆಲಸದೊಂದಿಗೆ ಹಾಡುವುದು ಕಾಯಕ ಮಾಡಿಕೊಂಡರು. ಊರದೇವರ ಉತ್ಸವ, ಮದುವೆ, ಮೈನೆರೆಯುವ ಕಾರ್ಯಗಳಲ್ಲಿ ಸದಾ ಹಾಡುತ್ತಾ ಬಂದ ಸುಡುಗಾಡಮ್ಮ ಅದ್ಭುತ ಕಲಾವಿದೆಯಾಗಿ ರೂಪುಗೊಂಡರು.

ಹದಿನೈದಕ್ಕೂ ಹೆಚ್ಚು ಮಹಿಳೆಯರೊಂದಿಗೆ ಹಾಡುಗಾರಿಕೆಯನ್ನು ಕಲಿತಿರುವ ಸುಡುಗಾಡಮ್ಮ ಇದೇ ಊರಿನ ತಿಪ್ಪಮ್ಮ, ಈರಮ್ಮ, ರುದ್ರಮ್ಮ ಇವರ ಹಾಡುಗಾರಿಕೆಯನ್ನು ಇಂದಿಗೂ ಮುಂದುವರಿಸಿದ್ದಾರೆ. ಸುಡುಗಾಡಮ್ಮನ ಮೂವರು ಮಕ್ಕಳಲ್ಲಿ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ. ಇವರ್‍ಯಾರೂ ಹಾಡುಗಾರಿಕೆಯನ್ನು ಮುಂದುವರಿಸಲಿಲ್ಲ. ಈ ಕೊರಗು ಸುಡುಗಾಡಮ್ಮನಿಗೆ ಮೊದಲಿನಿಂದಲೂ ಇದ್ದಿತೆಂದು ರುದ್ರಮ್ಮ ಹೇಳುತ್ತಾರೆ.

ಸುಡುಗಾಡಮ್ಮ ಒಳ್ಳೆಯ ಸ್ವಭಾವದ ಹೆಣ್ಣುಮಗಳು. ಕಾಳಿಂಗರಾಯನ ಪದ, ಮಹಾಭಾರತದ ಹಾಡುಗಳು, ಗಂಗೆ–ಗೌರಿ ಹಾಡುಗಳನ್ನು ಸೊಗಸಾಗಿ ಹಾಡುತ್ತಿದ್ದರು. ಕೂಲಿಕೆಲಸದ ತುಂಬೆಲ್ಲಾ ಹಾಡುತ್ತಿದ್ದ ಇವರು ಕೆಲಸವನ್ನು ಹಗುರವಾಗಿ ಮಾಡುತ್ತಿದ್ದರು. ತಮ್ಮ ಭಾಗದ ಯಾವುದೇ ದೇವರಕಾರ್ಯ, ಮದುವೆ, ಗುಡಿಸಲು ಶಾಸ್ತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಈಕೆ ಹಾಡುಗಾರಿಕೆಗಾಗಿ ಎಂದೆಂದೂ ಸಂಭಾವನೆ ಕೇಳಿದವರಲ್ಲ.

ಡಾ॥ ಮೈಲನಹಳ್ಳಿ ರೇವಣ್ಣನವರು ಸಂಪಾದಿಸಿರುವ ಚಿತ್ರದುರ್ಗದ ಸುತ್ತಿನ ಜನಪದ ಕಾವ್ಯಗಳು ಕೃತಿಯಲ್ಲಿ ಇವರು ಹಾಡಿರುವ ದ್ರೌಪದಿ ಮತ್ತು ಅರ್ಜುನ, ಧರ್ಮರಾಯ ಜನಪದ ಮಹಾಭಾರತಕ್ಕೆ ಹಲವು ಆಕರಗಳನ್ನು ಒದಗಿಸಿದೆ.

ಸುಡುಗಾಡಮ್ಮ
ತುರುವನೂರು, ಚಿತ್ರದುರ್ಗ ಜಿಲ್ಲೆ.

# ಹನುಮಂತಪ್ಪ

ಹರೆ, ಉರಿಮೆ ಎಂಬ ಹೆಸರುಗಳಲ್ಲಿ ಕರೆಯಲ್ಪಡುವ ಈ ಚರ್ಮವಾದ್ಯ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಗ್ರಾಮೀಣ ಪರಿಸರದಲ್ಲಿ ಇಂದಿಗೂ ಮನೆಮಾತಾಗಿರುವ 'ಹರಿಗೆ ಕುಣಿಯೊ ಮಾರವ್ವನಿಗೆ ಹರೆ ಬಡಿದರೆ ನಿಂತಾಳ' ಗಾದೆಮಾತು ಹರೆ ಅಥವಾ ಉರಿಮೆ ವಾದ್ಯದ ಮಹತ್ವವನ್ನು ಹೇಳುತ್ತದೆ. ಅದೊಂದು ಚರ್ಮವಾದ್ಯವಾಗಿದ್ದು ಹೆಣ್ಣು ದೇವತೆಗಳ ಆರಾಧನೆಯ, ಉತ್ಸವ, ಜಾತ್ರೆಯ ಸಂದರ್ಭದಲ್ಲಿ ಉರುಮೆ ವಾದನ ಅತ್ಯಂತ ಅಗತ್ಯವಾದುದು. ೧೨-೧೫ ಅಂಗುಲ ಉದ್ದದ ಕಂಚು ಅಥವಾ ಹಿತ್ತಾಳೆ ಕೊಳಗದ ಎರಡೂ ಬಾಯಿಗೆ ಆಡಿನ ಚರ್ಮವನ್ನು ಹದವಾಗಿ ಕಟ್ಟಿ ತೆಂಗಿನ ಅಥವಾ ಈಚಲ ಸಣ್ಣಕಡ್ಡಿಯಿಂದ ನಯವಾಗಿ ಬಡಿಯುವುದು ಇದರ ವಿಶೇಷ.

ಚಿತ್ರದುರ್ಗ ಜಿಲ್ಲೆಯ ಚೇಳಂಗಿಯ ಹನುಮಂತಪ್ಪ, ಈ ಭಾಗದ ಪ್ರಸಿದ್ಧ ಉರುಮೆ ವಾದಕ. ಆದಿದ್ರಾವಿಡ ಜನಾಂಗಕ್ಕೆ ಸೇರಿದ ಈತನ ವಯಸ್ಸು ೬೦. ತಂದೆ ಮಾರಪ್ಪ ಅವರಿಂದ ಶಾಸ್ತ್ರೀಯವಾಗಿ ಉರುಮೆ ವಾದ್ಯವನ್ನು ಕಲಿತಿರುವ ಹನುಮಂತಪ್ಪ ತಮ್ಮ ತಂದೆಯವರ ಕಾಲದಿಂದಲೂ ಉರುಮೆಯನ್ನು ವೃತ್ತಿ ಹಾಗೂ ಹವ್ಯಾಸಿ ಈ ಎರಡೂ ಪರಂಪರೆಯಲ್ಲಿ ನುಡಿಸುತ್ತಾ ಬರುತ್ತಿರುವುದು ವಿಶೇಷವಾಗಿದೆ.

ಹನುಮಂತಪ್ಪನವರು ತಮ್ಮ ೧೦ನೇ ವಯಸ್ಸಿನಿಂದ ಉರುಮೆ ಕಲೆಯನ್ನು ಒಂದು ವ್ರತವನ್ನಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ. ಇವರಿಗೆ ಎಂ.ಡಿ. ಕೋಟೆಯ ಕಮಲಮ್ಮ ಅವರೊಂದಿಗೆ ೧೯೭೧ರಲ್ಲಿ ವಿವಾಹವಾಗಿದೆ. ಮೂವರು ಗಂಡುಮಕ್ಕಳು, ಒಂದು ಹೆಣ್ಣುಮಗುವಿನ ತುಂಬು ಕುಟುಂಬ. ಮೊದಲ ಮಗ ಸರ್ಕಾರಿ ನೌಕರಿಯಲ್ಲಿದ್ದು ಉಳಿದಿಬ್ಬರು ಗಂಡುಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ, ದಾವಣಗೆರೆ ಈ ನಾಲ್ಕು ತಾಲೂಕುಗಳಲ್ಲಿ ತಮ್ಮ ವಿಶೇಷ ವಾದ್ಯಗಾರಿಕೆಯಿಂದ ಜನಪ್ರಿಯವಾಗಿರುವ ಹನುಮಂತಪ್ಪ ದೇವರ ಜಾತ್ರೆ, ಉತ್ಸವಗಳಲ್ಲಿ ತಪ್ಪದೆ ಆಹ್ವಾನಿತರಾಗಿ ಕಲಾಸೇವೆ ಮಾಡುತ್ತಾ ಬಂದಿದ್ದಾರೆ.

ಉರುಮೆ ಕಲೆಯನ್ನು ಕರ್ನಾಟಕ ಸರ್ಕಾರದ ಹಲವು ಮಹತ್ವದ ಸಮಾರಂಭಗಳಲ್ಲಿ ಪ್ರದರ್ಶಿಸಿರುವ ಹಿರಿಮೆಯೂ ಇವರದು. ೨೦೦೫ರಂದು ಮೈಸೂರಿನ ದಸರಾ ಮಹೋತ್ಸವದಲ್ಲಿ ನೀಡಿದ ಉರುಮೆ ಪ್ರದರ್ಶನಕ್ಕೆ ಮೆಚ್ಚುಗೆ ಸೂಚಿಸಿ ದಸರಾ ಉತ್ಸವ ಸಮಿತಿ ಅಭಿನಂದಿಸಿದೆ.

ಹಂಪಿ ಉತ್ಸವ, ದುರ್ಗೋತ್ಸವ, ನುಡಿಹಬ್ಬ ಹಾಗೂ ಜನಪದ ಜಾತ್ರೆ ಉತ್ಸವಗಳಲ್ಲಿ ಆಹ್ವಾನಿತ ಕಲಾವಿದರಾಗಿ ಭಾಗವಹಿಸಿ ಕಲಾಪ್ರದರ್ಶನ ನೀಡಿದ್ದಾರೆ. ಚಿತ್ರದುರ್ಗ ಆಕಾಶವಾಣಿಯಲ್ಲೂ ಇವರ ಹರೇವಾದ್ಯದ ಕಾರ್ಯಕ್ರಮ ಪ್ರಸಾರವಾಗಿದೆ. ಚಿತ್ರದುರ್ಗದ ಮುರುಘಾಮಠದ ವತಿಯಿಂದ ನಡೆಯುವ ಶರಣ ಸಂಸ್ಕೃತಿ ಉತ್ಸವದಲ್ಲಿ ಸತತವಾಗಿ ೨೫ ವರ್ಷಗಳಿಂದ ಉರುಮೆ ವಾದ್ಯ ಪ್ರದರ್ಶನ ನೀಡುತ್ತಾ ಬಂದಿರುವುದು ಇವರ ವಿಶೇಷತೆ. ಜನಪದ ಕಲೆಯನ್ನೇ ನಂಬಿ ಬದುಕುತ್ತಿರುವ ಈ ಹಿರಿಯ ಕಲಾವಿದರಿಗೆ ಸರ್ಕಾರದ ಮಾಸಾಶನ ಲಭ್ಯವಾಗಿದೆ. ತಮ್ಮ ಗ್ರಾಮದ ಹತ್ತು ಯುವಕರಿಗೆ ಉರುಮೆ ವಾದ್ಯವನ್ನು ಗುರುಶಿಷ್ಯ ಮಾದರಿಯಲ್ಲಿ ಕಲಿಸುತ್ತಾ ಬಂದಿದ್ದಾರೆ.

ಹನುಮಂತಪ್ಪ,<br>ಚೀಳಂಗಿ ಗ್ರಾಮ, ಭರಮಸಾಗರ ಹೋ.<br>ಚಿತ್ರದುರ್ಗ ತಾಲೂಕು.

# ಚಿನ್ನಮ್ಮ

ಚಿನ್ನಮ್ಮ ಸೋಬಾನೆ, ತತ್ವಪದ ಕಥನಗೀತೆಗಳ ಸರದಾರೆ. ಮಧುರ ಕಂಠದ ಈ ಕೋಗಿಲೆಗೆ ಇದೀಗ ೭೬ ವರ್ಷ ವಯಸ್ಸು. ಬೋವಿ ಜಯಮ್ಮನ ಸಹವಾಸದಿಂದಾಗಿ ಹಾಡುಗಾರಿಕೆಗಾಗಿ ದೇಶ ಸುತ್ತಿದ ಹಿರಿಮೆ ಇವರದು. ಚಿನ್ನಮ್ಮ ಹುಟ್ಟಿದ್ದು ೧೯೨೫ರ ಸುಮಾರು ಆಗಿನ ದಾವಣಗೆರೆ ತಾಲೂಕಿನ ಮಾಯಕೊಂಡದ ಸಮೀಪದ ಹುಚ್ಚೇನಹಳ್ಳಿಯವರು. ತಂದೆ ಗಿರಿತಿಮ್ಮಪ್ಪ, ತಾಯಿ ತಿಮ್ಮಮ್ಮ. ಇವರಿಗೆ ಐದು ಜನ ಮಕ್ಕಳು. ೩ ಗಂಡು, ೨ ಹೆಣ್ಣು ಇವರ್‍ಯಾರೂ ಓದಿದವರಲ್ಲ. ಚಿನ್ನಮ್ಮ ಹಾಡುಗಳನ್ನು ಕಲಿತದ್ದು ತಮ್ಮ ಅಜ್ಜಿ ಅಕ್ಕಮ್ಮ ಅವರಿಂದ. ತನ್ನ ಆರನೇ ವಯಸ್ಸಿನಲ್ಲೇ ಹಾಡುವುದನ್ನು ಅಭ್ಯಾಸ ಮಾಡತೊಡಗಿದರು. ಮುಂದೆ ಚಿತ್ರದುರ್ಗದ ಕೆಳಕೋಟೆಗೆ ಮದುವೆಯಾಗಿ ಬಂದರು. ಗಾರೆಕೆಲಸದ ಸಿದ್ದಪ್ಪ ಇವರ ಗಂಡ, ಇವರಿಗೆ ಮೂರು ಹೆಣ್ಣು, ಎರಡು ಗಂಡುಮಕ್ಕಳು. ಎಲ್ಲರದ್ದೂ ವಿವಾಹವಾಗಿ ಮೊಮ್ಮಕ್ಕಳಿದ್ದಾರೆ. ಆದರೆ ಇವರ್‍ಯಾರಿಗೂ ಹಾಡುವ ಹವ್ಯಾಸ ಇಲ್ಲದಿರುವುದು ಚಿನ್ನಮ್ಮ ಅವರ ಕೊರಗು.

ಚಿನ್ನಮ್ಮ ಬಾಲ್ಯದಲ್ಲಿ ಕಲಿತಿದ್ದ ಹಾಡುಗಳಿಗೆ ನಿಜವಾದ ಧ್ವನಿ ತುಂಬಿದವರು ಬೋವಿ ಜಯಮ್ಮನವರು. ಅಕ್ಕಪಕ್ಕದ ಮನೆಗಳಲ್ಲಿ ಒಡನಾಡಿಯಾಗಿ ಬೆಳೆಯುತ್ತಾ, ಪ್ರತಿ ಕಾರ್ಯಕ್ರಮದಲ್ಲೂ ಜೊತೆಯಾಗಿ ಹಾಡುತ್ತಾ ಬಂದರು. ಇವರಲ್ಲಿ ಜಯಮ್ಮ ಮುಮ್ಮೇಳವಾದರೆ ಚಿನ್ನಮ್ಮ ಹಿಮ್ಮೇಳ ಕಲಾವಿದೆ. ಗಂಗೆ-ಗೌರಿ ಕಥೆ, ಬಾಲನಾಗಮ್ಮ, ಗುಣಸಾಗರಿ ಕಥೆ, ಮದುಗದ ಕೆಂಪಮ್ಮ ಈ ಕಥನಗೀತೆಗಳನ್ನು ಸೊಗಸಾಗಿ ಹಾಡುತ್ತಾರೆ. ಚಿತ್ರದುರ್ಗದ ಪಾಳೆಯಗಾರ ಮದಕೇರಿ ನಾಯಕರ ಮೇಲೆ ಕಥನಗೀತೆಗಳನ್ನು ಹಾಡುವುದರಲ್ಲಿ ಇವರು ಪ್ರಖ್ಯಾತರು.

ಬೀಸುವ ಪದ, ದೇವರ ಪದ, ಸೋಬಾನೆ, ಮಂಗಳಾರತಿ ಪದ ಹಾಡುವುದು ಇವರ ವಿಶೇಷ. ಚಿತ್ರದುರ್ಗದ ಕೆಳಕೋಟೆ ಬಡಾವಣೆಯಲ್ಲಿ ಜನಪದ ಹಾಡುಗಾರ್ತಿಯರ ಸಂಘ ಸ್ಥಾಪಿಸಿಕೊಂಡು ಹತ್ತಾರು ಆಸಕ್ತ ಮಹಿಳೆಯರಿಗೆ ಜನಪದ ಸಂಗೀತ ಕಲಿಸಿರುವುದು ಇವರ ವಿಶೇಷ. ಇದಕ್ಕೆ ಬೋವಿ ಜಯಮ್ಮ ಗುರುರೂಪದಲ್ಲಿ ಮಾರ್ಗದರ್ಶನ ಮಾಡುತ್ತಿರುವುದು ಇವರ ಸಂಘಟನೆಗೆ ಮೆರುಗು ಬಂದಿದೆ. ೧೯೬೦ರಿಂದಲೂ ಬೋವಿ ಜಯಮ್ಮ ಅವರೊಂದಿಗೆ, ಧಾರವಾಡ, ಭದ್ರಾವತಿ ಆಕಾಶವಾಣಿಗಳಲ್ಲಿ ಹಾಡತೊಡಗಿದ ಚಿನ್ನಮ್ಮ, ಮೈಸೂರು ದಸರಾ ವಸ್ತುಪ್ರದರ್ಶನ ಸಮಾರಂಭ (೧೯೮೫)ರಲ್ಲಿ ಅಖಿಲ ಭಾರತ ಜಾನಪದ ಸಮಾವೇಶ (೧೯೯೯)ರಲ್ಲಿ ಹಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಜನಪದ ಅಧ್ಯಯನ ವಿಭಾಗದಲ್ಲಿ ಕಥನ ಗೀತೆಗಳನ್ನು ಹಾಡಿದ್ದಾರೆ. ಜಾನಪದ ಅಕಾಡೆಮಿ ಏರ್ಪಡಿಸಿದ್ದ ಗಡಿನಾಡ ಜಾನಪದ ಸಂಸ್ಕೃತಿ ಉತ್ಸವ, ಪಾವಗಡ ೨೦೦೫, ಪರಶುರಾಮಪುರ ೨೦೦೬ ಹಾಗೂ ಚಿತ್ರದುರ್ಗ ಉತ್ಸವ, ದಾವಣಗೆರೆ ಉತ್ಸವ, ಮುರುಘಾಮಠದ ಸಂಸ್ಕೃತಿ ಉತ್ಸವ, ಆದಿಚುಂಚನಗಿರಿ ಜನಪದ ಕಲಾಮೇಳಗಳಲ್ಲೂ ಭಾಗವಹಿಸಿ, ಜನಪದ ಸಂಗೀತ ನೀಡಿರುವ ಚಿನ್ನಮ್ಮನವರಿಗೆ ಅವರ ವಿಶೇಷ ಹಾಡುಗಾರಿಕೆಗಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೫ ನೇ ಸಾಲಿನ ಜನಪದ ಸಾಧನಾ ಪ್ರಶಸ್ತಿ ನೀಡಿ ಗೌರವಿಸಿದೆ.

ಕಂಚಿನ ಕಂಠ, ಹಾಡುವ ಉತ್ಸಾಹದ ತೀವ್ರತೆಯಿಂದಾಗಿ ಇಂದಿಗೂ ಹಾಡುಗಾರಿಕೆಗಾಗಿ ಚಿತ್ರದುರ್ಗದಾದ್ಯಂತ ಕಾರ್ಯಕ್ರಮ ನೀಡುತ್ತಿರುವ ಚಿನ್ನಮ್ಮ ಒಂದು ಅರ್ಥದಲ್ಲಿ ಹಾಡುಗಾರಿಕೆಯ ಕಣಜ. ಇವರು ಹಾಡಿರುವ ಮೈಲಾರಲಿಂಗನ ಕಥನಗೀತೆಯನ್ನು ಡಾ|| ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿದ್ದಾರೆ.

**ಚಿನ್ನಮ್ಮ,**
**ಜನಪದ ಹಾಡುಗಾರ್ತಿ,**
**ಕೆಳಕೋಟೆ, ಚಿತ್ರದುರ್ಗ ಟೌನ್.**

## ವೀರಭದ್ರಯ್ಯ

ಜನಪದ ಸಂಗೀತ, ಅಧ್ಯಾಪನ, ಸಾಹಿತ್ಯ, ಕಲಾ ಸಂಘಟನೆ, ಪತ್ರಿಕೋದ್ಯಮ ಈ ಬಗೆಯ ಬಹುಮುಖ ವ್ಯಕ್ತಿತ್ವದ ಪ್ರೊ. ಹೆಚ್. ವಿ. ವೀರಭದ್ರಯ್ಯನವರು ಹುಟ್ಟಿದ್ದು ೨೩-೧೧-೧೯೩೭ರಂದು. ಹಿರಿಯೂರು ತಾಲೂಕು ಹರ್ತಿಕೋಟೆಯಲ್ಲಿ. ತಂದೆ ಎನ್. ವೀರಯ್ಯ, ತಾಯಿ ಮುದ್ದುವೀರಮ್ಮ. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹರ್ತಿಕೋಟೆ, ಹಿರಿಯೂರುಗಳಲ್ಲಿ ಮಾಡಿದ ಇವರು ಬಿ. ಎ. ಪದವಿಯನ್ನು ತುಮಕೂರಿನ ಸರ್ಕಾರಿ ಕಾಲೇಜಿನಿಂದ ಪಡೆದು ಎಂ.ಎ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಡೆದರು.

೧೯೬೭ರಿಂದ ತುಮಕೂರಿನ ಸಿದ್ಧಗಂಗಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರ್ಪಡೆ, ನಂತರ ರೀಡರ್ ಆಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ, ೧೯೭೩-೧೯೭೪ವರೆಗೆ ಸಿದ್ಧಗಂಗಾ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ನಂತರ ೧೯೮೩ರಿಂದ ತುಮಕೂರಿನಲ್ಲಿ ಪ್ರಾರಂಭವಾದ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಣೆ.

ಹರ್ತಿಕೋಟೆ ಪ್ರಮುಖವಾಗಿ ಸಾಂಸ್ಕೃತಿಕ ನೆಲ. ಹರ್ತಿವೀರಭದ್ರೇಶ್ವರ, ಗುರು ರೇವಣಸಿದ್ಧೇಶ್ವರ ದೇವಾಲಯ, ಮಠಗಳು ಆರಂಭದಿಂದ ಸಂಗೀತ-ಉಪನ್ಯಾಸಗಳ ಕೇಂದ್ರ, ನೂರಾರು ಜನಪದ ಕಲಾವಿದರಿಗೆ ಆಶ್ರಯ ನೀಡಿದೆ. ಅಪೂರ್ವ ಜನಪದ ಕಲಾವಿದೆಯರಾದ ಹೆಂಜಮ್ಮ, ತೋಪಮ್ಮ, ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅಂಥವರನ್ನು ರೂಪಿಸಿ ಹಿರಿಮೆಯೂ ಇಲ್ಲಿನ ಸಾಂಸ್ಕೃತಿಕ ನೆಲೆಗಿದೆ. ಹೆಚ್. ವಿ. ವೀರಭದ್ರಯ್ಯ ಇದೇ ಹಾದಿಯಲ್ಲಿ ಬಂದವರು. ಇಂದು ಹೆಚ್‌ವಿವಿ ಅಂದರೆ ಜನಪದ

ಕೋಗಿಲೆ, ಬಯಲುಸೀಮೆಯ ಜಾನಪದ ಸಂಪನ್ನ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ೧೦ನೇ ವಯಸ್ಸಿನಿಂದಲೇ ಜನಪದ ಗೀತೆಗಳನ್ನು ಹಾಡುತ್ತಾ ಬಂದ ಇವರು, ಕೋಲುಪದ, ತತ್ವಪದ, ಮಂಗಳಾರತಿ ಪದ, ಲಾಲಿಪದ, ಕೃಷಿಸಂಬಂಧಿ ಪದಗಳನ್ನು ಸಭೆಸಮಾರಂಭಗಳಲ್ಲಿ ವ್ರತದ ಮಾದರಿ ಯಲ್ಲಿ ಹಾಡುತ್ತಾ ಜನಪದ ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಆರಂಭದಿಂದಲೂ ಮಾಡುತ್ತಾ ಬಂದರು.

ಹಾಡುತ್ತಾ, ಹಾಡುಗಳ ಬಗೆಗೆ ಮಾತನಾಡುತ್ತಾ ಬಂದ ಪ್ರೊ. ಹೆಚ್‌ವಿವಿ ಅವರು ಜನಪದ ಸಂಸ್ಕೃತಿ ಕುರಿತು ವಿಶ್ಲೇಷಣಾತ್ಮಕ ಬರಹಗಳನ್ನು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಜಾನಪದ ಸಾಹಿತ್ಯದಲ್ಲಿ ಬಸವಣ್ಣ, ಮದಲಿಂಗನಕಣಿವೆ, ಜಾನಪದ ಸಂಸ್ಕೃತಿಗೆ ಇವರು ನೀಡಿರುವ ಮೌಲಿಕ ಕೃತಿಗಳು. ಇದಲ್ಲದೆ ಲೋಕದ ಡೊಂಕು, ಭೂಮಿ ಇಲ್ಲದೆ ಬಂಡಿ ನಡೆದಿದೆ, ಕಾಯಕ ನಮನ, ಹೇಮಲತೆ ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವಲ್ಲದೆ ದಾಸೋಹಸಿರಿ, ವಜ್ರಗಂಗಾ, ಅಮೃತಗಂಗಾ ಇವರು ಸಂಪಾದಿಸಿರುವ ಪ್ರಮುಖ ಸಾಂದರ್ಭಿಕ ಗ್ರಂಥಗಳು. ಪ್ರೊ. ವೀರಭದ್ರಯ್ಯನವರು ಸಂಪೂರ್ಣ ಜಾನಪದ ಮನಸ್ಥಿತಿಯವರು. ತಾವು ರಚಿಸುವ ಸೃಜನ–ಜನಪದ, ಸಂಪಾದಿತ ಕೃತಿಗಳಲ್ಲೂ ಜಾನಪದತನವನ್ನು ಅಚ್ಚೊತ್ತಿ ಬಿಡುತ್ತಾರೆ. ಇದೇ ಇವರ ಕೃತಿಗಳ ವಿಶೇಷವಾಗಿದೆ.

ವರಗುರು ಸಿದ್ಧಗಂಗಾ ಶ್ರೀಗಳ ಅಕ್ಕರೆ, ಹಾರೈಕೆಯಲ್ಲಿಯೇ ಬೆಳೆದ ಇವರು ಶ್ರೀಮಠದ 'ಸಿದ್ಧಗಂಗಾ' ಮಾಸಪತ್ರಿಕೆಯ ಸಂಪಾದಕರಾಗಿ ಅದಕ್ಕೊಂದು ಭವ್ಯ ಮೆರುಗನ್ನು ನೀಡಿದರು. ಪತ್ರಿಕೆಯ ಮೌಲ್ಯ, ಸಾಮಾಜಿಕ ಕಳಕಳಿಯಿಂದ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದೆ. ಇದರ ರೂವಾರಿ ಪ್ರೊ. ಹೆಚ್‌ವಿವಿ ಎಂಬುದು ಗಮನಾರ್ಹ ಸಂಗತಿ. ಸಿದ್ಧಗಂಗಾ ಮಠದ ಜೀವಚೇತನದಂತಿರುವ ಇವರು 'ತಂದೆ ಸಿದ್ಧಗಂಗಾ ಗುರುವೆ ಕೃಪೆಯಾಗು' ಎಂಬ ಅಂಕಿತದ್ಲಿ 'ಶ್ರೀ ಸಿದ್ಧಗಂಗಾ ಗುರುಕರುಣ ತ್ರಿವಿಧಿ' ಎಂಬ ೫೬೦೦ ತ್ರಿಪದಿಗಳನ್ನು ರಚಿಸಿದ್ದಾರೆ.

ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಪ್ರಮುಖ ಸಾಂಸ್ಕೃತಿಕ ಸಮಾರಂಭಗಳಲ್ಲಿ ಕಳೆದ ೫೦ ವರ್ಷಗಳಿಂದಲೂ ನಿರಂತರವಾಗಿ ಹಾಡುತ್ತಾ ಬಂದಿರುವ ಇವರು, ಸಿದ್ಧಗಂಗಾ ಮಠದ ಕಲಾವಿದರನ್ನು ಸಂಘಟಿಸಿ, ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿಯ ಉಗಮಕ್ಕೂ ಪ್ರೇರಕರು. ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಅಲ್ಲಮಪ್ರಭುವಿನ ಪಾತ್ರದಲ್ಲಿ ರಾಜ್ಯಾದ್ಯಂತ ೮೨೬ ಪ್ರಯೋಗಗಳನ್ನು ಪ್ರದರ್ಶಿಸಿರುವುದು ಇವರ ವಿಶೇಷ. ಈ ನಾಟಕದ ನಿರ್ದೇಶಕರಾಗಿ, ನಟರಾಗಿ, ಗಾಯಕರಾಗಿ ಈ ನಾಟಕದ ಪ್ರೇರಕ ರೂಪವಾಗಿರುವುದು ಗಮನಾರ್ಹ ಸಂಗತಿ. ಇಲ್ಲೆಲ್ಲಾ ಜನಪದ ಆಚರಣೆ, ಸಂಪ್ರದಾಯ, ಗ್ರಾಮ್ಯ ಸಂಸ್ಕೃತಿಯನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

ಅಸಮಾನ್ಯ ವ್ಯಕ್ತಿತ್ವದ, ಸಾಧುರೂಪದ ಈ ಹಿರಿಯ ಕಲಾವಿದರಿಗೆ ನಾಡಿನಾದ್ಯಂತ ಗೌರವಾದರಗಳು ಸಂದಾಯವಾಗಿವೆ. ಕರ್ನಾಟಕ ಸರ್ಕಾರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಸದಸ್ಯರನ್ನಾಗಿ ೨೦-೬-೨೦೦೧ ರಿಂದ ೧೩-೬-೨೦೦೭ರವರೆಗೆ ನೇಮಿಸಿತ್ತು. ೧೯೯೭ರಲ್ಲಿ ಹಿರಿಯೂರಿನಲ್ಲಿ ನಡೆದ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಗೌರವಿಸಿದೆ. ಅಕಾಡೆಮಿ, ಸಾಹಿತ್ಯ ಸಮ್ಮೇಳನ, ಗಡಿನಾಡ ಉತ್ಸವಗಳಲ್ಲಿ ಇವರನ್ನು ಅಧ್ಯಕ್ಷರಾಗಿ, ಉದ್ಘಾಟಕರನ್ನಾಗಿ ಆಹ್ವಾನಿಸಿ ಗೌರವ ತೋರಿಸಿದೆ.

ಉದ್ಯೋಗದ ಕಾರಣದಿಂದಾಗಿ ಸ್ವಗ್ರಾಮ ಹರ್ತಿಕೋಟೆಯಿಂದ ದೂರವಾದರೂ ಹುಟ್ಟೂರು ಪರಿಸರದ ಸಂಸ್ಕೃತಿ ಅಧ್ಯಯನ, ಕಲಾವಿದರ ಸಂಘಟನೆ ಮರೆತಿಲ್ಲ. ಸಧ್ಯ ಮೂವರು ಮಕ್ಕಳು, ಮಡದಿಯೊಂದಿಗೆ ತುಮಕೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

**ಪ್ರೊ. ಹೆಚ್. ಎ. ಎ. ವೀರಭದ್ರಯ್ಯ,**
**ಕಲಾವಿದರು, ಹರ್ತಿಕೋಟೆ,**
**ಹಿರಿಯೂರು ತಾಲೂಕು.**

## ಬಿ. ಶಿವಪ್ಪ

ಬಿ. ಶಿವಪ್ಪ ಚಿತ್ರದುರ್ಗ ಪರಿಸರದಲ್ಲಿ ಖಡ್ಗದ ಶಿವಣ್ಣ ಎಂದೇ ಖ್ಯಾತರು. ಅರವತ್ತು ವಸಂತಗಳನ್ನು ಪೂರೈಸುತ್ತಿರುವ ಇವರು ಹುಟ್ಟಿದ್ದು ಸೊಲ್ಲಾಪುರದಲ್ಲಿ. ತಂದೆ ಗೌಡರ ಬಸಪ್ಪ, ತಾಯಿ ಶಿವಮ್ಮ. ಇವರ ನಾಲ್ಕು ಜನ ಗಂಡುಮಕ್ಕಳಲ್ಲಿ ಶಿವಣ್ಣ ಹಿರಿಯರು. ತಮ್ಮ ಮನೆತನವೇ ವೀರಗಾಸೆ, ಖಡ್ಗದ ಕತೆ, ಪುರಾಣ, ಚಮ್ಮೇಳ ಕಲಾವಿದರ ಕುಟುಂಬ. ತಾತ ಚಮ್ಮೇಳ ಕಲಾವಿದರು. ತಂದೆ ವೀರಗಾಸೆ-ಖಡ್ಗದ ಕಲಾವಿದರು. ತಂದೆಯ ಖಡ್ಗದ ಪದ, ತಾತನ ವೀರಗಾಸೆ ಕುಣಿತ ಈ ಎರಡನ್ನೂ ತಮ್ಮ ಹತ್ತನೇ ವಯಸ್ಸಿನಿಂದಲೇ ಅಭ್ಯಾಸ ಮಾಡಿಕೊಂಡು ಬಂದ, ಶಿವಣ್ಣನವರಿಗೆ ಸ್ವತಃ ಗುರುವಾದವರು ತಂದೆ ಗೌಡರ ಬಸಪ್ಪನವರು. ಇವರು ಚಿತ್ರದುರ್ಗ ತಾಲೂಕಿನ ಸೊಲ್ಲಾಪುರದ ರೈತರು. ತಮ್ಮ ರೈತಾಪಿ ಬದುಕಿನ ಮಧ್ಯೆಯೂ ಮುರುಘಾಮಠ, ಸಿರಿಗೆರೆ ಮಠವೂ ಸೇರಿದಂತೆ ಪ್ರಮುಖ ಧಾರ್ಮಿಕ ಸಭೆಗಳಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡು ಪ್ರಸಿದ್ಧರಾಗಿದ್ದರು. ಆದುದರಿಂದ ತಂದೆಯಂತೇ ಮಗನೂ ಖಡ್ಗದ ಕಲಾವಿದರಾಗಿ ರೂಪುಗೊಂಡರು.

ಶಿವಪ್ಪ ವಿದ್ಯಾವಂತರು. ವೀರಗಾಸೆ ಕಲೆಯನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡತೊಡಗಿದರು. ನಾಡಿನಾದ್ಯಂತ ಖಡ್ಗ ಕಲಾವಿದರ ಸಂಪರ್ಕ, ವೀಕ್ಷಣೆಗಳ ಮೂಲಕ ತಮ್ಮ ವೇಷಭೂಷಣ, ಅಲಂಕಾರ, ಅಂಗವಿನ್ಯಾಸ, ಕರವಿನ್ಯಾಸ, ನೃತ್ಯಭಂಗಿ, ಭಾವ ತೀವ್ರತೆಯ ಸಾಂದರ್ಭಿಕ ದೃಶ್ಯಾವಳಿಗಳ ನಿರ್ಮಾಣ, ಖಡ್ಗದ ಚಲನೆ, ವಚನ ಶೈಲಿ, ಪದಾಘಾತಗಳ ಜೊತೆಗೆ ಪೂರಕ ವಾದ್ಯಗಳ ಸುಧಾರಣೆ, ಆಕರ್ಷಕತೆಯ ಬಗೆಗೆ ಅಭ್ಯಾಸ ಮಾಡತೊಡಗಿದರು. ಇದು ಶಿವಣ್ಣನವರು ಆಕರ್ಷಕ ಕಲಾವಿದರಾಗಿ ರೂಪುಗೊಳ್ಳಲು ಪ್ರೇರಕವಾದ ಅಂಶಗಳು.

ಶಿವಪ್ಪ ಚಿತ್ರದುರ್ಗ ಸೀಮೆಯಲ್ಲಿ ಹುಟ್ಟಿ ಬೆಳೆದರೂ, ಇಂದು ಅಂತರರಾಜ್ಯ ಕಲಾವಿದರಾಗಿರುವುದು ವಿಶೇಷ. ಇದಕ್ಕೆ ಪೂರಕವಾದ ಭಾಷಾಜ್ಞಾನವನ್ನು ಸಂಪಾದಿಸಿರುವುದು. ತೆಲುಗು, ಹಿಂದಿ, ಉರ್ದು, ಇಂಗ್ಲೀಷ್, ಸಂಸ್ಕೃತ ಭಾಷೆಗಳನ್ನು ಕಲಿತಿದ್ದಾರೆ. ಇದು ಕೇವಲ ವ್ಯವಹಾರಕ್ಕೆ ಮಾತ್ರ ಕಲಿತ ಭಾಷೆಯಲ್ಲ, ವೀರಗಾಸೆಯಲ್ಲಿ ವಡಪುಗಳನ್ನು ಹೇಳಲಾಗುತ್ತದೆ. ಅದನ್ನು ಖಡ್ಗದ ಪದ ಎಂದೇ ಕರೆಯಲಾಗುವುದು. ಶಿವನ ಅವತಾರ, ವೀರಭದ್ರನ ರೂಪ, ಶಿವಗಣಾದಿಗಳ ಕಾರ್ಯ, ದಕ್ಷಬ್ರಹ್ಮನ ಆಹುತಿ, ಶಿವಪಾರ್ವತಿಯವರ ವಿವಾಹ ಈ ಮೊದಲಾದ ಶಿವಕಥೆಯನ್ನು ಒಡಪಿನ ರೂಪದಲ್ಲಿ ಹೇಳಲಾಗುತ್ತದೆ. ಚಮ್ಮೇಳದ ಲಯವಾದ ಸಂಗೀತ, ಮಧ್ಯೆ ಮಧ್ಯೆ ಹಾಡಿನ ಸಹಯೋಜನೆ ಪ್ರೇಕ್ಷಕರಿಗೆ ಮೋಜಿನ ವಾತಾವರಣ ಸೃಷ್ಟಿಸುತ್ತದೆ. ಕಳೆದ ಮೂವತ್ತು ವರ್ಷಗಳಿಂದ ವೀರಗಾಸೆ ಕಲೆಯನ್ನು ಒಂದು ವ್ರತವನ್ನಾಗಿ ಸ್ವೀಕರಿಸಿರುವ ಶಿವಪ್ಪ, ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಬೇರೆ ಭಾಷೆಗಳ ಸಂಪರ್ಕ ಹೊಂದಿರುವುದರಿಂದ ಪ್ರಸಾರ ಕಾರ್ಯಕ್ಕೆ ಅನುಕೂಲವಾಗುತ್ತಿದೆ. ಇವರ ಕಲಾವಿಶೇಷತೆಯನ್ನು ಮೆಚ್ಚಿ ಹಲವು ಸಂಘ ಸಂಸ್ಥೆಗಳು ಗೌರವಿಸಿವೆ. ಬೆಂಗಳೂರು, ಧಾರವಾಡ, ಮೈಸೂರು, ಭದ್ರಾವತಿ, ಚಿತ್ರದುರ್ಗ ಆಕಾಶವಾಣಿಗಳಿಂದ ಇವರ ಕಾರ್ಯಕ್ರಮ ನಿರಂತರವಾಗಿ ಪ್ರಸಾರವಾಗುತ್ತಿವೆ.

ದೂರದರ್ಶನ 'ಚಂದನ'ವಾಹಿನಿಯಲ್ಲಿ ಇವರ ವೀರಗಾಸೆ ಕುಣಿತ ಪ್ರಸಾರವಾಗಿದೆ. ಇವರ ಕಲಾ ಪ್ರದರ್ಶನ ಕುರಿತ ೪ ವಿಡಿಯೋ ಕ್ಯಾಸೆಟ್ ಪ್ರಕಟವಾಗಿವೆ.

ಜಿ. ಶಿವಪ್ಪ,
ಶಾರದಾ ಭವನ, ಜಿ.ಸಿ.ಆರ್. ಬಡಾವಣೆ,
ಚಿತ್ರದುರ್ಗ.

## ತಮ್ಮಣ್ಣ

ತಮ್ಮ ಅಪೂರ್ವ ಭಾಗವಂತಿಕೆ, ಹಾಡು, ವೇಷಗಾರಿಕೆಗಾಗಿ ಮುರುಘಾಮಠದಿಂದ ಬಂಗಾರದ ಪದಕ (ಮೆಡಲ್) ಪಡೆದ ಚಿತ್ರದುರ್ಗ ಜಿಲ್ಲೆಯ ಮೊದಲ ಜನಪದ ಕಲಾವಿದ ಬೋವಿ ತಮ್ಮಣ್ಣ. ಜನನ ಚಿತ್ರದುರ್ಗ ಟೌನ್ ಕೆಳಕೋಟೆ. ೧೯೦೫ರಲ್ಲಿ ಜನಿಸಿದ ಈತ ಭಾರತ ಸ್ವಾತಂತ್ರ್ಯ ಹೋರಾಟಗಾರರೂ ಹೌದು. ತಂದೆ ತಿಮ್ಮಪ್ಪ, ತಾಯಿ ಎಲ್ಲಮ್ಮ. ಬಂಡೆ ಕೆಲಸ ಇವರ ಕುಲಕಸುಬು. ಆದರೆ ತಮ್ಮಣ್ಣ ತಮ್ಮ ಹತ್ತನೇ ವಯಸ್ಸಿನಲ್ಲಿಯೇ ಕಲಾಜೀವನಕ್ಕೆ ಕಾಲಿಟ್ಟು ಊರೂರು ಅಲೆದರು. ಅಜ್ಜಿ ದೊಡ್ಡಹನುಮಕ್ಕಳಿಂದ ಜನಪದ ಸಂಗೀತ ಪ್ರಭಾವ, ಕಲಿಕೆ. ನಂತರ ಚಿತ್ರದುರ್ಗ, ಮೈಸೂರು, ಶಿವಮೊಗ್ಗ, ಬಳ್ಳಾರಿ, ಹೊಸಪೇಟೆ ಈ ಮೊದಲಾದ ಜಿಲ್ಲೆಗಳಲ್ಲಿ ಯಕ್ಷಗಾನ ಕಲಿಸುತ್ತಾ ಅಲೆಮಾರಿ ಕಲಾವಿದರಾಗಿ ತೊಂಬತ್ತು ವರ್ಷ ಕಾರ್ಯನಿರ್ವಹಿಸಿದರು.

ತಮ್ಮ ಮೂಡ್ಲಪ್ಪ ಎಂಬ ಯಕ್ಷಗಾನ ಭಾಗವತರಿಂದ ಯಕ್ಷಗಾನ ಪದಗಳನ್ನು ಕಲಿತಿದ್ದಾಗಿ ಹೇಳುತ್ತಾರೆ. 'ಅಕಾಲದಲ್ಲಿ ಯಕ್ಷಗಾನ ಭಾಗವತರು' ಓದಿದವರು ಸಿಗುತ್ತಿರಲಿಲ್ಲ. ಹಾಗಾಗಿ ಆರನೇ ತರಗತಿಯ ತನಕ ಓದಿದ್ದರಿಂದ ಚಿತ್ರದುರ್ಗದ ಕೆಳಕೋಟೆ, ಮಾಳಪ್ಪನಹಟ್ಟಿ, ಮಠದ ಬಡಾವಣೆಗಳಲ್ಲಿ ಯಕ್ಷಗಾನ ನಡೆಯುತ್ತಿದ್ದಾಗ ಸಹಜ ಕುತೂಹಲದಿಂದ ಅಲ್ಲಿಗೆ ಹೋಗುತ್ತಿದ್ದರು. ಹೀಗೆ ನೋಡಿ ಯಕ್ಷಗಾನ ನಡೆಯುತ್ತಿದ್ದಾಗ ಸಹಜ ಕುತೂಹಲದಿಂದ ಅಲ್ಲಿಗೆ ಹೋಗುತ್ತಿದ್ದರು. ಹೀಗೆ ನೋಡಿ ಯಕ್ಷಗಾನ ಕಲಿತು, ಮುಂದೆ ಪಾತ್ರಧಾರಿಗಳಾಗಿ ವೇಷ ಹಾಕಿದರು. ಬಾಲಕೃಷ್ಣ, ಶಾರದೆ, ಅಭಿಮನ್ಯು, ಗಯ, ಅರ್ಜುನ, ಲವ ಇವು ಆರಂಭಿಕ ಪಾತ್ರಗಳು. ನಂತರ ಸ್ವತಃ ಭಾಗವತರಾಗಿ ದುಶ್ಶಾಸನ ಕಥೆ, ಕರಿಭಂಟ, ಶತಕಂಠ ರಾಮಾಯಣ ಈ ಮೊದಲಾದ ಯಕ್ಷಗಾನಗಳನ್ನು ಹಿರಿಯೂರು, ಹೊಳಲ್ಕೆರೆ, ಪರಶುರಾಮಪುರ, ಮೊಳಕಾಲ್ಮೂರುಗಳಲ್ಲಿ ಹೊಸಪೇಟೆ,

ಹೊನ್ನಾಳಿ, ಕುರುಗೋಡು, ದಾವಣಗೆರೆ, ಹರಪ್ಪನಹಳ್ಳಿಗಳಲ್ಲಿ ಕಲಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಕಾಮಸಮುದ್ರ ವಿ. ಪಾಳ್ಯ ಇಲ್ಲಿ ಶತಕಂಠ ರಾಮಾಯಣ ಹಾಗೂ ಕರಿಭಂಟ ಕಥೆಯನ್ನು ಸತತವಾಗಿ ಶ್ರಾವಣ ಮಾಸಕ್ಕೆ ಸರಿಯಾಗಿ ಆಡಿಸುತ್ತಾ ಬರುತ್ತಿದ್ದರು.

ಚಿತ್ರದುರ್ಗದ ಕೆಳಕೋಟೆ ಬಡಾವಣೆಯಲ್ಲಿ ಕುಶಲವರ ಕಾಳಗ ಪ್ರದರ್ಶನವನ್ನು ಸತತವಾಗಿ ೫೦ ವರ್ಷ ಪ್ರದರ್ಶಿಸಿದ ಹಿರಿಮೆಯೂ ಇವರದು. ಇವರು ಸತತವಾಗಿ ದೇವಿ ಮಹಾತ್ಮೆ ಹಾಗೂ ಶಿವಜಲಂಧರ ಕಥೆಯನ್ನು ಯಕ್ಷಗಾನದಲ್ಲಿ ಪ್ರದರ್ಶಿಸುತ್ತಿದ್ದುದು ವಿಶೇಷವಾಗಿದೆ.

ಭದ್ರಾವತಿಯ ಆಕಾಶವಾಣಿ ಮೂಲಕ ಕುಮಾರರಾಮ, ಶಿವಜಲಂಧರ ಯಕ್ಷಗಾನವನ್ನು ಪ್ರಸಾರ ಮಾಡಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ತಮ್ಮಣ್ಣ, ಅಪ್ಪಟ ಗಾಂಧಿ ಅನುಯಾಯಿಯಾಗಿಯೇ ಬಾಳಿದವರು. ಖಾದಿ ತೊಡುವುದು, ಚಪ್ಪಲಿ ಧರಿಸುವುದೂ ಇವರಿಗೆ ನಿಷೇಧವಾಗಿತ್ತು. ಕೆಳಕೋಟೆ ಬಡಾವಣೆಯಲ್ಲಿ ಭಜನೆ ಕಲಾವಿದರ ಸಂಘ ಸ್ಥಾಪಿಸಿ, ಆ ಮೂಲಕ ಹತ್ತಾರು ಭಜನೆ ಕಲಾವಿದರನ್ನು, ತತ್ವಪದಕಾರರನ್ನು ರೂಪಿಸಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ.

ಮುರುಘಾಮಠದ ಬಂಗಾರದ ಮೆಡಲ್ ಸೇರಿದಂತೆ ಹಲವು ಸಂಘ ಸಂಸ್ಥೆಗಳಿಂದ ಗೌರವಕ್ಕೆ ಪಾತ್ರರಾಗಿದ್ದ ತಮ್ಮಣ್ಣನವರು ತಮ್ಮ ತೊಂಬತ್ನಾಲ್ಕನೇ ವಯಸ್ಸಿನಲ್ಲಿ ನಿಧನರಾದರು.

**ಬೋವಿ ತಮ್ಮಣ್ಣ**
**ಕೆಳಕೋಟೆ, ಚಿತ್ರದುರ್ಗ ಟೌನ್.**

## ತಿಪ್ಪಮ್ಮ

ಚಿತ್ರದುರ್ಗ ಜಿಲ್ಲೆಯ ಹಳೆಯ ಹಾಡುಗಾರ್ತಿಯವರಲ್ಲಿ ಚಿಕ್ಕಗೊಂಡನಹಳ್ಳಿಯ ತಿಪ್ಪಮ್ಮ ಒಬ್ಬರು. ಜನಪದ ಕಥನಗೀತೆಗಳನ್ನು ಸದಾ ನಾಲಿಗೆಯ ಮೇಲಿಟ್ಟಿರುವ ಅದ್ಭುತ ಕಲಾವಿದೆ. ತಂದೆ ಗಿಡ್ಡಪ್ಪ, ತಾಯಿ ದುರ್ಗಮ್ಮ. ಸೋದರ ಸಂಬಂಧಿ ಪೂಜಾರಿ ತಿಪ್ಪೇರುದ್ರಪ್ಪನವರಿಗೆ ಕೊಟ್ಟು ಮದುವೆ ಮಾಡಲಾಗಿದೆ. ತವರುಮನೆ ತುರುವನೂರಲ್ಲಿ ಮಾಳಮ್ಮ ಎಂಬುವರಿಂದ ಹಾಡು ಕಲಿತ ಬಗೆಗೆ ಹೇಳಲಾಗುತ್ತದೆ. ಕೂಲಿ ಕಾಯಕದಲ್ಲೇ ಜೀವನ ಕಳೆದಿರುವ ತಿಪ್ಪಮ್ಮಗೆ ಈಗ ೭೩ ವರ್ಷ ಪ್ರಾಯ. ಕಣ್ಣು ಸರಿಯಾಗಿ ಕಾಣುವುದಿಲ್ಲ, ಕಿವಿಯೂ ಮಂದವಾಗಿವೆ. ವಯಸ್ಸಿನ ಕಾರಣದಿಂದ ತಿರುಗಾಟ ಅಸಾಧ್ಯವೆಂದು ಹೇಳುತ್ತಾರೆ. ಗಂಡ ತಿಪ್ಪೇರುದ್ರಪ್ಪ ಪೂಜಾರಿಕೆಯ ವೃತ್ತಿಯಾದುದರಿಂದ ಇವರೂ ಹಾಡುತ್ತಾರೆ. ತಿಪ್ಪಮ್ಮನವರ ಮೆಚ್ಚಿನ ಹಾಡುಗಳೆಂದರೆ ದೇವರ ಮೇಲಿನ ಪದಗಳು ಮತ್ತು ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿ ಕುರಿತ ಕಾವ್ಯ ಹಾಡುಗಾರಿಕೆ. ಬಾಲ್ಯದಲ್ಲಿ ಸುಡುಗಾಡಮ್ಮನ ಪ್ರೇರಣೆಯಾಗಿ ಮಾಳಮ್ಮನ ಸಹವಾಸದಿಂದಾಗಿ ಸುಡುಗಾಡಮ್ಮ ಹಾಡುತ್ತಿದ್ದಾಗ ಅವಳ ಬಳಿ ಕುಳಿತು, ಹಾಡು ಕಲಿತ ವಿವರವನ್ನು ಹೇಳುತ್ತಾರೆ. ಕಾಳಿಂಗರಾಯನ ಸಮಗ್ರ ಕಥನ ಗೀತೆಯನ್ನು ಸೊಗಸಾಗಿ ಹಾಡುತ್ತಾರೆ. ಅಗಾಧವಾದ ಜ್ಞಾಪಕ ಶಕ್ತಿ ಹೊಂದಿರುವ ತಿಪ್ಪಮ್ಮನವರಿಗೆ ನಾಲ್ವರು ಮಕ್ಕಳು. ಅವರೆಲ್ಲರೂ ಅವರವರ ಪಾಲಿಗಿದ್ದಾರೆ. ಆರ್ಥಿಕವಾಗಿ ದುಃಸ್ಥಿತಿಯಲ್ಲಿರುವ ತಿಪ್ಪಮ್ಮಳಿಗೆ ಯಾವುದೇ ವರಮಾನವಿಲ್ಲ.

ತಿಪ್ಪಮ್ಮ ಕಳೆದ ಐವತ್ತು ವರ್ಷದಿಂದಲೂ ಹಾಡುತ್ತಾ ಬರುತ್ತಿದ್ದಾರೆ. ಊರ ದೇವರ ಉತ್ಸವಗಳಲ್ಲಿ ಮಂಗಳಾರತಿ ಪದ ಹಾಡುವುದರಿಂದ ಹಿಡಿದು, ಜನಪದ ಕಥನ ಗೀತೆಗಳನ್ನು ಹಾಡುವ ತನಕ ಪ್ರಸಿದ್ಧರು. ಹಾಡು, ಗಾದೆ, ಒಗಟುಗಳ ಮೂಲಕ, ಜನರನ್ನು ರಂಜಿಸುವ ಅದ್ಭುತ ಕಲೆಗಾರಿಕೆ ಬಾಲ್ಯದ ದಿನಗಳಲ್ಲಿ ಸಾಮಾನ್ಯವಾಗಿತ್ತೆಂದು

ಹೇಳಲಾಗುತ್ತಿದೆ. ತಿಪ್ಪಮ್ಮನವರ ಮಗಳು ಇಂದಿರಮ್ಮನೂ ಹಾಡಿಗೆ ಹೊಂದಿಕೊಂಡಿದ್ದಾಳೆ. ತಾಯಿಯ ಎಲ್ಲ ಮಟ್ಟುಗಳೂ ಬಾರದಿದ್ದರೂ ಕೆಲವು ಕಥನ ಗೀತೆಗಳನ್ನು ಹಾಡಲಾಗುತ್ತದೆ.

ತಿಪ್ಪಮ್ಮನಿಗೆ ಬಾಲ್ಯದಿಂದಲೂ ಹಾಡಿಗೆ ಸಹಕರಿಸಿ, ಹಿಮ್ಮೇಳ ಒದಗಿಸಿದವರು ಚಿಕ್ಕಗೊಂಡನಹಳ್ಳಿ ಗ್ರಾಮದ ಗಿರಿಜಮ್ಮ, ಉಮಾದೇವಿ ಇವರು. ಕೂಲಿಗೆ ಹೋದಾಗ ವಿಶೇಷವಾಗಿ ತಿಪ್ಪಮ್ಮನ ಹಾಡಿಗೆ ಹಿನ್ನೆಲೆ ಧ್ವನಿರೂಪವಾಗಿ ಹಾಡಿದ್ದು ಇವರ ಹಾಡುಗಾರಿಕೆ ಅರ್ಥ ಬಂದಿದೆ.

ತಿಪ್ಪಮ್ಮ, ಗಂಡ ತಿಪ್ಪೇರುದ್ರಯ್ಯ
ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ ತಾಲೂಕು.

## ದೊಡ್ಡಕರಿಯಪ್ಪ

ಭಾಗವತ ದೊಡ್ಡಕರಿಯಪ್ಪ ಯಕ್ಷಗಾನ ಭಾಗವಂತಿಕೆಯ ಅಪ್ರತಿಮ ಕಲಾವಿದ. ೮೫ ಸುಗ್ಗಿಗಳನ್ನು ಕಂಡಿರುವ ಇವರು ತಮ್ಮ ೧೧ನೇ ವಯಸ್ಸಿನಿಂದಲೇ ಕೋಲಾಟ, ಮೂಡಲ ಮಣೇವು ಕುಣಿತಗಳಲ್ಲಿ ಹೇಳಿ ಕಲುಹಿಸಿ ಪ್ರದರ್ಶನ ನೀಡುವ ಮಟ್ಟಕ್ಕೆ ಬೆಳೆದವರು. ಹಿರಿಯೂರು ತಾಲ್ಲೂಕು ಕರಿಯಾಲ ಸಮೀಪದ ಗೌಡನಹಳ್ಳಿ ಇವರ ಹುಟ್ಟೂರು. ತಂದೆ ರಂಗದಾಸಪ್ಪ, ತಾಯಿ ಬೋರಜ್ಜಿ. ಬಯಲಾಟ, ಬಯಲಕತೆಯೆಂದು ಕರೆದು ಊರಿನ ಮುಂದೆ ಅಥವಾ ದೇವಸ್ಥಾನದ ಮುಂದೆ ಸ್ವತಃ ಸ್ಟೇಜನ್ನು ಮಾಡಿಕೊಂಡು ಸೀಮೆಎಣ್ಣೆಯ ಸೂಡಿಗೆ ಕಟ್ಟಿ ದೀಪದ ಬೆಳಕಿನಲ್ಲಿ ಯಕ್ಷಗಾನ ಆಡುತ್ತಿದ್ದರು. ಕರಿಭಂಟ, ಲವಕುಶ ಕಾಳಗ, ದುಶ್ಯಾಸನನ ಕತೆ, ಸಭಾಪರ್ವ, ಸೂರ್ಯವಿವಾಹ ಇವರು ಮೊದಲಿಗೆ ಪಾತ್ರ ನಿರ್ವಹಿಸಿದ ಯಕ್ಷಗಾನ ಪ್ರಸಂಗಗಳು. ನಂತರ ತಮ್ಮ ೨೫ನೆಯ ವಯಸ್ಸಿನಲ್ಲಿ ಭಾಗವತರಾಗಿ ರೂಪುಗೊಂಡರು. ಭಾಗವಂತಿಕೆ, ಮೃದಂಗವಾದನ ಈ ಕಲೆಯನ್ನು ರೂಢಿಸಿಕೊಂಡು ಚಿತ್ರದುರ್ಗ, ಚಳ್ಳಕೆರೆ, ನಾಯಕನಹಟ್ಟಿ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಸಿರಾ, ಪಾವಗಡ ಇಲ್ಲೆಲ್ಲಾ ಯಕ್ಷಗಾನ ಭಾಗವತರಾಗಿ ಕಾರ್ಯನಿರ್ವಹಣೆ. ಬಯಲುಸೀಮೆಯಲ್ಲಿ ಮಳೆ ಕರೆಯುವ ಆಚರಣೆಯಾಗಿ ಕರಿಭಂಟ ಯಕ್ಷಗಾನವನ್ನು ಅಭಿನಯಿಸುವುದು ಸಂಪ್ರದಾಯವಾಗಿದೆ. ಹಾಗಾಗಿ ಈ ಪ್ರದೇಶಗಳಲ್ಲಿ ಇಂದಿಗೂ ಕರಿಭಂಟ ಯಕ್ಷಗಾನವನ್ನು ಅಭಿನಯಿಸುತ್ತಾರೆ. ಕರಿಭಂಟ ಯಕ್ಷಗಾನದ ಪೂರ್ಣಪಾಠ, ಕಂದ, ಮಾತುಗಳೂ ಸೇರಿದಂತೆ ಹಸ್ತಪ್ರತಿಯ ಸಹಾಯವಿಲ್ಲದೆ ನೇರವಾಗಿ ನಾಟಕ ಕಲಿಸುವ ಏಕೈಕ ಭಾಗವತ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ಹಿರಿಯೂರು ತಾಲ್ಲೂಕಿನಲ್ಲಿ ಭಾಗವತರೆಂದರೆ ಗೌಡನಹಳ್ಳಿ ದೊಡ್ಡಕರಿಯಪ್ಪ ಎಂಬಷ್ಟರ ಮಟ್ಟಿಗೆ ಪ್ರಸಿದ್ಧರಾಗಿದ್ದಾರೆ.

'ಮೂಡಲಮಣೇವು' ಕುಣಿತದ ಶಿಕ್ಷಕರಾಗಿಯೂ ಈ ಭಾಗದಲ್ಲಿ ಪ್ರಸಿದ್ಧರಾಗಿರುವ ದೊಡ್ಡ ಕರಿಯಪ್ಪ, ನೂರಾರು ಯುವಕರಿಗೆ ಮೂಡಲ ಮಣೇವು ಕುಣಿತ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ತಿರುಪತಿಯ ಒಕ್ಕಲುಗಳಲ್ಲಿ ಸಾಂಪ್ರದಾಯಿಕ ಆಚರಣೆ ಮತ್ತು ಆ ಸಂಬಂಧಿ ಕಲಾಪ್ರದರ್ಶನ ಮೂಡಲ ಮಣೇವು ಕಲೆಯ ಮುಖ್ಯ ಆಶಯವಾಗಿದೆ. ಮರದ ಹಲಗೆಯಲ್ಲಿ-ಸೋಮವನ್ನು ಹೋಲುವ ಚಿತ್ರ ಬಿಡಿಸಿ, ಬಣ್ಣಗಳಿಂದ ಅಲಂಕರಿಸಿ ಅದನ್ನು ಮೂಡಲಮುಖವಾಗಿ ಇಟ್ಟು ಸಿಹಿಪದಾರ್ಥ ಫಲಹಾರಗಳನ್ನು ಅರ್ಪಿಸಿ, ನಂತರ ತಮಟೆ ಅಥವಾ ವಾದ್ಯಕ್ಕೆ ತಕ್ಕಂತೆ ವೈವಿಧ್ಯವಾಗಿ ಕುಣಿಯುವುದು ಮೂಡಲ ಮಣೇವು ಕಲೆಯ ವಿಶೇಷ. ಕರಿಯಜ್ಜ ಈ ಕಲೆಯನ್ನು ತಮ್ಮ ೮೫ ವರ್ಷಗಳ ಇಳಿವಯಸ್ಸಿನಲ್ಲೂ ಸಮರ್ಥವಾಗಿ ಮುಂದುವರಿಸುತ್ತಿರುವುದು ಇವರ ವಿಶೇಷವಾಗಿದೆ.

ದೊಡ್ಡ ಕರಿಯಜ್ಜ ಯಕ್ಷಗಾನ ಭಾಗವಂತಿಕೆಯಲ್ಲಿಯೇ ಹತ್ತಕ್ಕೂ ಹೆಚ್ಚು ಶಿಷ್ಯರನ್ನು ತಯಾರಿಸಿದ್ದಾರೆ. ಅವರಲ್ಲಿ ಭಾಗವತ ಕೆ. ಲಕ್ಷ್ಮಣ, ಭಾಗವತ ಲಕ್ಷ್ಮೀರಾಮೇಗೌಡ, ಭಾಗವತ ಸಣ್ಣೀರನಾಯಕ, ಚಿಕ್ಕಕರಿಯಪ್ಪ, ತಮ್ಮಣ್ಣ, ಸಣ್ಣೋಬನಾಯಕ ಪ್ರಮುಖ ಭಾಗವತರು. ಇವರೆಲ್ಲರೂ ಇಂದು ಭಾಗವಂತಿಕೆಯ ಕಾಯಕದಲ್ಲಿ ನಿರತರಾಗಿದ್ದಾರೆ.

ದೊಡ್ಡಕರಿಯಪ್ಪ ನಿರ್ದೇಶನದ ಮೂಡಲಮಣೇವು ಜನಪದ ಕುಣಿತಕ್ಕೆ ೧೯೯೫ರಲ್ಲಿ ಧಾರವಾಡದಲ್ಲಿ ಜರುಗಿದ ರಾಜ್ಯಮಟ್ಟದ ಯುವಜನಮೇಳದಲ್ಲಿ ಪ್ರಥಮ ಬಹುಮಾನ ಬಂದಿದೆ. ಚಿತ್ರದುರ್ಗ, ದಾವಣಗೆರೆ, ರಾಜನಹಳ್ಳಿ ವಾಲ್ಮೀಕಿ ಪೀಠ ಧಾರವಾಡಗಳಲ್ಲಿ ಸನ್ಮಾನಕ್ಕೆ ಒಳಗಾಗಿರುವ ಈ ಕಲಾವಿದರಿಗೆ, ಇಂದು ಆರ್ಥಿಕ ಸಂಕಷ್ಟ. ತಿರುಗಾಟ ಅಸಾಧ್ಯ. ಆದರೂ ಕರಿಭಂಟನ ಕತೆ ಮಾಡದೆ ಇರಲಾರೆ, ಅಷ್ಟೊಂದು ಕಲಾ ಸಂಘಟನೆಯಲ್ಲಿ ಸಕ್ರಿಯವಾಗಿರುವ ಹಿರಿಯ ಕಲಾವಿದನ ಓದು ಎರಡನೇ ತರಗತಿಯವರೆಗೆ. ಕುರುಬರ ರಟ್ಟು ಶಾಸ್ತ್ರಗ್ರಂಥವನ್ನು ಹೊಂದಿದ್ದು ಇದರ ಮೂಲಕ ಮಳೆ–ಬೆಳೆಯೂ ಸೇರಿದಂತೆ ಶುಭಫಲಗಳನ್ನು ಇಂದಿಗೂ ಹೇಳುವುದು ಇವರ ವಿಶೇಷ. ಜೊತೆಗೆ ಜಲಮೂಲವನ್ನು ಖಚಿತವಾಗಿ ಗುರುತಿಸುವ ಜನಪದ ಕಲೆಗಾರಿಕೆಯಲ್ಲಿಯೂ ಇವರು ಪ್ರಸಿದ್ಧರು.

**ಭಾಗವತ ದೊಡ್ಡಕರಿಯಪ್ಪ**
**ಗೌಡನಹಳ್ಳಿ, ಹಿರಿಯೂರು ತಾಲೂಕು**

## ಈರಮ್ಮ

ಆಕಾಶವಾಣಿ ಕಲಾವಿದೆ ಎಂದೇ ಗುರುತಿಸಿಕೊಂಡಿರುವ ಮಳಲಿ ಈರಮ್ಮ, ಹಿರೇಗುಂಟನೂರು ಸಮೀಪದ ಮಳಲಿ ಗ್ರಾಮದವರು. ಬೋವಿ ಜನಾಂಗಕ್ಕೆ ಸೇರಿದ ಈ ಕಲಾವಿದೆಗೆ ಇದೀಗ ೬೫ ವರ್ಷ ವಯಸ್ಸು. ಭಜನೆ ಸಂಘಟಕರಾಗಿ, ಗುರುವಾಗಿ ಗುಂಟನೂರು, ಕಾಮಸಮುದ್ರ, ಮಳಲಿ, ವಿ. ಪಾಳ್ಯ ಇಲ್ಲೆಲ್ಲಾ ಭಜನಾ ತಂಡಗಳನ್ನು ಕಟ್ಟಿ ಅವುಗಳನ್ನು ಸಮರ್ಥವಾಗಿ ಮುನ್ನಡೆಸುತ್ತಿರುವುದು ಈಕೆಯ ವಿಶೇಷ. ಮೂರನೇ ತರಗತಿಯವರೆಗೆ ಓದಿರುವ ಈರಮ್ಮ ಅವರ ತಂದೆ, ವಿ. ಪಾಳ್ಯದ ಗಿರಿಯಪ್ಪ, ನರಸಮ್ಮ, ಮಳಲಿಯಲ್ಲಿ ೨ ಗಂಡು, ಮೂರು ಹೆಣ್ಣು ಮಕ್ಕಳೊಂದಿಗೆ ನೆಲೆಸಿದ್ದಾರೆ. ಹೊಲವಿಲ್ಲ, ದುಡಿಮೆಗೆ ಕೂಲಿ ಕಸುಬೊಂದೇ ಆಧಾರ. ದಿನ ಬೆಳಗಾದರೆ ಹೊಲದಲ್ಲಿ ದುಡಿಯುತ್ತಾ, ರೈತಾಪಿ ಕಸುಬಿನೊಳು ಅದ್ಭುತ ಎನ್ನುವ ಹಾಗೆ ಹಾಡುಗಳನ್ನು ಕಲಿತಿರುವುದು ಈಕೆ ವಿಶೇಷ.

ತನ್ನ ಪರಿಸರದ ದೇವತೆಗಳ, ಸ್ಥಳ ಐತಿಹ್ಯದ ಪೂರ್ಣ ವಿವರದೊಂದಿಗೆ ಸೊಗಸಾಗಿ ಪದ ಕಟ್ಟಿ ಹಾಡುವುದು, ಮಧ್ಯೆ ಮಧ್ಯೆ ಉಪಕತೆ ಹೇಳುವುದು ಈಕೆಯ ತನ. ಕುಟ್ಟುವ, ಬೀಸುವ, ಲಾಲಿಪದ, ಬೀಗರ ಕರೆಯುವ ಪದ, ಒಸಗೆ, ಜರಿಯುವ ಪದಗಳನ್ನು ಸಾಂದರ್ಭಿಕವಾಗಿ ಹೆಸರು ಬದಲಿಸಿಕೊಂಡು ಹಾಡುವುದು ಈ ಕಲಾವಿದೆಯ ವಿಶೇಷವಾಗಿದೆ. ಆದರೂ ಈಕೆಗೆ ವಿಶೇಷ ಮನ್ನಣೆ ತಂದುಕೊಟ್ಟಿರುವುದು ಕಥನಗೀತೆಗಳು. ಗುಂಟನೂರು ದ್ಯಾಮಲಾಂಬ, ಕೊಲ್ಲಾಪುರದಮ್ಮ, ಮದುಗದ ಕೆಂಚಮ್ಮ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಏಳುಕೊಳ್ಳದ ಎಲ್ಲಮ್ಮ ಇವು ಈರಮ್ಮ ಅವರಿಗೆ ವಿಶೇಷ ಹೆಸರು ತಂದು ಕೊಟ್ಟಿವೆ. ಚಿತ್ರದುರ್ಗದ ಮುರುಘಾಮಠ, ಸಿರಿಗೆರೆ ಮಠಗಳಲ್ಲಿ ಖಾಯಂ ಹಾಡುಗಾರರಾಗಿ ಭಾಗವಹಿಸುತ್ತಾ ಸಾಂಸ್ಕೃತಿಕ ಸಂದರ್ಭಗಳಲ್ಲಿ ವಿಶೇಷವಾಗಿ ಹಾಡುತ್ತಾರೆ. ಇವರೊಂದಿಗೆ ಮೂವರು ಕಲಾವಿದೆಯರು ಹಿಮ್ಮೇಳವಾಗಿ ಹಾಡುತ್ತಾರೆ.

ಭದ್ರಾವತಿ ಆಕಾಶವಾಣಿ ಕೇಂದ್ರದಿಂದ ೧೯೯೦ ರಿಂದ ಇವರ ಹಾಡುಗಳು ಪ್ರಸಾರವಾಗುತ್ತಿವೆ. ಚಿತ್ರದುರ್ಗದ ಆಕಾಶವಾಣಿಯಿಂದಲೂ ಹಾಡುಗಳು ಪ್ರಸಾರವಾಗಿವೆ. ಆದಿಚುಂಚನಗಿರಿ ಭೈರವನ ಜಾತ್ರೆಯ ಕಾಲದ ಜನಪದ ಕಲಾಮೇಳದಲ್ಲಿ ಆಹ್ವಾನಿತ ಕಲಾವಿದೆಯಾಗಿ ಸತತವಾಗಿ ಮೂರು ಬಾರಿ ಭಾಗವಹಿಸಿದ್ದಾರೆ. ಬೋವಿ ಜಯಮ್ಮ ಅವರ ಜೊತೆಯಲ್ಲಿ ಹಿಮ್ಮೇಳ ಕಲಾವಿದೆಯಾಗಿ, ಮೈಸೂರು ದಸರಾ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ವಿವಿಧ ಸಾಂಸ್ಕೃತಿಕ ಸಮಾರಂಭವೂ ಸೇರಿದಂತೆ, ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟದಲ್ಲಿ ಜನಪದ ಸಂಗೀತ ನೀಡಿದ್ದಾರೆ. ಚಿತ್ರದುರ್ಗದ ಉತ್ಸವ, ಮುರುಘಾಮಠದ ಉತ್ಸವಗಳಲ್ಲಿ ವಿಶೇಷ ಗೌರವ ಪಡೆದಿದ್ದಾರೆ.

ಮಳಲಿ ಈರಮ್ಮ,
ಜನಪದ ಕಲಾವಿದೆ, ಮಳಲಿ ಗ್ರಾಮ,
ಚಿತ್ರದುರ್ಗ ತಾಲೂಕ.

# ಈರಣ್ಣ

ಭಾಗವಂತಿಕೆ, ವೇಷಗಾರಿಕೆ, ಹಾಡುಗಾರಿಕೆ ಈ ಮೂರು ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಹೊಸಹಳ್ಳಿ ಈರಣ್ಣ ಹಿರಿಯೂರು ತಾಲ್ಲೂಕು ಧರ್ಮಪುರಕ್ಕೆ ಸಮೀಪದ ಹೊಸಹಳ್ಳಿಯವರು. ಗಾಂಧೀಜಿ ಕರ್ನಾಟಕಕ್ಕೆ ಬಂದದ್ದು, ಸಿದ್ಧಲಿಂಗಪ್ಪನವರೊಂದಿಗೆ ಈಚಲುವನ ಕತ್ತರಿಸಿದ್ದು, ಈ ಎಲ್ಲ ನೆನಪುಗಳನ್ನು ತೋಡಿಕೊಳ್ಳುವ ಈರಣ್ಣ ಅವರಿಗೆ ಇದೀಗ ೮೫ರ ಪ್ರಾಯ. ವೇದಾವತಿ ಹೊಳೆಯ ದಂಡೆಯ ಮೇಲಿರುವ ಕುಗ್ರಾಮದಲ್ಲೂ ಕಂಪನ್ನು ಕಳೆದ ೬೦ ವರ್ಷಗಳಿಂದಲೂ ಪರಿಸುತ್ತ ಬಂದವರು. ತಂದೆ ಕೆಂಚಲಿಂಗಪ್ಪ, ತಾಯಿ ಕೆಂಚಮ್ಮ. ತಂದೆ ಜನಪದ ಹಾಡುಗಾರರು. ಜುಂಜಪ್ಪನಪದ, ಕೋಲುಪದ, ಹಾಸ್ಯಪದಗಳನ್ನು ಹೇಳುತ್ತಿದ್ದರು. ಕುರಿಪೋಷಣೆ ಇವರ ಪ್ರಮುಖ ಕಸುಬಾದುದರಿಂದ ರಾತ್ರಿ ಮಂದೆಯ ಕಾವಲಿಗೆ ಅಗತ್ಯವಾಗಿ ಎದ್ದಿರಬೇಕಾದಾಗ, ಕಳ್ಳರ, ತೋಳ ಮುಂತಾದ ಪ್ರಾಣಿಗಳಿಂದ ಕುರಿಯನ್ನು ರಕ್ಷಣೆ ಮಾಡಬೇಕಾದುದು ಅನಿವಾರ್ಯ. ಅಂಥ ಸಂದರ್ಭಕ್ಕೆ ಜನಪದ ಹಾಡುಗಳೇ ರಾತ್ರಿಯ ಗೆಳೆಯರು. ಕೆಂಚಲಿಂಗಪ್ಪ ಹಾಡು ಕಲಿತಿದ್ದು ಹೀಗೆಯೇ. ಅವರ ಮಗ ಈರಣ್ಣನೂ ತಂದೆಯ ಮೂಲಕ ಹಾಡುವುದನ್ನು ಕಲಿತರು. ಮುಂದೆ ಯಕ್ಷಗಾನದಲ್ಲಿ ವೇಷ ಹಾಕತೊಡಗಿದರು. ಹಿನ್ನೆಲೆ ಭಾಗವತರಾಗಿ ಗುರುತಿಸಿಕೊಂಡರು. ೧೯೬೫ ರಿಂದ ಸ್ವತಃ ಭಾಗವತರಾಗಿ ಕಾರ್ಯ ನಿರ್ವಹಿಸತೊಡಗಿದರು.

ಈರಣ್ಣನವರದು ನಾಲ್ಕನೇ ತರಗತಿಯ ತನಕ ವಿದ್ಯಾಭ್ಯಾಸ. ತಳಕು, ಚಳ್ಳಕೆರೆಗೆ ಓದಲು ಹೋಗಬೇಕಾದ್ದರಿಂದ ಹೊಳೆದಂಡೆ ದಾಟಲು ಅಸಾಧ್ಯವಾದುದರಿಂದ ಶಾಲೆ ಬಿಟ್ಟುದಾಗಿ ಹೇಳುತ್ತಾರೆ. ಇವರಿಗೆ ಒಬ್ಬರೇ ಮಗ. ಪ್ರಾಥಮಿಕ ಶಾಲಾಶಿಕ್ಷಕರು. ಈರಣ್ಣನವರು ಮೂಲತಃ ಯಕ್ಷಗಾನ ಭಾಗವತರು. ಮೂಡಲಪಾಯ ಪರಂಪರೆಯ

ಯಕ್ಷಗಾನವನ್ನು ೧೯೬೫ರಿಂದ ಸಿರಾ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಕಲಿಸಿದ್ದಾರೆ. ಕರಿಭಂಟ, ದುಶ್ಯಾಸನನ ಕತೆ, ಅಭಿಮನ್ಯುವಿನ ಕಾಳಗ, ಪಾಂಡುವಿಜಯ, ಶತಕಂಠ ರಾಮಾಯಣ, ಲವಕುಶರ ಕಾಳಗ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಕೋಲಾಟ ಭಾಗವತರೆಂದೂ ಕರೆಯಲ್ಪಡುವ ಈರಣ್ಣ ಬಯಲುಸೀಮೆಯ ಸಹಜ ಕಲೆ ಕೋಲುಮೇಳಕ್ಕೆ ಅರ್ಥವಂತಿಕೆಯನ್ನು ತಂದವರು.

ನಾಯಕನಹಟ್ಟಿ ತಿಪ್ಪೇಸ್ವಮಿ ಜಾತ್ರೆಯ ಕಾಲಕ್ಕೆ ಇವರ ಕಲಾತಂಡ ಕಲಮರಹಳ್ಳಿ, ಪರ್ತಿಕೋಟೆ, ಹೊಸಹಳ್ಳಿಯ ಯುವಕರಿಗೆ ಕೋಲಾಟ ಕಲಿಸಿ ಜಾತ್ರಾ ಮಹೋತ್ಸವಗಳಲ್ಲಿ ಪ್ರದರ್ಶಿಸಿರುವುದು ಇವರ ವಿಶೇಷ. ಜನಪದ ಹಾಡುಗಾರರು, ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿರುವ ಕಲಮರಹಳ್ಳಿ ಕೃಷ್ಣಪ್ಪ ಹೇಳುವ ಪ್ರಕಾರ ಈರಣ್ಣನವರೇ ನನ್ನ ಹಾಡುಗಾರಿಕೆಯ ರೂವಾರಿ. ಅವರು ಹಾಡುತ್ತಿದ್ದ ರೀತಿ, ಕೋಲು ಹಾಕುತ್ತಿದ್ದ ತನ ನನ್ನನ್ನು ಕಲಾವಿದ ಅನ್ನುವ ತನಕ್ಕೆ ಬೆಳೆಸಿತು ಎಂದು ನಮ್ರವಾಗಿ ನುಡಿಯುತ್ತಾರೆ.

ಗೌರಸಂದ್ರದ ಮಾರಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮೇಲೆ ಸೊಗಸಾಗಿ ಪದ ಹಾಡುತ್ತಾರೆ. ಯಕ್ಷಗಾನದ ಹಾಸ್ಯ ಪ್ರಸಂಗವನ್ನು ಈ ಇಳಿವಯಸ್ಸಿನಲ್ಲೂ ತೊದಲದೆ ಹೇಳುವುದು ಇವರ ವಿಶೇಷ. ಸಾಂಸ್ಕೃತಿಕ ಉಪನಾಯಕ ಈರಬಡಪ್ಪ, ಬೀರೇದೇವರು ಇವರುಗಳ ಬಗ್ಗೆಯೂ ಕಾವ್ಯ, ಪದ ಹಾಡುತ್ತಾರೆ. ದೇವರು ಕರೆಯುವ ಪದ, ಹಾಸ್ಯಪದಗಳನ್ನೂ ಆಕರ್ಷಕವಾಗಿ ಹಾಡುತ್ತಾರೆ.

ಹೊಸಹಳ್ಳಿಯ ಗುರುಶಾಂತಪ್ಪ ಸ್ವಾಮಿ ಮಠದ ರೂವಾರಿಯೂ ಆಗಿ, ಅಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗೆಗೆ ಪರಿಶ್ರಮದಿಂದ ತೊಡಗಿಸಿಕೊಂಡಿರುವ ಈರಣ್ಣನವರನ್ನು ಮೊದಲು ಗುರುತಿಸಿದರು ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ. ಮೈಸೂರಿನ ದಸರಾ ಉತ್ಸವ, ಚಿತ್ರದುರ್ಗದ ದುರ್ಗೋತ್ಸವ, ಮುರುಘಾಮಠ, ಸಿರಿಗೆರೆ, ಕನಕ ಗುರುಪೀಠ, ಸಿಂಧನೂರು, ಹೊಸದುರ್ಗ ಕಾಗಿನೆಲೆಗಳಲ್ಲಿಯೂ ಹಾಡಿರುವುದು ಇವರ ವಿಶೇಷತೆ.

ಈರಣ್ಣ<br>ಜನಪದ ಕಲಾವಿದ, ಹೊಸಹಳ್ಳಿ, ಧರ್ಮಪುರ ಹೋ.<br>ಹಿರಿಯೂರು ತಾಲೂಕು.

# ಲಕ್ಷ್ಮಣ

ಲಕ್ಷ್ಮಣ ಅವರದು ಹಿರಿಯೂರು ತಾಲ್ಲೂಕು ಜವಗೊಂಡನ ಹಳ್ಳಿ ಸಮೀಪದ ಗೌಡನಹಳ್ಳಿ. ಹುಟ್ಟಿದ್ದು ೧೯೪೦. ತಂದೆ ಹರಿಗೆ ಕುಣಿತದ ಕರಿಯಪ್ಪ, ತಾಯಿ ಸೋಬಾನೆ ತುಳಸಮ್ಮ. ಇವರಿಗೆ ಜನಿಸಿದ ನಾಲ್ವರು ಗಂಡುಮಕ್ಕಳಲ್ಲಿ ಲಕ್ಷ್ಮಣ ಮೊದಲಿಗರು. ಪ್ರಾಥಮಿಕ ನಾಲ್ಕನೇ ತರಗತಿಯ ತನಕ ವಿದ್ಯಾಭ್ಯಾಸ. ನಂತರ ವ್ಯವಸಾಯವನ್ನು ಕುಲಕಸುಬಾಗಿ ಮುಂದುವರಿಸಿದರು. ಗೌಡನಹಳ್ಳಿ ಒಂದು ಬಗೆಯ ಕಲಾಗ್ರಾಮ. ಬುಡಕಟ್ಟು ಸಂಸ್ಕೃತಿಯ ಅಪ್ಪಟ ಮುಂದುವರಿಕೆ ಇಂದಿಗೂ ಇಲ್ಲಿದೆ. ಪಾಳೆಯಗಾರರ ಕುಣಿತ, ಹರಿಗೆ ಕುಣಿತಗಳ ಜೊತೆಗೆ ಮೂಡಲಮಣೇವು ಎಂಬ ವಿಶಿಷ್ಟ ಕಲಾಪ್ರಕಾರ ಈ ಗ್ರಾಮದ ವಿಶಿಷ್ಟ ಕಲೆ. ಮೂಡಲಮಣೇವು ಅಪರೂಪದ ದೈವಸಂಬಂಧಿ ಆಚರಣೆ. ತಿರುಪತಿ ತಿಮ್ಮಪ್ಪನ ಒಕ್ಕಲಲ್ಲಿ ಮಾತ್ರ ಈ ಆಚರಣೆ ಇರುವುದಾಗಿ ತಿಳಿದುಬಂದಿದೆ. ಮೂಡಲದಿಕ್ಕಿಗೆ ಮುಖಮಾಡಿ, ತಿರುಪತಿ ತಿಮ್ಮಪ್ಪ ದೇವರನ್ನು ಪ್ರತಿಷ್ಠಾಪಿಸಿ, ಅದರ ಮುಂದೆ ಮಡಿ ಬಟ್ಟೆಯನ್ನು ಹಾಸಿ ಅದರ ಮೇಲೆ ಬಾಳೆಹಣ್ಣು, ಹಲಸು, ಪುರಿ, ಬೆಲ್ಲ, ಕಾಯಿಗಳಿಂದ ತಯಾರಿಸಿದ ಫಲಾರವನ್ನು ಇಡುತ್ತಾರೆ. ಸೋಮನ ಆಕೃತಿಯ ಹರಿಗೆಯನ್ನು ಒಬ್ಬ ಹಿಡಿದು, ಕುಣಿಯುತ್ತಾ ಹೋಗುತ್ತಾನೆ, ಆತನೊಂದಿಗೆ ಈ ಕಲೆಯ ವಿಶೇಷ. ಜೊತೆಗೆ ಹೇಳು ಪದಗಳ ಮೂಲಕ ದೇವರ ನಾಮಾವಳಿ, ಮಹಿಮೆಯನ್ನು ಕೊಂಡಾಡಲಾಗುತ್ತದೆ.

ಲಕ್ಷ್ಮಣ ಅವರು ಬಾಗವತರು. ಕಳೆದ ೪೦ ವರ್ಷಗಳಿಂದ ಮೂಡಲಪಾಯ ಯಕ್ಷಗಾನವನ್ನು ಚಿತ್ರದುರ್ಗ, ತುಮಕೂರು, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಕಲಿಸಿದ್ದಾರೆ. ಇವರಿಗೆ ಯಕ್ಷಗಾನ ಗುರು ಸಣ್ಣೀರನಾಯಕ. ಇವರೊಂದಿಗೆ ಚಿಕ್ಕಕರಿಯಪ್ಪ, ತಮ್ಮಣ್ಣ, ಸಣ್ಣೋಬನಾಯಕ, ದೊಡ್ಡಕರಿಯಪ್ಪ ಭಾಗವಂತಿಕೆಯ ಹಿಮ್ಮೇಳ ಕಲಾವಿದರು.

ಈ ತಂಡ ಕರಿಭಂಟನ ಕಾಳಗವನ್ನು ೫೦ ವರ್ಷಗಳಿಂದಲೂ ಗ್ರಾಮ ಆರಾಧನಾ ಕಲೆಯಾಗಿ, ಮಳೆ ಕರಿಯುವ ಉತ್ಸವವಾಗಿ, ಊರ ಹಬ್ಬದ ಮಾದರಿಯಲ್ಲಿ ವರ್ಷಕ್ಕೊಮ್ಮೆ ಆಚರಿಸುತ್ತಾ ಬಂದಿರುವುದು ವಿಶೇಷವಾಗಿದೆ.

ಲಕ್ಷ್ಮಣ, ಕರಿಭಂಟ, ಲವಕುಶರ ಕಾಳಗ, ಭಕ್ತ ಸುಧನ್ವನ ಕಾಳಗ, ವಿರಾಟಪರ್ವ, ಕೀಚಕನ ವಧೆ, ದುಶ್ಯಾಸನನ ಕಥೆ ಇವರು ಭಾಗವಂತಿಕೆ ನೀಡಿರುವ ಇತರೆ ಪ್ರಮುಖ ನಾಟಕಗಳು.

ಸುಗ್ಗಿಯ ಕಾಲದಲ್ಲಿ ಹೊರ ಜಿಲ್ಲೆಗಳಿಗೆ ಹೋಗಿ ವಾರಗಳ ಕಾಲ ತಂಗಿ, ಹಳೆಯ ಕಲಾವಿದ, ಶಿಷ್ಯರನ್ನು ಸಂಪರ್ಕಿಸಿ, ಯಕ್ಷಗಾನ ಕಲಿಸಿ ಪ್ರದರ್ಶಿಸುತ್ತಾ ಬರುವುದು ಇವರ ಹವ್ಯಾಸ. ಅಲ್ಲದೆ ಇವರು ಹೋದ ಕಡೆಯಲ್ಲೆಲ್ಲಾ ಕಲಾಶಿಷ್ಯರನ್ನು ತಯಾರಿಸಿರುವುದು ಇವರಿಗೆ ಹೆಚ್ಚು ಹರ್ಷ ತಂದ ಸಂಗತಿಯಾಗಿದೆ. ಅವರೇ ಯಕ್ಷಗಾನ ಮುಂದುವರಿಸುತ್ತಿರುವುದು ಇವರಿಗೆ ಸಂದ ಗೌರವವೂ ಆಗಿದೆ.

ದುರ್ಗೋತ್ಸವ, ಹರ್ತಿಕೋಟೆ ಜನಪದ ಕಲಾಮೇಳ, ಪರಶುರಾಮಪುರ, ಪಾವಗಡ ಇಲ್ಲಿ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಜಾನಪದ ಸಾಂಸ್ಕೃತಿಕ ಉತ್ಸವಗಳಲ್ಲಿ ಗೌಡ್ನಳ್ಳಿ ಲಕ್ಷ್ಮಣ ಭಾಗವಂತಿಕೆ ಹಾಡುಗಾರರಾಗಿ ಯಕ್ಷಗಾನ ಪ್ರಸಂಗ ಪ್ರದರ್ಶಕರಾಗಿ ಭಾಗವಹಿಸಿದ್ದರು.

೨೦೦೬ರಲ್ಲಿ ಚಿತ್ರದುರ್ಗ ಜಿಲ್ಲೆ, ಸಾಣೆಹಳ್ಳಿಯ ಅಂತರರಾಷ್ಟ್ರೀಯ ನಾಟಕ ಶಾಲೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಎರಡು ದಿನಗಳ ಕಾಲ ಏರ್ಪಡಿಸಿದ್ದ ಕರ್ನಾಟಕ ಮೂಡಲಪಾಯ ಯಕ್ಷಗಾನ ಭಾಗವತರ ಸಮಾವೇಶದಲ್ಲಿ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

ಚಿತ್ರದುರ್ಗ, ಕಂಪ್ಲಿ, ಸಿರಗುಪ್ಪೆ, ಬೆಂಗಳೂರು, ರಾಜನಹಳ್ಳಿ ವಾಲ್ಮೀಕಿಮಠ ಇಲ್ಲೆಲ್ಲ ಕಲಾಪ್ರದರ್ಶನ ಮತ್ತು ಗೌರವ ಪಡೆದಿದ್ದಾರೆ. ಇವರಿಗೆ ಇಬ್ಬರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳಿದ್ದು ಗಂಡುಮಕ್ಕಳಿಬ್ಬರೂ ಯಕ್ಷಗಾನ, ಕೋಲಾಟ, ಮೂಡಲಮಣೇವು ಕುಣಿತದ ಕಲಾವಿದರಾಗಿ ರೂಪುಗೊಂಡಿದ್ದಾರೆ.

ಸರ್ಕಾರದ ಯಾವ ಗೌರವವೂ ನನಗೆ ಸಿಕ್ಕಿಲ್ಲ ಎಂಬ ಕೊರಗನ್ನು ತೋಡಿಕೊಳ್ಳುವ ಲಕ್ಷ್ಮಣ ಹಾಡಲು ಕುಳಿತರೆ ಹತ್ತಾರು ಬಗೆಯ ಜಾನಪದ ವೈವಿಧ್ಯತೆಗಳನ್ನು ತೋರಬಲ್ಲ ಅಪರೂಪದ ಕಲಾವಿದರು.

ಲಕ್ಷ್ಮಣ ಕೆ.,
ಗೌಡನಹಳ್ಳಿ, ಜವಗೊಂಡನಹಳ್ಳಿ ಮಾರ್ಗ,
ಹಿರಿಯೂರು ತಾಲೂಕು.

## ಗಂಗಾಧರಪ್ಪ

ಗಂಗಾಧರಪ್ಪ ಜನಪದ ಹಾಡುಗಾರರು, ಕಲಾ ಸಂಘಟಕರು. ಕೋಲುಮೇಳದ ಭಾಗವತರು. ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ಕಾಮಸಮುದ್ರದ ಪಕ್ಕದ ವಿ.ಪಾಳ್ಯದಲ್ಲಿ. ಬಂಡೆ ಸೀಳಿ, ಕಲ್ಲಿಗೆ ಕಾಯಕಲ್ಪ ನೀಡುವ ಕಾಯಕದ ಮುತ್ತಪ್ಪ ಇವರ ತಂದೆ, ಸಣ್ಣಮ್ಮ ತಾಯಿ. ಒಟ್ಟು ಆರು ಜನರ ಮಕ್ಕಳಲ್ಲಿ ನಾಲ್ಕು ಗಂಡು, ಎರಡು ಹೆಣ್ಣು. ಗಂಗಾಧರಪ್ಪ ಮೊದಲಿಗರು. ಪ್ರಾಥಮಿಕ ಶಾಲೆಯವರೆಗೆ ಮಾತ್ರ ವಿದ್ಯಾಭ್ಯಾಸ, ತಂದೆಯೊಂದಿಗೆ ಬಂಡೆ ಸೀಳುವುದು, ದೇಶೀ ಸಿಡಿಮದ್ದು ಇಟ್ಟು ಬಂಡೆ ಎಬ್ಬಿಸುವುದು ಇವರ ಕಾಯಕ. ಬಾವಿ ಕಲ್ಲುಕಟ್ಟುವ ಕಾಯಕವೂ ಇವರಿಗೆ ಸಿದ್ಧಿಸಿದೆ. ಕಾಡುಕಲ್ಲಿಗೆ ವಿವಿಧ ಆಕೃತಿಯ ಕೌಶಲ ನೀಡುತ್ತಲ್ಲೇ ಜನಪದ ಸಂಗೀತ, ನೃತ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಗಂಗಾಧರಪ್ಪ ಅವರಿಗೆ ಅವರ ಕೋಲುಪದ ಹಾಗೂ ಭಜನೆ ತತ್ವಪದ ಗಾಯನಕ್ಕಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೪ರ ಜಾನಪದ ಸಾಧನಾ ಪ್ರಶಸ್ತಿ ನೀಡಿ ಗೌರವಿಸಿದೆ. ಗಂಗಾಧರಪ್ಪನವರು ಗ್ರಾಮೀಣ ಜನಪದ ಕಲಾವಿದರ ಒಕ್ಕೂಟವನ್ನು ತಮ್ಮ ಹುಟ್ಟೂರಲ್ಲಿ ಸಂಘಟಿಸಿ ಇದರ ಮೂಲಕ ಕಳೆದ ೧೫ ವರ್ಷಗಳಿಂದಲೂ ಯುವಜನ ಮೇಳ ಅಕಾಡೆಮಿ, ವಿಶ್ವವಿದ್ಯಾಲಯ ಮೊದಲಾದ ಸಾಂಸ್ಕೃತಿಕ ಸಂಘಟನೆಗಳು ಏರ್ಪಡಿಸುವ ವಿವಿಧ ಸಮಾರಂಭ, ಜನಪದ ಜಾತ್ರೆ, ಕಲೋತ್ಸವಗಳಲ್ಲಿ ಭಾಗವಹಿಸಿ ಆಕರ್ಷಕ ಕಲಾಪ್ರದರ್ಶನ ನೀಡಿದ್ದಾರೆ. ಪ್ರಶಸ್ತಿ ಪುರಸ್ಕಾರಕ್ಕೂ ಪಾತ್ರರಾಗಿದ್ದಾರೆ. ಹಂಪಿ ಉತ್ಸವ-೨೦೦೨, ದಸರಾ ಉತ್ಸವ-೧೯೯೯, ಚಿತ್ರದುರ್ಗ ಉತ್ಸವ-೨೦೦೫, ಜನಪದ ಜಾತ್ರೆ ವಿಧಾನಸೌಧ-೨೦೦೬ ರಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇವರ ತಂಡ ಕೋಲಾಟ ಆದಿಚುಂಚನಗಿರಿ ಜನಪದ ಕಲಾಮೇಳದಲ್ಲಿ ಪ್ರತಿ ವರ್ಷವೂ ಭಾಗವಹಿಸುತ್ತಾ ಬಂದಿದೆ. ಗಂಗಾಧರಪ್ಪ ಕೋಲುಪದ, ಜಡೆಕೋಲು,

ಕೊರವಂಜಿಕೋಲು, ಕೋಲು ಪದಗಳಲ್ಲಿ ಮದಕರಿ, ಮೈಲಾರಲಿಂಗ, ಜುಂಜಪ್ಪ ಈ ಮೊದಲಾದ ಕಥನ ಗೀತೆಗಳನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಕೋಲುಮೇಳವನ್ನು ರಂಗುಗೊಳಿಸುತ್ತಿರುವುದು ಇವರ ವಿಶೇಷವಾಗಿದೆ. ಭದ್ರಾವತಿ, ಚಿತ್ರದುರ್ಗದ ಆಕಾಶವಾಣಿಗಳಲ್ಲೂ ಇವರ ಕೋಲುಮೇಳ ಪ್ರಸಾರವಾಗುತ್ತಿವೆ.

ಇತ್ತೀಚೆಗೆ ಪಾಂಡುರಂಗ ಭಜನಾ ಮೇಳವೊಂದನ್ನು ಕಟ್ಟಿ, ಅದಕ್ಕೆ ಭಾಗವತರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ಪಾಂಡುರಂಗ ಭಜನೆ, ಪಂಢರಾಪುರ ಭಜನೆ, ಶಿವಭಜನೆ ಮೇಳವನ್ನು ನಡೆಸಿಕೊಡುತ್ತಾರೆ. ಹಾಡು, ಕುಣಿತ, ವಾದ್ಯವಿಶೇಷ, ಉಡುಗೆ ತೊಡುಗೆಗಳ ಮೂಲಕ ವಿಶೇಷ ಆಕರ್ಷಣೆಗೆ ಒಳಗಾಗುವ ಈ ಪಂಢರಾಪುರ ಭಜನೆ ಗ್ರಾಮೀಣರ ಆಕರ್ಷಕ ಕಲೆಯಾಗಿದೆ. ತತ್ವಪದ, ಜನಪದ ಸಂಗೀತವನ್ನು ಹತ್ತಾರು ಯುವಕರಿಗೆ ಕಲಿಸುತ್ತಿರುವ ಗಂಗಾಧರಪ್ಪ ಕಾಮಸಮುದ್ರದ ಸಮೀಪದ ಹಲವು ಶಾಲೆಗಳಲ್ಲಿ ಜನಪದ ಸಂಗೀತವನ್ನು ಮಕ್ಕಳಿಗೆ ಕಲಿಸಿ, ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಚಿಣ್ಣರನ್ನು ಅಣಿಗೊಳಿಸುತ್ತಿರುವುದು ಜನಪದ ಗೀತ ಪ್ರಸಾರಕ್ಕೆ ಇವರು ನೀಡುತ್ತಿರುವ ವಿಶಿಷ್ಟ ಕೊಡುಗೆಯಾಗಿದೆ.

ಎಂ. ಗಂಗಾಧರಪ್ಪ,
ವಿ. ಪಾಳ್ಯ, ಚಿತ್ರದುರ್ಗ ತಾಲೂಕು.

# ನಿಂಗಜ್ಜಿ

ಸೋಬಾನೆ ಹಾಡುಗಾರಿಕೆಯಿಂದ ಹಿರಿಯೂರು, ಚಳ್ಳಕೆರೆ, ಶಿರಾ ಭಾಗದಲ್ಲಿ ಹೆಸರು ವಾಸಿಯಾಗಿರುವ ನಿಂಗಜ್ಜಿ, ಹಿರಿಯೂರು ತಾಲ್ಲೂಕು ಧರ್ಮಪುರ ಸಮೀಪದ ಸಕ್ಕರ ಗ್ರಾಮದವರು. ಆದಿ ಕರ್ನಾಟಕ ಜನಾಂಗದವರಾದ ಈಕೆ ಇದೇ ಗ್ರಾಮದಲ್ಲಿ ಹುಟ್ಟಿ ಬೆಳೆದವರು. ತಂದೆ ರಂಗಪ್ಪ, ತಾಯಿ ಹನುಮಕ್ಕ, ಇದೇ ಗ್ರಾಮದ ಮೇಕೆ ರಂಗಪ್ಪ ಎಂಬುವರೊಂದಿಗೆ ವಿವಾಹ. ಆರು ಮಕ್ಕಳ ತಾಯಿ. ಸಧ್ಯ ತನ್ನ ದೇಹದ ಶಕ್ತಿಯನ್ನು ಕಳೆದುಕೊಂಡರೂ ಹಾಡುವ ಕಬರು ಮಾಸಿಲ್ಲ. ಉತ್ಸಾಹ ಕುಗ್ಗಿಲ್ಲ. ಕಣ್ಣು ಮಂಜಾದರೂ ಕೋಲಿನ ಸಹಾಯದಿಂದಲೇ ತಿರುಗಾಡುತ್ತಾ ಮದುವೆ, ದೇವರ ಉತ್ಸವ, ಹೆಣ್ಣಿನ ಶಾಸ್ತ್ರ ಸಂಬಂಧಿ ಹಾಡುಗಳ ಜೊತೆಗೆ ಹೊಸ ಮನೆಯ ಗೃಹ ಪ್ರವೇಶ, ಮರಣ ಗೀತೆಯನ್ನು ಕಳೆದ ೭ ದಶಕಗಳಿಂದಲೂ ನಿರಂತರವಾಗಿ ಹಾಡುತ್ತಾ ಬಂದಿರುವ ಎಲೆಯ ಮರೆಯ ಕಾಯಿಯಂತಿದ್ದಾರೆ. ಹಾಡುತ್ತಲೇ ದಿನ ಕಳೆಯುತ್ತಿರುವ, ಕಲಿಯುವವರಿಗೆಲ್ಲಾ ಉಚಿತವಾಗಿ ಹಾಡಿ ಕಲಿಸುವ ನಿಂಗವ್ವನ ಜಾನಪದ ಪ್ರೀತಿ ಆಗಾಧವಾದುದು.

ನಿಂಗಮ್ಮ ಮದುವೆಯಾಗಿ ಗಂಡನ ಮನೆಗೆ ಬಂದಾಗ ಹನ್ನೆರಡು ವರ್ಷ. ಆ ವೇಳೆಗಾಗಲೇ ತಾಯಿ ಹನುಮಕ್ಕಳಿಂದ ಗೌರಸಂದ್ರದ ಮೂರಕ್ಕನಪದ, ನಾಯಕನಹಟ್ಟಿ ತಿಪ್ಪೇಸ್ವಾಮಿ ಪದಗಳನ್ನು ಕಲಿತಿದ್ದರು. ಗೊಲ್ಲರ ಹೆಂಗಸರ ಸಹವಾಸ, ಕೂಲಿ ಕೆಲಸದ ಮಧ್ಯೆ ಜುಂಜಪ್ಪನ ಪದ, ಚಿತ್ರ ದೇವರ ಪದ, ಕಲಿತರು, ಎಷ್ಟೋ ಬಾರಿ ಗೊಲ್ಲರ ಹೆಂಗಸರ ಜೊತೆ ಕುಂತು ಹಾಡಿಗೆ ಸೊಲ್ಲು ಕೊಟ್ಟಿರುವುದು ಇದೆ. ಹಾಡಿಗೆ ಯಾವ ಜಾತಿ ಸ್ವಾಮಿ, ಕಥೆ ಮಾಡೋದೆ ಪುಣ್ಯ. ಅಂಥಲೇ ಗೊಲ್ಲರಾಗಲಿ, ನಾಯಕ ಮಕ್ಕಳಾಗಲಿ, ನಮ್ಮೂರಿನ ಉಪ್ಪಾರಶೆಟ್ಟರಾಗಲಿ ಎಂದೂ ನನ್ನನ್ನು ಕೀಳಾಗಿ ಕಾಣಲಿಲ್ಲ. ಎಲ್ಲರೂ ಅವರ ಮನೆಗೆ ಕರೆದು ಇದ್ದುದ ಕೊಟ್ಟು ಪದ ಹಾಡಿಸುತ್ತಾರೆ. ಇದೇ ನೆಮ್ಮದಿ ಎಂದು

ಗ್ರಾಮ ಸೌಹಾರ್ದತೆಯ ಬೇರುಗಳನ್ನು ಭದ್ರ ಪಡಿಸುತ್ತಿರುವ ನಿಂಗಜ್ಜಿ ಕಲಿತಿರುವ ಹಾಡುಗಾರರಲ್ಲಿ ಎಲ್ಲ ವರ್ಗದವರು ಇದ್ದಾರೆ. ಕುರುಬರು, ನಾಯಕ ಮಕ್ಕಳೂ ಸೇರಿದ್ದಾರೆ ಕರಿಯಮ್ಮ, ಲಕ್ಕಮ್ಮ, ಶಿವಮ್ಮ ಕಮ್ಮಲಮ್ಮ, ಗೊಂದಮ್ಮ, ಕೆಂಚಮ್ಮ ಇವರಿಂದ ಹಾಡು ಕಲಿತಿರುವ ಪ್ರಮುಖರು.

'ಕಲಿತು ನನ್ನಷ್ಟೆ ಚೆನ್ನಾಗಿ ಹಾಡುವ ಈ ಎಲ್ಲಾ ಕಲಾವಿದರು ನನ್ನ ಸೊಲ್ಲ ಮಾಡಿ ಮುಂದೆ ಹಾಡುವುದು ನನಗೆ ಸಂತಸ ತಂದಿದೆ ಎಂದು ಹಲ್ಲಿಲ್ಲದ ಬೊಚ್ಚು ಬಾಯಲ್ಲೂ ಜೀವನೋತ್ಸಾಹದ ಬುತ್ತಿ ಬಿಚ್ಚುವುದು ಈಕೆಯ ಹೃದಯ ವೈಶಾಲ್ಯತೆಯ ಪ್ರತೀಕ. ನಾಯಕನಹಟ್ಟಿ, ಗೌರಸಂದ್ರವೂ ಸೇರಿದಂತೆ ಸುತ್ತೇಳು ಹಳ್ಳಿಗಳು ಸಾಂಸ್ಕೃತಿಕ ಧಾರ್ಮಿಕ ಉತ್ಸವಗಳಲ್ಲಿ ಭಾಗವಹಿಸುತ್ತಿರುವ ನಿಂಗಜ್ಜಿ ಇತ್ತೀಚೆಗೆ ದಲಿತ ಸಂಘಟನೆಯ ಕ್ರಾಂತಿ ಗೀತೆಗಳನ್ನು ಕಲಿತಿದ್ದಾರೆ.

ಕವಿ ಸಕ್ಕರ ನಾಗರಾಜ್‌ರವರ ಕವಿತೆಯನ್ನು ಹಾಡಾಗಿ ಪರಿವರ್ತಿಸಿಕೊಂಡು ಹಾಡುತ್ತಾರಾದರೂ ಅವರ ಮೊದಲ ಪ್ರಾಶಸ್ತ್ಯವೂ ಜನಪದ ಸೋಬಾನೆ ಪದ. ಕುಟ್ಟುವ ಬೀಸುವ ಪದ, ಸಂದರ್ಭಕ್ಕೆ ತಕ್ಕಂತೆ ದೇವರ ಮೇಲೆ ರಾತ್ರಿಯಲ್ಲಾ ಪದ ಹಾಡುತ್ತಾರೆ. ಈಕೆಯ ವಯಸ್ಸಿನ ನಾಲ್ವರು ಹಿಮ್ಮೇಳದಲ್ಲೂ ಹಾಡುತ್ತಾರೆ.

ಜೀವನ ಇಳಿಗಾಲದ ಹೊಸ್ತಿಲಿನಲ್ಲಿದ್ದರೂ ಜೀವನೋಪಾಯಕ್ಕೆ ಯಾವುದೇ ಆಸರೆ ಇಲ್ಲದಿರುವುದು ಆತಂಕದ ಸಂಗತಿ.

ಸಕ್ಕರ ನಿಂಗವ್ವ,<br>ಸಕ್ಕರ ಗ್ರಾಮ, ಹಿರಿಯೂರು ತಾಲೂಕು.

## ಗೋವಿಂದಪ್ಪ

ತಮ್ಮ ಅಪೂರ್ವ ದೇವಿ ಪಾತ್ರದ ಅಭಿನಯದಿಂದಾಗಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಪ್ರಸಿದ್ಧರಾಗಿರುವ ಕೆ. ಗೋವಿಂದಪ್ಪ ಅನ್ವರ್ಥ ದೇವಿ ಗೋವಿಂದಪ್ಪರಾಗಿದ್ದಾರೆ. ದೇವಿ ಗೋವಿಂದಪ್ಪ ಎಂದೇ ಕರೆದು ಸಂಭೋದಿಸುವುದು ರೂಢಿಯಾಗಿದೆ.

ಕೋಲಾಟ, ಯಕ್ಷಗಾನ, ಜಾನಪದ ತತ್ವಪದ ಹಾಡುಗಾರಿಕೆಯಲ್ಲಿ ಹೆಸರು ಮಾಡಿರುವ ಗೋವಿಂದಪ್ಪ ಐವತ್ತಕ್ಕೂ ಹೆಚ್ಚುಬಾರಿ ದೇವಿಮಹಾತ್ಮೆ ನಾಟಕದಲ್ಲಿ ದೇವಿ ಪಾತ್ರಧಾರಿಯಾಗಿ ಮಿಂಚಿರುವುದು ಇವರ ವಿಶೇಷವಾಗಿದೆ. ತಮ್ಮ ೧೫ನೇ ವಯಸ್ಸಿನಿಂದ ಇಲ್ಲಿಯ ತನಕ ಸತತವಾಗಿ ದೇವಿ ಪಾತ್ರಧಾರಿಗಳಾಗಿದ್ದಾರೆ. ಮೂಡಲಪಾಯ ಯಕ್ಷಗಾನದ ಹಿಮ್ಮೇಳ ಭಾಗವತರಾಗಿಯೂ ಕಾರ್ಯನಿರ್ವಹಣೆ. ಹಿರಿಯೂರು ತಾಲ್ಲೂಕಿನ ಧರ್ಮಪುರ ಹೋಬಳಿಗೆ ಸಮೀಪದ ಹರಿಯಬ್ಬೆ ಪಾಳ್ಯದ ಕಾಡುಗೊಲ್ಲರ ಹಟ್ಟಿಯಲ್ಲಿ ೧೯೪೫ರಲ್ಲಿ ಜನನ. ತಂದೆ ದೊಡ್ಡಕಂಬಜ್ಜ, ತಾಯಿ ತಿಮ್ಮಕ್ಕ. ಈ ದಂಪತಿಗಳ ೯ ಮಕ್ಕಳಲ್ಲಿ ಇವರು ಎರಡನೆಯವರು.

೧೯೬೦ರಲ್ಲಿ ತೋಪಕ್ಕ ಎಂಬುವರೊಂದಿಗೆ ವಿವಾಹವಾದರು. ಇವರಿಗೆ ಜನಿಸಿದ ಮೂವರು ಮಕ್ಕಳಲ್ಲಿ ಎರಡು ಹೆಣ್ಣು ಒಂದು ಗಂಡು. ಮಗ ಶ್ರೀನಿವಾಸ ಹಾಡುಗಾರಿಕೆ, ಚಿತ್ರರಚನಾ ಕಲೆಯಲ್ಲಿಯೂ ಪರಿಣಿತರಾಗಿದ್ದಾರೆ. ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ದೇವಿ ಗೋವಿಂದಪ್ಪ, ಪೌರಾಣಿಕ ಚಿತ್ರಗಳನ್ನು, ಭಿತ್ತಿಚಿತ್ರಗಳ ರೂಪದಲ್ಲಿ ಸೊಗಸಾಗಿ ಬಿಡಿಸುತ್ತಾರೆ. ಕಾಡುಗೊಲ್ಲರಲ್ಲಿ ಈ ಕಲೆ ಅಪರೂಪವಾಗಿದ್ದು ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ಅವರ ಸಂಪರ್ಕ ಪ್ರೇರಣೆ, ಪ್ರಭಾವ ಎಂದು ಹೇಳಿಕೊಳ್ಳುತ್ತಾರೆ.

ಗೋವಿಂದಪ್ಪ ಇಂದು ಪೂರ್ಣಕಾಲಿಕ ಕಲಾವಿದರು. ದೇವಾಲಯಗಳಲ್ಲಿ ಭಿತ್ತಿಚಿತ್ರ ಬಿಡಿಸುವುದು ಸಾಂದರ್ಭಿಕವಾಗಿ ಕೋಲುಪದ, ನೃತ್ಯಕಲಿಸುವ ಕೆಲಸ. ಹಾಗಾಗಿ ತುಮಕೂರು, ಚಿತ್ರದುರ್ಗ, ದಾವಣಗೆರೆ, ನೆರೆಯ ಆಂಧ್ರದ ಅನಂತಪುರ ಜಿಲ್ಲೆಯ ಮಡಕಶಿರಾ, ಪೆನಗೊಂಡೆ ಈ ತಾಲ್ಲೂಕು ಕೃಷ್ಣಗಿರಿ, ಬಳ್ಳಾರಿ, ರಾಂಪುರ, ಮೊಳಕಾಲ್ಮೂರು, ಹಿರಿಯೂರು, ಚಳ್ಳಕೆರೆ, ಜಗಳೂರು, ಪಾವಗಡ, ಮಧುಗಿರಿ ಈ ಭಾಗಗಳಲ್ಲಿ ಕೋಲಾಟ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಯುವಕ ಸಂಘಗಳಿಗೆ ವಾಯಿದೆ ಪ್ರಕಾರ ಕಲಾಶಿಕ್ಷಕರಾಗಿ ತಿಂಗಳುಗಟ್ಟಲೆ ಕೋಲಾಟ ತರಬೇತಿ ನೀಡುತ್ತಿದ್ದಾರೆ. ಪರಶುರಾಮಪುರ, ಧರ್ಮಪುರ, ಹರಿಯಬ್ಬೆ, ಸಕ್ಕರ ಈ ಗ್ರಾಮಗಳ ಶಾಲಾ ಮಕ್ಕಳಿಗೆ ವಿಶೇಷವಾಗಿ ಕೋಲಾಟ ಕಲಿಸಿದ್ದಾರೆ. ಸಮುದಾಯದತ್ತ ಶಾಲಾ ಯೋಜನೆಯ ಸಾಂಸ್ಕೃತಿಕ ಸಂಪನ್ಮೂಲ ವ್ಯಕ್ತಿಯಾಗಿಯೂ ಕೆಲಸ ಮಾಡಿದ್ದಾರೆ.

ಒಬ್ಬರು ಕರೆದಲ್ಲಿಗೆ ಹೋಗಿ ಕೋಲಾಟ ಕಲಿಸುವುದು ಒಂದು ಪ್ರಕಾರವಾದರೆ, ಸಾಂಸ್ಕೃತಿಕ ಕಲಾತಂಡವನ್ನು ತಮ್ಮೊಂದಿಗೆ ಅಣಿಗೊಳಿಸಿದ್ದಾರೆ. ಸರ್ಕಾರದ, ಸಾರ್ವಜನಿಕ ಸಾಂಸ್ಕೃತಿಕ ಸಭೆ ಸಮಾರಂಭಗಳಿಗೆ ಆಹ್ವಾನಿತ ಕಲಾತಂಡವಾಗಿ ಕೋಲಾಟ ಪ್ರದರ್ಶನ ನೀಡುವುದು ಇವರ ಹೆಚ್ಚುಗಾರಿಕೆಯಾಗಿದೆ. ಈ ತಂಡದಲ್ಲಿ ಕಲಾವಿದರಾದ ರಾಮಣ್ಣ, ಮೂಡಲಗಿರಿಯಪ್ಪ, ಪಾಂಡಪ್ಪ, ತಿಮ್ಮಣ್ಣ, ತೋಟದ ವೆಂಕಟರಮಣಪ್ಪ ಒಂದು ಗೂಡಿದ ಒಂದು ಕಲಾತಂಡ ಸಾಂಸ್ಕೃತಿಕವಾಗಿ ಪ್ರಬುದ್ಧ ಸ್ಥಿತಿಯಲ್ಲಿದ್ದು ದಾವಣಗೆರೆ, ಸಿರಾ, ಹಳಿಂಯಾಳ, ಶಿವಮೊಗ್ಗ, ಧಾರವಾಡಗಳಲ್ಲಿ ಜರುಗಿದ ರಾಜ್ಯ ಮಟ್ಟದ ಯುವಜನಮೇಳದಲ್ಲಿ ಭಾಗವಹಿಸಿದ್ದಾರೆ. ಇದರ ನೇತಾರರಾಗಿ, ಗುರುವಾಗಿ ದೇವಿಗೋವಿಂದಪ್ಪ ಅವರ ಕಲಾ ಸಂಘಟನೆ ಅನನ್ಯವಾದುದು.

**ದೇವಿಗೋವಿಂದಪ್ಪ,**
**ಹರಿಯಬ್ಬೆಪಾಳ್ಯ, ಧರ್ಮಪುರ ಹೋ.,**
**ಹಿರಿಯೂರು ತಾಲೂಕು.**

## ಹಾವಿನಪ್ಪ

ಕೋಲಾಟದ ಕಲಾವಿದ. ಕಳೆದ ೪೦ ವರ್ಷಗಳಿಂದ ಕೋಲಾಟ ಕಲೆಯನ್ನು ಒಂದು ವ್ರತವನ್ನಾಗಿ ನಡೆಸಿಕೊಂಡು ಬರುವುದಲ್ಲದೆ ಧರ್ಮಪುರ ಹೋಬಳಿಯ ಬಹುತೇಕ ಯುವಕ ಸಂಘಗಳಿಗೆ ಕೋಲಾಟ ಕಲೆಯನ್ನು ಕಲಿಸಿರುವ ಹಿರಿಮೆಗೂ ಪಾತ್ರರಾಗಿದ್ದಾರೆ.

ಹಿರಿಯೂರು ತಾಲೂಕು, ಧರ್ಮಪುರ ಸಮೀಪದ ಶ್ರವಣಗೆರೆ ಗೊಲ್ಲರಹಟ್ಟಿಯ ಹಾವಿನಪ್ಪ ಶಾಸ್ತ್ರೀಯವಾಗಿ ಕೋಲಾಟ ಕಲಿತದ್ದು ಅದೇ ಗ್ರಾಮದ ಚಿತ್ತಯ್ಯನವರಿಂದ. ಕೋಲಾಟದಲ್ಲಿ ಎಷ್ಟು ವೈವಿಧ್ಯ ತರಬಹುದೋ ಅದೆಲ್ಲವನ್ನೂ ಯುವಕ ಸಂಘಗಳ ಮೂಲಕ ತೋರಿಸುತ್ತಾ ಕೋಲಾಟ ಕಲೆಯ ಪ್ರಸಾರ ಕಾರ್ಯದಲ್ಲಿ ನಿರತರಾಗಿರುವುದು ಇವರ ವಿಶೇಷ. ಕಾಡುಗೊಲ್ಲರು ಸಾಮಾನ್ಯವಾಗಿ ಸಂಸ್ಕೃತಿ ಪ್ರಿಯರು. ನಿಂತರೆ, ಕುಳಿತರೆ ಹಾಡುವ, ಗಣೆ ಊದುವ, ದೇವರ ಪದ ಹೇಳುವುದು ಸರ್ವೇಸಾಮಾನ್ಯ. ಆದರೆ ಎಲ್ಲರೂ ಹಾಡುವ ಅಥವಾ ಯಾವುದೋ ಒಂದೇ ಪ್ರಕಾರದಲ್ಲಿ ಪರಿಣಿತರಾಗುವುದಿಲ್ಲ. ಆದರೆ ಹಾವಿನಪ್ಪ ಕೋಲಾಟದಲ್ಲಿ ಹೆಸರುವಾಸಿ ಕಲಾವಿದರು. ಕಾಲಲ್ಲಿ ಗೆಜ್ಜೆ, ಸೊಂಟಕ್ಕೆ ಬಿಗಿದ ವಸ್ತ್ರ, ತಲೆಯ ಮೇಲೆ ಪೇಟ, ಬಿಳಿಯ ಪಂಚೆ, ಸರ್ಜ್‌ಕೋಟು, ತಾಳ ಹಿಡಿದು ನಿಂತರೆ ಹಾಡುಗಳ ಸುಧೆ, ಕುಣಿತದ ವೈಭವ, ನವಿಲ ನರ್ತನ ಅದ್ಭುತವಾದುದು. ಕೋಲಾಟ ಕೋಲಿನಲ್ಲಿ ಕೊರವಂಜಿಕೋಲು, ಒಳಕೋಲು, ಹೊರಕೋಲು, ಜಡೆಕೋಲು, ಕುಳಿತು ಬಾರಿಸುವ ಕೋಲು, ಜೋಡಿಗೋಲು, ಹೀಗೆ ಹಲವು ವೈವಿಧ್ಯತೆಯನ್ನು ಕೋಲುಕಲೆಯಲ್ಲಿ ತಂದಿದ್ದಾರೆ. ಚಳ್ಳಕೆರೆ, ಹಿರಿಯೂರು, ಸಿರಾ, ಪಾವಗಡ, ಧರ್ಮಪುರ, ಬಳ್ಳಾರಿ ಜಿಲ್ಲೆಯಲ್ಲಿಯೂ ಯುವಕ ಸಂಘಗಳ ಮೂಲಕ ಯುವಕರಿಗೆ ಕೋಲು ಕಲೆಯನ್ನು ಕಲಿಸುತ್ತಾ ಬಂದಿದ್ದಾರೆ.

ಇಬ್ಬರು ಗಂಡುಮಕ್ಕಳ ತಂದೆಯಾಗಿದ್ದರೂ, ಕುಟುಂಬ ನಿರ್ವಹಣೆಗಿಂತ ಕೋಲು ಕಲೆಗಾಗಿಯೇ ಊರೂರು ತಿರುಗುತ್ತಾ, ಕೋಲಾಟದ ಮೇಷ್ಟು ಎಂಬ ಹಿರಿಮೆಗೂ ಪಾತ್ರರಾಗಿರುವ ಹಾವಿನಪ್ಪ ಕೋಲುಪದಗಳ ಜೊತೆಗೆ ಜುಂಜಪ್ಪನ ಪದ, ಚಿತ್ರದೇವರ ಪದ, ಕ್ಯಾತೆದೇವರ ಪದಗಳನ್ನು ಹಾಡುತ್ತಾರೆ. ನಾಯಕನಹಟ್ಟಿ ತಿಪ್ಪೇಸ್ವಾಮಿ, ಮೈಲಾರಲಿಂಗ, ನಂದಿಹಳ್ಳಿ ರಂಗಪ್ಪನ ಮೇಲೆ ವಿಶೇಷವಾಗಿ ಕೋಲುಪದ ಹಾಡುತ್ತಾರೆ. ೬೦ರ ಅಂಚಿನಲ್ಲಿರುವ ರಂಗಪ್ಪ ದಲಿತ ಯುವಕ ಸಂಘಗಳೊಂದಿಗೆ ಕ್ರಾಂತಿಗೀತೆಗಳನ್ನು ಹಾಡುತ್ತಾರೆ. ಸೋಬಾನೆ ಪದಗಳನ್ನು ಹಾಡುತ್ತಾರೆ. ರಂಗಗೀತೆಯಲ್ಲೂ ಪರಿಣಿತರು. ಇರುವ ಒಂದಿಷ್ಟು ಕುರಿಪಾಲನೆಗೂ ಮುಂದಾಗದೆ ಕಲೆಯ ತಿರುಗಾಟದೊಂದಿಗೆ ಚಿತ್ರದುರ್ಗ ಜಿಲ್ಲೆಯಾದ್ಯಂತ ಸಾಕ್ಷರತೆಯ ಕಲಾವಿದರಾಗಿಯೂ ಕೆಲಸಮಾಡಿದ್ದಾರೆ.

ಹಾವಿನಪ್ಪ,
ಶ್ರವಣಗೆರೆ, ಹಿರಿಯೂರು ತಾಲೂಕು.

## ಕೆ. ರಾಮಚಂದ್ರ

ಜನಪದ ಸಂಗೀತ, ಯಕ್ಷಗಾನ, ಬಯಲಾಟ, ಕೋಲಾಟ, ಹರಿಗೆ ಕುಣಿತ ಹೇಳುಪದಗಾರ ಹಾಗೂ ಕಲಾಸಂಘಟಕರೂ ಆಗಿರುವ ಶ್ರೀ ಕೆ. ರಾಮಚಂದ್ರ ಬಹುಮುಖಿ ಜನಪದ ಕಲಾವಿದ. ಗಾಯಿತ್ರಿ ಜಲಾಶಯಕ್ಕೆ ಅಂಟಿಕೊಂಡಿರುವ ಗೌಡ್ನಹಳ್ಳಿ ಒಂದು ಬುಡಕಟ್ಟು ಗ್ರಾಮ. ಬೇಡ ಅಥವಾ ನಾಯಕರೇ ವಾಸಿಸುವ ಈ ಗ್ರಾಮ, ತಮ್ಮದೇ ಆದ ಕಲಾಸಂಪತ್ತಿನ ಆಗರವೂ ಹೌದು. ತಾತ ಗುಡ್ಡಪ್ಪ ಸ್ವತಃ ಯಕ್ಷಗಾನ ಭಾಗವತರು. ಅಜ್ಜಿ ರಂಗಮ್ಮ ಸೋಬಾನೆ ತತ್ವಪದಗಳ ಶ್ರೀಮಂತೆ. ಇವರಿಗೆ ಹುಟ್ಟಿದ ಕರಿಯಪ್ಪ ಯಕ್ಷಗಾನ ಭಾಗವತರಾಗದಿದ್ದರೂ ಯಕ್ಷಗಾನ ಕಲಾವಿದರಾದರು. ಇವರಿಗೆ ಹುಟ್ಟಿದ ಐದು ಮಕ್ಕಳಲ್ಲಿ ನಾಲ್ಕು ಗಂಡು ಒಂದು ಹೆಣ್ಣು. ಇವರಲ್ಲಿ ಮೊದಲನೆಯ ಮಗ ಲಕ್ಷ್ಮಣ, ತನ್ನ ತಾತನ ಯಕ್ಷಗಾನ ಭಾಗವಂತಿಕೆಯನ್ನು ಸಮರ್ಥವಾಗಿ ಮುಂದುವರಿಸಿರುವ ಹಿರಿಯ ಭಾಗವತರು. ಎರಡನೆಯ ಮಗನೇ ರಾಮಚಂದ್ರ. ರಾಮಚಂದ್ರ ಸ್ನಾತಕೋತ್ತರ ಪದವೀಧರ. ಕಂದಾಯ ಇಲಾಖೆಯ ಅಧಿಕಾರಿಯಾಗಿ ಕಾರ್ಯನಿರ್ವಹಣೆ. ತಮ್ಮ ೮ನೇ ವಯಸ್ಸಿನಿಂದಲೂ ಅಜ್ಜಿ ತಾತರಿಂದ ಕಲಿತ ಜನಪದ ಗೀತೆ, ಕೋಲುಮೇಳ ಇವುಗಳ ಸಂಘಟನೆ, ಕಲಾಪ್ರದರ್ಶನ. ಈ ಸಂಬಂಧಿ ತಿರುಗಾಟಕ್ಕೆ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡವರು. ತಮ್ಮ ಹುಟ್ಟೂರಲ್ಲಿ ಜನಪದ ಕಲಾಸಂಘವನ್ನು ೪೦ ವರ್ಷಗಳ ಹಿಂದೆಯೇ ಕಟ್ಟಿದವರು. ಪಾಳೆಯಗಾರರ ವೇಷವನ್ನು ಕ್ರಮಬದ್ಧವಾಗಿ ಕಲಿತರು. ಇತರರಿಗೆ ಕಲಿಸಿದರು. ಸಣ್ಣೀರನಾಯ್ಕರ ಮೂಲಕ ಕೋಲುಪದ, ನಂತರ ಕೋಲುಮೇಳವನ್ನು ೧೫ ಯುವಕರೊಂದಿಗೆ ಚಿತ್ರದುರ್ಗ ಜಿಲ್ಲೆಯ ಸಮರ್ಥ ಕೋಲಾಟ ಕಲಾತಂಡ ಗೌರವವನ್ನು ಪಡೆದರು. ಸಿರಿಗುಪ್ಪೆ, ಕಂಪ್ಲಿ, ಹಂಪಿ ಉತ್ಸವ, ದುರ್ಗದ ದುರ್ಗೋತ್ಸವ, ಹರ್ತಿಕೋಟೆ ಜನಪದ ಕಲಾಮೇಳ, ಚಳ್ಳಕೆರೆ ಜನಪದ ಕಲೋತ್ಸವ ಇವರ ಆರಂಭಿಕ ಕಲಾಪ್ರದರ್ಶನ ನೀಡಿದ ನೆಲೆಗಳು. ನಂತರ ರವೀಂದ್ರ ಕಲಾಕ್ಷೇತ್ರ,

ಮೈಸೂರು ದಸರಾ ಪ್ರದರ್ಶನ, ಕುವೆಂಪು ವಿಶ್ವವಿದ್ಯಾಲಯದ ಕಲಾಜಾತ್ರೆ, ದಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನ ಇಲ್ಲೆಲ್ಲಾ ಈ ಕಲಾತಂಡ ಕಲಾಪ್ರದರ್ಶನ ನೀಡಿದೆ.

ಕರಿಭಂಟ, ಲವಕುಶ, ಸೀತಾಪರಿತ್ಯಾಗ, ಕರ್ಣಾರ್ಜುನರ ಕಾಳಗ, ದಶಕಂಠ ರಾಮಾಯಣ ಇವರು ನಿರ್ವಹಿಸಿರುವ ಪ್ರಮುಖ ಯಕ್ಷಗಾನಗಳು. ಬಾಲಗಣಪ, ಕುಶ, ಬಾಲಕೃಷ್ಣ ಪಾತ್ರದಿಂದ ಆರಂಭಿಸಿ ರಾಮ–ರಾವಣ, ಕರ್ಣಾರ್ಜುನರ ತನಕ ವೈವಿಧ್ಯ ಪಾತ್ರದಲ್ಲಿ ಕಳೆದ ೪೦ ವರ್ಷಗಳಿಂದ ಸತತವಾಗಿ ಅಭಿನಯಿಸುತ್ತಾ ಬಂದಿದ್ದಾರೆ. ಕರಿಭಂಟ ಯಕ್ಷಗಾನ ಇಂದ ಕರ್ನಾಟಕದಲ್ಲಿಯೇ ಇಲ್ಲವಾಗುತ್ತಿರುವ ಈ ಸಂದರ್ಭದಲ್ಲಿ ೧೦೦ ವರ್ಷಗಳಿಂದ ತಪ್ಪದೆ ಮುಂಗಾರುಮಳೆ ಕರೆಯುವ ಆಚರಣೆಗಾಗಿ ಕರಿಭಂಟನ ಪ್ರಸಂಗವನ್ನು ನಡೆಸಿಕೊಂಡು ಬರುತ್ತಿರುವ ವಿಶಿಷ್ಟ ಕಲಾಗ್ರಾಮ ಗೌಡ್ರಹಳ್ಳಿಯಾದರೆ ಅದರ ಸಂಘಟಕರಾಗಿ ರಾಮಚಂದ್ರ ಅವರ ಸಾಧನೆ ಅನನ್ಯವಾದುದು.

ಇವರು ಹುಡುಕಾಟ ಎಂಬ ಕಲಾತಂಡವನ್ನು ಕಟ್ಟಿದ್ದಾರೆ. ಇದರ ಮುಖ್ಯ ಉದ್ದೇಶ ಹೊಸ ಹೊಸ ಜಾನಪದ ಪ್ರತಿಭೆಗಳನ್ನು ಪತ್ತೆಹಚ್ಚುವುದು. ಈ ಹುಡುಕಾಟ ತಂಡದ ಪ್ರಮುಖ ಕಾಯಕ. ಚಿತ್ರದುರ್ಗ ಜಿಲ್ಲೆಯ ಒಂದು ಗ್ರಾಮವನ್ನು ತಿಂಗಳಲ್ಲಿ ಒಂದು ದಿನ ಆರಿಸಿಕೊಳ್ಳುತ್ತಾರೆ. ಗ್ರಾಮದ ಶಾಲಾ ಆವರಣ, ಅರಳಿಕಟ್ಟೆ, ದೇವಾಲಯದ ಅಂಗಳವೇ ಇವರ ವೇದಿಕೆ. ಅಲ್ಲಿ ಮೊದಲು ಇವರ ತಂಡ ಹಾಡುತ್ತದೆ. ನಂತರ ಊರಿನ ಕಲಾವಿದರೂ ಜೊತೆಗೂಡುತ್ತಾರೆ. ಹೀಗೆ ಹತ್ತಾರು ಕಲಾವಿದರನ್ನು ಗುರುತಿಸಿದ ಕಲಾಪ್ರದರ್ಶನಕ್ಕೆ ಅಣಿಗೊಳಿಸಿದ ಹಿರಿಮೆ ರಾಮಚಂದ್ರಪ್ಪನವರದು.

ಹುಡುಕಾಟ ತಂಡ ೧೯೯೫ರಲ್ಲಿ ಧಾರವಾಡದಲ್ಲಿ ನಡೆದ ರಾಜ್ಯ ಯುವಜನ ಮೇಳದಲ್ಲಿ ಪ್ರಥಮ ಬಹುಮಾನ ಹಾಗೂ ವಿಶೇಷ ಬಹುಮಾನಗಳನ್ನು ಪಡೆಯಿತು. ಇದರ ನಿರ್ದೇಶಕರು ರಾಮಚಂದ್ರ ಅವರು. ಕೋಲಾಟ, ಮೂಡಲಮಣೇವು, ಹರಿಗೆ ಕುಣಿತ ಈ ಮೊದಲಾದ ಬುಡಕಟ್ಟು ಕಲೆಗಳ ಸಂಸ್ಕರಣೆ, ಅನ್ವೇಷಕರಾಗಿಯೂ ರಾಮಚಂದ್ರಪ್ಪ ಕೆಲಸ ಮಾಡಿದ್ದಾರೆ.

ಇವರ ಹಾಡುಗಾರಿಕೆಯನ್ನು ಪರಿಗಣಿಸಿ ಸಿರಗುಪ್ಪ ಜನಪದ ಕಲಾಸಂಸ್ಥೆ ಜಾನಪದ ಕಿನ್ನರ ಪುರಸ್ಕಾರವೂ ಸೇರಿದಂತೆ ಧಾರವಾಡ, ಕಂಪ್ಲಿ, ಬೆಂಗಳೂರು ಈ ಭಾಗದ ಕಲಾ ಸಂಸ್ಥೆಗಳಿಂದಲೂ ಗೌರವಕ್ಕೆ ಪಾತ್ರರಾಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿರುವ ರಾಮಚಂದ್ರರ ಹಾಡುಗಾರಿಕೆಯನ್ನು ಕಿರಿಯ ಮಗಳು ಅರ್ಪಿತ ಮುಂದುವರಿಸಿರುವುದು ವಿಶೇಷ.

ಕೆ. ರಾಮಚಂದ್ರ,
ಗೌಡ್ನಹಳ್ಳಿ, ಹಿರಿಯೂರು ತಾಲೂಕು.

## ಘನಿಸಾಬ್

ಘನಿಸಾಬ್ ಮೊಳಕಾಲ್ಮೂರು ತಾಲ್ಲೂಕು ಬಿ.ಜಿ. ಕೆರೆಯವರು. ತಂದೆ ಹಸನ್‌ಸಾಬ್, ತಾಯಿ ಖಾತುನಭಿಪಾತಿ. ಹುಟ್ಟಿದ್ದು ೧೯೩೦ರಲ್ಲಿ. ಭಾರತ ಸ್ವಾತಂತ್ರ್ಯ ಚಳುವಳಿಯ ಸಮಗ್ರ ಪರಿಚಯವೂ ಸೇರಿದಂತೆ ಕರ್ನಾಟಕ ಏಕೀಕರಣ ಹೋರಾಟವನ್ನು ಬಲ್ಲವರು. ಅದಕ್ಕಾಗಿ ಹೋರಾಟ ಮಾಡಿರುವುದಾಗಿ ಘನಿಸಾಬ್ ಹೇಳುತ್ತಾರೆ. ೭೭ ವರ್ಷ ವಯಸ್ಸಿನ ಸಾಹೇಬರಿಗೆ ಒಟ್ಟು ೫ ಜನ ಮಕ್ಕಳು. ಅದರಲ್ಲಿ ಮೂವರು ಗಂಡು, ಎರಡು ಹೆಣ್ಣು ಮಕ್ಕಳು.

ಘನಿಸಾಬರು ರಂಗಕಲಾವಿದರು. ಯಕ್ಷಗಾನ ರಂಗಪರಿಕರ ತಯಾರಕರು. ಚಿತ್ರದುರ್ಗ, ಬಳ್ಳಾರಿ, ಚಳ್ಳಕೆರೆ ಆಂಧ್ರದ ಕಲ್ಯಾಣದುರ್ಗ, ಅನಂತಪುರ ತುಮಕೂರು ಜಿಲ್ಲೆಯ ಪಾವಗಡ, ಸಿರಾ, ಮಧುಗಿರಿ ಈ ಭಾಗಗಳಲ್ಲಿನ ಯಕ್ಷಗಾನ ಪ್ರದರ್ಶನಗಳಿಗೆ ರಂಗಸಜ್ಜಿಕೆ ನಿರ್ಮಿಸಿದ್ದಾರೆ. ಯಕ್ಷಗಾನ ಹಿಮ್ಮೇಳ ಭಾಗವತರಾಗಿ, ಕಲಾವಿದರಾಗಿ ಕಲಾಸೇವೆ ಮಾಡಿದ್ದಾರೆ. ಪಾರ್ವತಿ ಗರ್ವಭಂಗ ಯಕ್ಷಗಾನದಲ್ಲಿ ಈಶ್ವರನ ಪಾತ್ರ ಇವರಿಗೆ ವಿಶೇಷ ಕೀರ್ತಿ ತಂದುಕೊಟ್ಟಿದೆ. ಶುದ್ಧಪದ, ಮಾತುಗಾರಿಕೆ, ವೇಷಭೂಷಣಗಳಿಂದ ಸ್ವಯಂ ಶಿವನೇ ಧರೆಗಿಳಿದ ಅನುಭವ. ಅಭಿನಯ ನೀಡುವುದು ಇವರ ಕಲೆಗಾರಿಕೆಯ ವಿಶೇಷತೆ. ದೇವಿಮಹಾತ್ಮೆಯಲ್ಲಿ ಸಿಂಹರಾಜನ ಪಾತ್ರ. ಮೋಹಿನಿ ಭಸ್ಮಾಸುರದಲ್ಲಿ ವಾಯುದೇವರ ಪಾತ್ರಗಳೂ ಇವರಿಗೆ ಜನಪ್ರಿಯತೆ ತಂದುಕೊಟ್ಟಿವೆ.

ಇವರ ತಾತ ನಾಟಕದ ಖಾಜೀಸಾಬಿ, ತಂದೆ ಹಸನ್‌ಸಾಬ್ ಕೂಡ ಒಳ್ಳೆಯ ಯಕ್ಷಗಾನ ಕಲಾವಿದರು. ಬಯಲುಕತೆ ಯಕ್ಷಗಾನಗಳಿಗೆ ರಂಗಪರಿಕರ ಪೂರೈಸುತ್ತಿದ್ದ ಕುಟುಂಬ. ಅವರ ಪರಂಪರೆಯನ್ನು ಇವರು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ.

ಯಕ್ಷಗಾನ ನಾಟಕಗಳ ಜೊತೆಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿಯೂ ಪಾತ್ರಮಾಡಿದ್ದಾರೆ. ಕೆಲವು ನಾಟಕಗಳಿಗೆ ನಿರ್ದೇಶನವನ್ನೂ ಮಾಡಿದ್ದಾರೆ. ಕಿತ್ತೂರು ಪದ್ಮಿನಿ, ಉತ್ಕಲ ವಿಜಯ, ರಕ್ತರಾತ್ರಿ ನಾಟಕಗಳಲ್ಲಿ ಪ್ರಮುಖ ಪಾತ್ರನಿರ್ವಹಣೆಯ ಜೊತೆಗೆ ಪಾತ್ರಧಾರಿಯಾಗಿಯೂ ಕಾರ್ಯ ನಿರ್ವಹಣೆ ಮಾಡಿದ್ದಾರೆ. ಹಿಂದೂ-ಮುಸ್ಲಿಂ ಕಲಾಸಂಸ್ಕೃತಿಯ ಸಂಗಮಮೂರ್ತಿಯಾಗಿರುವ ಇವರು ೧೦೦ ಜನ ಶಿಷ್ಯರನ್ನು ತಯಾರಿಸಿದ್ದಾರೆ.

ಅದರಲ್ಲಿ ಖಾತರಕಟ್ಟೆ ಪಾಲಯ್ಯ, ನಾಗರಾಜ, ಸಿದ್ದೇಶ, ವಾಜಿದ್, ಬಿ.ಜಿ.ಕೆರೆಯ ಖಲೀಲ್, ದಾದ, ಚಂದ್ರಣ್ಣ, ಮಲ್ಲಿಕಾರ್ಜುನ, ಮಲ್ಲಯ್ಯ ಮುಖ್ಯರಾದವರು. ಇವರೆಲ್ಲರೂ ಜನಪದ ಹಾಡುಗಾರಿಕೆ, ಯಕ್ಷಗಾನದಲ್ಲಿ ಪರಿಣಿತರು.

ಇವರ ಕಲಾಬದುಕನ್ನು ನಾಡಿನ ಸಾಂಸ್ಕೃತಿಕ ಲೋಕ ಗುರುತಿಸಿ ಗೌರವಿಸಿದೆ. ಬಳ್ಳಾರಿ ರಾಘವ ಕಲಾಮಂದಿರದ ಕಲಾಗೌರವ, ಚಿತ್ರದುರ್ಗ ದಾವಣಗೆರೆ ಜಿಲ್ಲಾಡಳಿತದ ಪ್ರಶಸ್ತಿ, ಚಳ್ಳಕೆರೆ ತಾಲ್ಲೂಕು ಆಡಳಿತದಿಂದ ಗೌರ. ಮೊಳಕಾಲ್ಮೂರು ಚಿತ್ತರಗಿ ಜಗಜ್ಯೋತಿ ಸಾಂಸ್ಕೃತಿಕ ಸಂಘದ ಗೌರವಗಳು ಮುಖ್ಯವಾದವುಗಳು.

೨೦೦೪ರಲ್ಲಿ ಮಂಡ್ಯದ ಕೆ. ವಿ. ಶಂಕರೇಗೌಡರ ಬಯಲು ರಂಗಮಂದಿರದಲ್ಲಿ ನಡೆದ ಯುವಜನ ಮೇಳದಲ್ಲಿ ಇವರು ನಿರ್ದೇಶನದ ಜಾನಪದ ನೃತ್ಯಕ್ಕೆ ಪ್ರಥಮ ಬಹುಮಾನವೂ ಬಂದಿದೆ.

ಘನಿಸಾಬ್,<br>ಬಿ. ಜಿ. ಕೆರೆ, ಮೊಳಕಾಲ್ಮೂರು ತಾಲೂಕು.

## ಬಿ. ಇ. ತಿಪ್ಪೇಸ್ವಾಮಿ

ಮೂಡಲಪಾಯ ಯಕ್ಷಗಾನ ಬಯಲುಸೀಮೆಯ ಗಂಡು ಕಲೆ. ನೃತ್ಯ, ಹಾಡು, ಕಂದ ರೋಚಕ ಮಾತುಗಾರಿಕೆಯಿಂದ ಗ್ರಾಮೀಣ ಪರಿಸರದ ಜನಮನ ಗೆದ್ದ ಪ್ರಸಿದ್ಧ ಕಲೆ. ವರ್ಷದಲ್ಲಿ ಒಮ್ಮೆಯಾದರೂ ಯಕ್ಷಗಾನ ಆಡಲೇಬೇಕು. ಇಲ್ಲದೇ ಹೋದರೆ ಊರಿಗೆ ಏಳಿಗೆ ಇಲ್ಲ. ಮಳೆ-ಬೆಳೆ ಶೂನ್ಯ, ರೋಗ-ರುಜಿನಗಳು ಅಧಿಕವೆಂಬ ನಂಬಿಕೆ ದಟ್ಟವಾಗಿದೆ. ಹಳ್ಳಿಯ ಅನಕ್ಷರಸ್ಥರೂ ಒಂದೊಂದು ಆಟದ ಪಾತ್ರಗಳ ಸಂಭಾಷಣೆಯನ್ನು ಬಾಯಿಪಾಠ ಮಾಡುವ ಮೂಲಕ ತಮ್ಮ ಜೀವನಕ್ಕೆ ಹೊಂದಿಸಿಕೊಂಡು ಪಾತ್ರಮಾಡುತ್ತಾರೆ. ಶಿವರಾತ್ರಿ, ರಾಮನವಮಿ, ಯುಗಾದಿ ಅಥವಾ ಗ್ರಾಮದೇವತೆ ಜಾತ್ರೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಅಭಿನಯ ಇಟ್ಟುಕೊಳ್ಳುವುದು ಇಂದಿಗೂ ರೂಢಿಯಾಗಿದೆ.

ಹೊಳಲ್ಕೆರೆ ತಾಲ್ಲೂಕಿನ ನಾರಶೆಟ್ಟಿಹಳ್ಳಿಯ ತಿಪ್ಪೇಸ್ವಾಮಿ, ಈ ಭಾಗದ ಪ್ರಸಿದ್ಧ ಕಲವಿದರು. ದಿನಾಂಕ ೯-೧೧-೧೯೩೪ರಲ್ಲಿ ಜನಿಸಿದ ಇವರು ವೀರಶೈವ ಕೋಮಿಗೆ ಸೇರಿದವರು. ತಂದೆ ಈಶ್ವರಪ್ಪ, ತಾಯಿ ರುದ್ರಮ್ಮ, ಇವರಿಗೆ ಜನಿಸಿದ ನಾಲ್ಕುಜನ ಮಕ್ಕಳಲ್ಲಿ ತಿಪ್ಪೇಸ್ವಾಮಿ ಮೂರನೆಯವರು. ಇಬ್ಬರು ಅಕ್ಕಂದಿರು, ಒಬ್ಬ ತಮ್ಮ. ೧೯೭೨ರಲ್ಲಿ ವಿವಾಹವಾಗಿರುವ ಇವರಿಗೆ (ಮಡದಿ ರುದ್ರಮ್ಮ) ಮಗ ಮತ್ತು ಮಗಳು ಸೇರಿ ಇಬ್ಬರು ಮಕ್ಕಳಿದ್ದಾರೆ. ೧೯೬೨ ರಿಂದಲೇ ವೃತ್ತಿರಂಗಭೂಮಿ ಕಲಾವಿದರಾಗಿ ಸೇರ್ಪಡೆ. ಬಾಲಕನ ಪಾತ್ರಗಳಲ್ಲಿ ಅಭಿನಯ. ಮೈಸೂರಿನ ಶಿವರುದ್ರಾಚಾರ್ ಎಂಬುವವರಿಂದ ಹಾರ್ಮೋನಿಯಂ ಕಲಿಕೆ, ಪೌರಾಣಿಕ ನಾಟಕಗಳ ನಿರ್ದೇಶನದಿಂದಾಗಿ ರಂಗನಿರ್ದೇಶನಕ್ಕೆ ತೊಡಗಿದ ತಿಪ್ಪೇಸ್ವಾಮಿ, ೧೯೭೨ರಿಂದ ಯಕ್ಷಗಾನದ ಗೀಳು ಹಿಡಿಸಿಕೊಂಡರು. ಮಲೇನೂರಿನ ಶ್ರೀ ಈಶ್ವರಪ್ಪ ಎಂಬುವವರಿಂದ ಯಕ್ಷಗಾನ ಭಾಗವಂತಿಕೆಯ ಕಲಿಕೆ. ಸತತವಾಗಿ ಹತ್ತು ವರ್ಷಗಳ ಕಾಲ ಯಕ್ಷಗಾನ ಅಭ್ಯಾಸ. ಇದಕ್ಕಾಗಿ ಅವರೊಂದಿಗೆ,

ಅವರು ಯಕ್ಷಗಾನ ಕಲಿಸುತ್ತಿದ್ದ ಊರುಗಳಿಗೆಲ್ಲಾ ಅಲೆದಾಡಿದರು. ನಂತರ ೧೯೮೨ರಿಂದ ಯಕ್ಷಗಾನ ಭಾಗವತರಾಗಿ ಕಾರ್ಯನಿರ್ವಹಿಸತೊಡಗಿದರು.

ಬಯಲುಸೀಮೆಯ ಚಿತ್ರದುರ್ಗ, ತುಮಕೂರು, ಹಾಸನದ ಕೆಲವು ತಾಲ್ಲೂಕು ಇಲ್ಲಿ ಮೂಡಲಪಾಯ ಯಕ್ಷಗಾನದಲ್ಲಿ ಪ್ರಸಿದ್ಧವಾದದ್ದು. ಕರಿಭಂಟನ ಕಾಳಗ ಯಕ್ಷಗಾನದ ಸ್ವಲ್ಪ ಅಭಿರುಚಿಯಿರುವ ಕಲಾವಿದನೂ ಕರಿಭಂಟ ನಾಟಕದ ಬಗೆಗೆ ಮಾತನಾಡುವಷ್ಟು ಪ್ರಾಜ್ಞತೆಯನ್ನು ಬೆಳೆಸಿಕೊಂಡಿರುವುದು ವಿಶೇಷ.

ತಿಪ್ಪೇಸ್ವಾಮಿ ಮೊದಲು ಯಕ್ಷಗಾನ ಭಾಗವಂತಿಕೆ ನೀಡಿದ ಪ್ರಸಂಗವೇ ಕರಿಭಂಟನ ಕಾಳಗ. ಕಂಸವಧೆ, ಕೃಷ್ಣಾರ್ಜುನರ ಕಾಳಗ, ಲವಕುಶ, ಸತ್ಯ ಹರಿಶ್ಚಂದ್ರ, ಶ್ರೀ ಮಹಾಂದಾತ ಚರಿತ್ರೆ, ಭೂಕೈಲಾಸ, ದಕ್ಷಯಾಗ, ವಿರಾಟಪರ್ವ ಈ ಪ್ರಸಂಗವನ್ನು ತಲಾ ಹತ್ತು ಬಾರಿಗೂ ಕಡಿಮೆ ಇಲ್ಲದಂತೆ ಕಲಿಸಿದ್ದಾರೆ. ಹವ್ಯಾಸಿಯಾಗಿ ಸ್ವಗ್ರಾಮದಲ್ಲಿ ವೃತ್ತಿಯಾಗಿ ಚಿತ್ರದುರ್ಗದಾದ್ಯಂತ ಯಕ್ಷಗಾನವನ್ನು ನಿರಂತರವಾಗಿ ಕಲಿಸಿದ್ದಾರೆ. ಹವ್ಯಾಸಿಯಾಗಿ ಸ್ವಗ್ರಾಮದಲ್ಲಿ ವೃತ್ತಿಯಾಗಿ ಚಿತ್ರದುರ್ಗದಾದ್ಯಂತ ಯಕ್ಷಗಾನವನ್ನು ನಿರಂತರವಾಗಿ ಕಲಿಸುತ್ತಾ ಬಂದಿರುವುದು ಇವರ ವಿಶೇಷವಾಗಿದೆ.

೧೯೬೦ ರಿಂದ ೧೯೭೨ರವರೆಗೆ ಮೈಸೂರಿನ ಶ್ರೀ ಮಂಜುನಾಥ ನಾಟ್ಯಕಲಾ ಸಂಘದಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸುತ್ತಾ ಬಂದರು. ಶನಿಪ್ರಭಾವ, ಶ್ರೀಕೃಷ್ಣ ಗಾರುಡಿ, ಕುರುಕ್ಷೇತ್ರ, ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ, ದಾನಶೂರ ಕರ್ಣ ಈ ಮೊದಲಾದ ಪೌರಾಣಿಕ ನಾಟಕಗಳನ್ನು ಜಗಜ್ಯೋತಿ ಬಸವೇಶ್ವರ, ಎಚ್ಚಮನಾಯಕ, ಟಿಪ್ಪುಸುಲ್ತಾನ್ ಮೊದಲಾದ ಐತಿಹಾಸಿ ನಾಟಕಗಳನ್ನು ದೀಪಾವಳಿ, ಕೊಂಡು ತಂದ ಗಂಡ, ಅಣ್ಣತಂಗಿ, ತಾಯಿ ಕರುಳು, ಅಣ್ಣ-ಅತ್ತಿಗೆ ಈ ಮೊದಲಾದ ಸಾಮಾಜಿಕ ನಾಟಕಗಳಲ್ಲಿ ನಿತ್ಯವೂ ಪಾತ್ರಧಾರಿಗಳಾಗಿ ಕಾರ್ಯನಿರ್ವಹಿಸಿದರು. ಮೈಸೂರು ಕಂಪನಿಯ ಸತ್ಯಣ್ಣ ಅವರ ಮಾರ್ಗದರ್ಶನದಲ್ಲಿ ಹಾರ್ಮೋನಿಯಂ ಕಲಿಯಲು ಪ್ರಾರಂಭಿಸಿ ಅಲ್ಲಿಂದ ಬಿಟ್ಟು ಬಂದು ಮೈಸೂರಿನ ಸಂಗೀತ ವಿದ್ವಾಂಸ ದೇವೇಂದ್ರಪ್ಪನವರ ಶಿಷ್ಯತ್ವ ಸ್ವೀಕರಿಸಿ, ಸಂಗೀತ ಕಲಿಕೆಯನ್ನು ಮುಂದುವರಿಸಿದರು. ಮುಂದೆ ಶ್ರೀ ರುದ್ರಾಚಾರ್ ಅವರಿಂದ ಹಿಂದೂಸ್ತಾನಿ ಸಂಗೀತ, ಶಾಸ್ತ್ರೀಯ ಸಂಗೀತ, ಚಿಟ್ಟಿಸ್ವರ, ಜಂಟಿಸ್ವರ, ಗೀತೆಗಳು, ವಚನಸಾಹಿತ್ಯ, ದಾಸಸಾಹಿತ್ಯ, ಸುಗಮ ಸಂಗೀತ ಇವುಗಳನ್ನು ಶಾಸ್ತ್ರೋಕ್ತವಾಗಿ ೧೦ ವರ್ಷಗಳ ಕಾಲ ಅಭ್ಯಾಸ ಮಾಡಿದರು. ಆಯುರ್ವೇದ ಪಂಡಿತರೂ ಆಗಿರುವ ಇವರು ೫ ವರ್ಷ ಈ ಬಗ್ಗೆ ಅಭ್ಯಾಸ ಮಾಡಿದ್ದಾರೆ. ೧೯೮೨ರಿಂದ ತರಳಬಾಳು ಶಿವಕುಮಾರ ಸ್ವಾಮೀಜಿಗಳ ಹವ್ಯಾಸಿ ರಂಗಭೂಮಿಯಲ್ಲಿ ವೃತ್ತಿ ಕಲಾವಿದರಾಗಿ ಇಂದಿಗೂ ಕಾರ್ಯನಿರ್ವಹಿಸುತ್ತಿರುವ ತಿಪ್ಪೇಸ್ವಾಮಿಯವರಿಗೆ ತರಳಬಾಳು ಬೃಹನ್ಮಠವೂ ಸೇರಿದಂತೆ ಚಿತ್ರದುರ್ಗ ಜಿಲ್ಲಾಡಳಿತ, ದಾವಣಗೆರೆ ಜಿಲ್ಲಾಡಳಿತ ಗೌರವಿಸಿವೆ. ರಾಜ್ಯೋತ್ಸವ ಸಂದರ್ಭದ

ಗೌರವವಾಗಿ ಧಾರವಾಡ, ಚಿತ್ರದುರ್ಗ, ಶಿವಮೊಗ್ಗ, ಭದ್ರಾವತಿ, ಮೈಸೂರು ಇಲ್ಲೆಲ್ಲಾ ಸನ್ಮಾನಿಸಿದ್ದಾರೆ. ಹರಿಕಥಾ ವಿದ್ಯೆಯಲ್ಲಿ ಪರಿಣತರಾದ ಇವರು ಆ ಕ್ಷೇತ್ರದಲ್ಲಿ ಸಾಧನೆಗೈದಿದ್ದಾರೆ.

ಜನಪದ, ಸುಗಮಸಂಗೀತ, ಕೀರ್ತನೆ ಈ ಮೂರೂ ಕ್ಷೇತ್ರಗಳಲ್ಲಿ ಅಸಾಮಾನ್ಯ ಆಸಕ್ತಿ ಇರಿಸಿಕೊಂಡು ಸಾಧನೆ ಮಾಡುತ್ತಿರುವ ಹಿರಿಯ ಕಲಾವಿದ ಶ್ರೀ ತಿಪ್ಪೇಸ್ವಾಮಿ.

ಬಿ. ಇ. ತಿಪ್ಪೇಸ್ವಾಮಿ,
ಕಲಾವಿದರು, ನಾರಶೆಟ್ಟಿಹಳ್ಳಿ,
ಹೊಳಲ್ಕೆರೆ ತಾಲೂಕು.

# ಗೋನೂರು ಬೋರಣ್ಣ

ಚಿತ್ರದುರ್ಗ ಸೀಮೆಯ ಚೌಡಿಕೆ ಕಲಾವಿದರಲ್ಲಿ ಪ್ರಸಿದ್ಧವಾದ ಗೋನೂರು ಬೋರಣ್ಣ ಅವರದು ವಿಶೇಷ ಸ್ಥಾನಮಾನ. ಆದಿ ಕರ್ನಾಟ ವರ್ಗಕ್ಕೆ ಸೇರಿದ, ೬೫ ವರ್ಷ ವಯೋಮಾನದ ಬೋರಣ್ಣ, ಯಕ್ಷಗಾನ, ಕೋಲಾಟ ಹಾಗೂ ತತ್ವಪದಗಳನ್ನು ಹಾಡುತ್ತಾರೆ. ಆದರೆ ಅವರಿಗೆ ವಿಶೇಷ ಖ್ಯಾತಿ ತಂದು ಕೊಟ್ಟಿರುವುದು ಚೌಡಿಕೆ ಕಲೆ. ಚೌಡಿಕೆ ಬೋರಣ್ಣ ಎಂದೇ ಹೆಸರಿಡಿದು ಕರೆಯಲ್ಪಡುವ ಬೋರಣ್ಣ ಭಿಕ್ಷಾಟನೆ ಮಡುತ್ತಾ ಉಚ್ಚಂಗೆಮ್ಮ, ದೇವಿ ರೇಣುಕಾ ಎಲ್ಲಮ್ಮ, ಮಾರಮ್ಮ ಇವರ ಕಥೆಗಳನ್ನು ಹಾಡುತ್ತಾರೆ. ಗೌರಸಂದ್ರದ ಮಾರಮ್ಮ, ಜುಂಜಪ್ಪ, ಮೈಲಾರಲಿಂಗನ ಮೇಲೆ ಕಥನ ಗೀತೆಗಳನ್ನು ಹಾಡುತ್ತಾರೆ. ರೇಣುಕೆ ಎಲ್ಲಮ್ಮಳನ್ನು ಕುರಿತು ಸಮಗ್ರ ಕಾವ್ಯ ಹಾಡುವುದು ಇವರ ವಿಶೇಷ. ವಾರದ ಮನೆಗಳಲ್ಲಿ ಶ್ರಾವಣ ಮಾಸದ ದಿನಗಳಲ್ಲಿ ಬಿಡುವಿಲ್ಲದೆ ರಾತ್ರಿ ಇಡೀ ಎಲ್ಲಮ್ಮನ ಕಥೆ ಮಾಡುತ್ತಾರೆ. ಉಳಿದಂತೆ ಉದರ ಪೋಷಣೆಗಾಗಿ ಭಿಕ್ಷಾಟನೆಯೊಂದಿಗೆ ಜೀವನ ಮಾಡುವುದು ಇವರ ದಿನಚರಿಯಾಗಿದೆ.

ಚೌಡಿಕೆ ಕಲಾವಿದರು ಹಿಮ್ಮೇಳ, ಮುಮ್ಮೇಳ ರೂಪದಲ್ಲಿಯೂ ಹಾಡುತ್ತಾರೆ. ಗೋನೂರು ಬೋರಣ್ಣನವರು ಏಕ ಕಲಾವಿದರಾಗಿ ಹಾಡುತ್ತಾರೆ. ಚೌಡಿಕೆಯನ್ನು ಶೃತಿಯನ್ನಾಗಿ ಮಾಡಿಕೊಂಡು ಹಾಡುವುದು ಇವರ ವಿಶೇಷ. ಹಲವು ಭಜನಾ ತಂಡಗಳಿಗೆ ಮಾರ್ಗದರ್ಶಕರಾಗಿಯೂ, ಕಾರ್ಯನಿರ್ವಹಣೆ ಮಾಡುತ್ತಿರುವ ಇವರು, ಡಕ್ಕಿ, ತಮಟೆ, ಮೃದಂಗ ಹಾಗೂ ತಂಬೂರಿ ವಾದ್ಯಗಳನ್ನು ನುಡಿಸುತ್ತಾರೆ. ಡಕ್ಕಿ, ತಮಟೆ, ತಂಬೂರಿ ವಾದ್ಯಗಳನ್ನು ದೇಶಿ ಮಾದರಿಯಲ್ಲಿ ತಯಾರಿಸುವುದು ಇವರ ವಿಶೇಷವಾಗಿದೆ. ಗೋನೂರು ಗ್ರಾಮದಲ್ಲಿ, ಪುಟ್ಟ ಮನೆಯೊಂದನ್ನು ಬಿಟ್ಟರೆ ಈ ಕಲಾವಿದರಿಗೆ ಅನ್ಯ ಸಂಪನ್ಮೂಲಗಳಿಲ್ಲ. ಮೂವರು ಮಕ್ಕಳು, ಮಡದಿಯೊಂದಿಗೆ ಜೀವನ ನಿರ್ವಹಣೆ.

ಮಡದಿ ಮಕ್ಕಳು ಕೂಲಿ ಕಸುಬನ್ನು ಅವಲಂಬಿಸಿದರೆ, ಇವರದು ಭಿಕ್ಷಾಟನೆಯೇ ವೃತ್ತಿ. ಎಲ್ಲಮ್ಮನ ಒಕ್ಕಲುಗಳಲ್ಲಿ ಯಾರಾದರೂ ಕಥೆ ಮಾಡಿಸಿದರೆ ಆ ದಿನ ಅವರಿಗೆ ಬಿಡುವು. ಮಡಿ ಮೈಲಿಗೆಯಿಂದ ಸಿದ್ಧವಾಗಿ ರಾತ್ರಿ ಪುರಾಣ. ದೇವಿ ಕಥೆ ಮಡುತ್ತಾರೆ, ಉಪಕಥೆ ಹೇಳುತ್ತಾರೆ, ತತ್ವಪದ ಹೇಳುತ್ತಾರೆ. ಹಾಡು, ಕಥೆ, ತಮಾಸೆಗಳ ಸಂಗಮ ರೂಪದಲ್ಲಿ ದೇವರ ಕಥೆಯನ್ನು ರಾತ್ರಿ ಪೂರಾ ರಸಗಟ್ಟಿಯಾಗಿ ಆಗು ಮಾಡುವುದು ಇವರ ಅದ್ಭುತ ವರ್ತನೆಯೇ ಆಗಿದೆ. ಆರ್ಥಿಕವಾಗಿ ಜರ್ಜರಿತವಾಗಿರುವ, ಸರ್ಕಾರದಿಂದ ಯಾವುದೇ ಸಹಾಯ ಸಹಕಾರ ಲಭ್ಯವಿಲ್ಲದ ಈ ಕಲಾವಿದನಿಗೆ ಹಾಡೇ ಬದುಕಾಗಿ, ಅವರೇ ಅವರಿಗೆ ಗೌರವ ಭೂಷಣರಾಗಿ, ತಮ್ಮ ಪಾಡಿಗೆ ತಾವು ಅರವತ್ತೈದು ವಸಂತಗಳನ್ನು ಕಳೆದಿದ್ದಾರೆ. ಈ ಕಲಾವಿದರಿಗೆ ಕನಿಷ್ಠ ಕಲಾವಿದರ ಮಾಸಾಶನವಾದರೂ ತುರ್ತಾಗಿ ಆಗಬೇಕಾಗಿದೆ. ನೋಡುವುದಕ್ಕೆ ಸಾಮಾನ್ಯ ವ್ಯಕ್ತಿಯಂತೆ ಕಾಣುವ ಈ ಕಲಾವಿದ ಹಾಡುವುದಕ್ಕೆ ಬಾಯಿ ಬಿಟ್ಟರೆ ಹಾಡಿನ ಭಂಡಾರವೇ ತೆರೆದಂತಾಗುತ್ತದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಏರ್ಪಡಿಸಿದ್ದ ಪರ್ತಿಕೋಟೆ ಜನಪದ ಕಲೋತ್ಸವ, ಪರಶುರಾಮಪುರದ, ಗಡಿನಾಡ ಜಾನಪದ ಸಂಸ್ಕೃತಿ ಉತ್ಸವ, ಚಿತ್ರದುರ್ಗದ ದುರ್ಗೋತ್ಸವ, ಮುರುಘಾಮಠದ ಉತ್ಸವ, ತರಳಬಾಳು ಉತ್ಸವಗಳಲ್ಲಿ ಭಾಗವಹಿಸಿದ್ದಾರೆ.

ಬೋವಿ ಜಯಮ್ಮ ಅವರೊಂದಿಗೆ ಆಕಾಶವಾಣಿ ಚಿತ್ರದುರ್ಗದಲ್ಲಿ ಹಾಡಿರುವ ಇವರು ಮೈಸೂರು ದಸರಾ ಉತ್ಸವದಲ್ಲೂ ಭಾಗವಹಿಸಿದ್ದಾರೆ.

**ಗೋನೂರು ಬೋರಣ್ಣ,**
**ಜಾನಪದ ಕಲಾವಿದ,**
**ಗೋನೂರು, ಚಿತ್ರದುರ್ಗ ತಾಲೂಕು.**

## ವೆಂಕಟೇಶ್

ವೆಂಕಟೇಶ್ ಜನಪದ ಸಂಗೀತ ಕಲಾವಿದ. ಕಲಾ ಸಂಘಟಕ, ವಿಶೇಷವಾಗಿ ಎಲ್ಲಾ ಬಗೆಯ ಚರ್ಮ ವಾದ್ಯಗಳನ್ನು ನುಡಿಸುತ್ತಾ ಹಾಡುವುದು ಇವರ ಸಂಪ್ರದಾಯ. ತತ್ವಪದ, ಲಾವಣಿ, ಪರಿಸರ ಗೀತೆ, ಇವರ ಒಲವಿನ ಕ್ಷೇತ್ರವಾಗಿದೆ. ೧೯೪೭ರಲ್ಲಿ ಜನಿಸಿದ ಇವರು, ತಂದೆ ಡಿ. ಲಕ್ಷ್ಮಣಪ್ಪ ತಾಯಿ ಬೋವಿ ಜಯಮ್ಮ, ಇವರಿಗೆ ಜನಿಸಿದ ಹತ್ತು ಮಕ್ಕಳಲ್ಲಿ ವೆಂಕಟೇಶ್ ಮೊದಲಿಗರು. ನಾಲ್ವರು ಸೋದರಿಯರು, ಐವರು ಸೋದರರನ್ನು ಹೊಂದಿರುವ ವೆಂಕಟೇಶ್‌ಗೆ ಕಲಾಗುರು ಅಜ್ಜಿ ದೊಡ್ಡ ಹನುಮಕ್ಕ, ಪ್ರೇರಣೆ ಸೋದರ ಮಾವ ಭಾಗವತ ತಮ್ಮಣ್ಣ. ಇವರಿಂದಾಗಿ ರಂಗ ಕುಣಿತ, ಯಕ್ಷಗಾನ ಪಾತ್ರದಾರಿಕೆ, ಹಿಮ್ಮೇಳ ಸಂಗೀತ ಕಲಿತರು.

ತಮ್ಮ ಹತ್ತನೇ ವಯಸ್ಸಿನಲ್ಲಿಯೇ ಜನಪದ ಕಥನ ಗೀತೆಗಳನ್ನು ಶಾಲೆಯಲ್ಲಿ ಹಾಡುತ್ತಾ, ಹಾಡುಗಾರ ವೆಂಕಟೇಶ ಎಂಬ ಹಿರಿಮೆಗೆ ಪಾತ್ರರಾದವರು. ಹಾಗಾಗಿ ಹತ್ತನೇ ತರಗತಿಯವರೆಗೆ ಶಾಲೆ ಕಲಿಯುವುದೇ ಇವರಿಗೆ ದುಸ್ತರವಾಯಿತು. ಯಕ್ಷಗಾನದ ಬಾಲ ಕಲಾವಿದರಾಗಿ ಭಾಗವತ ತಮ್ಮಣ್ಣ ಅವರೊಂದಿಗೆ ಊರೂರು ಅಲೆಯುವುದು ಒಂದೆಡೆಯಾದರೆ, ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಿರಲಿ ಅಲ್ಲಿ ಇವರ ತಾಯಿ ಜಯಮ್ಮ, ನೆರೆಯ ಚೆನ್ನಮ್ಮ ಹಾಡುತ್ತಿದ್ದರು. ಅವರ ಒಡನಾಡಿಯಾಗಿ ವೆಂಕಟೇಶ ಭಾಗವಹಿಸುತ್ತಾ ಜನಪದ ಸಂಗೀತದತ್ತ ಪೂರ್ಣ ಗಮನ ಹರಿಸಿದರು.

ಗುಣಸಾಗರಿ, ಜುಂಜಪ್ಪ ಚಿತ್ರದುರ್ಗದ ಮದಕರಿ, ಗೌರಸಂದ್ರದ ಮಾರಮ್ಮ ಇವರನ್ನು ಕುರಿತು ಕಥನ ಗೀತೆಗಳನ್ನು ಹಾಡುತ್ತಾರೆ. ಗಂಗೆ–ಗೌರಿ ಕಥನವನ್ನು ರಾತ್ರಿಯಲ್ಲಾ ಮಾಡಬಲ್ಲರು. ಪರಿಸರ, ಶಿಕ್ಷಣ, ಕ್ರಾಂತಿ ಗೀತೆಗಳನ್ನು ಹಾಡುವುದು ಇವರ ವಿಶೇಷವಾಗಿದೆ.

ಧಾರವಾಡದ ಯುವಜನ ಮೇಳದಲ್ಲಿ ೧೯೯೯ರಲ್ಲಿ ಅತ್ಯುತ್ತಮ ಗಾಯನಕ್ಕೆ ಬಹುಮಾನ ಪಡೆದಿದ್ದಾರೆ. ಮಂಡ್ಯ, ಕಾರವಾರಗಳಲ್ಲಿ ಜರುಗಿದ ಯುವಜನ ಮೇಳಗಳಲ್ಲಿ ಭಾಗವಹಿಸಿದ್ದಾರೆ. ಆದಿಚುಂಚನಗಿರಿ, ಜನಪದ ಕಲಾ ಮಹೋತ್ಸವದಲ್ಲಿ ಹಲವು ಬಾರಿ ಆಹ್ವಾನಿತ ಕಲಾವಿದರಾಗಿ ಭಾಗವಹಿಸಿದ್ದಾರೆ.

ತಾಯಿ ಬೋವಿ ಜಯಮ್ಮ ಅವರ ಮೈಲಾರಲಿಂಗ, ಮದುಕರಿ ನಾಯಕನ ಕಥನ ಗೀತೆಗೆ ಹಿಮ್ಮೇಳ, ಪೂರಕ ತಮಟೆ ವಾದ್ಯ ನೀಡುವುದು ಇವರ ವಿಶೇಷವಾಗಿದೆ.

ಮಡದಿ ರುದ್ರಮ್ಮ ಅವರೊಂದಿಗೆ ಎರಡು ಹೆಣ್ಣು ಒಂದು ಗಂಡು ಮಕ್ಕಳೊಂದಿಗೆ ಚಿತ್ರದುರ್ಗದ ಕೆಳಕೋಟೆ ಬಡಾವಣೆಯಲ್ಲಿ ವಾಸ ಮಾಡುತ್ತಿರುವ ವೆಂಕಟೇಶ್, ಆರ್ಥಿಕವಾಗಿ ಜರ್ಜರಿತರಾಗಿದ್ದಾರೆ.

ಕಲಾ ಬದುಕಿನೊಳಗೆ ಇತರೆ ಕಾಯಕ ಪ್ರಜ್ಞೆ ಇಲ್ಲದಿರುವುದರಿಂದ, ಕಲೆಯ ಆಶ್ರಯ ಬದುಕಿಗೆ ಸಾಕಾಗುವುದಿಲ್ಲ ಎಂಬ ಕೊರಗು. ಅಜ್ಜಿ, ಮಾವ, ತಾಯಿಯಿಂದ ಪರಂಪರಾಗತವಾಗಿ ಬಂದ ಕಲೆಯನ್ನು ಮುಂದುವರಿಸಬೇಕೆಂಬ ಅತೀವ ಉತ್ಸಾಹ ವೆಂಕಟೇಶ ಅವರದು.

ವೆಂಕಟೇಶ್,
ಜನಪದ ಕಲಾವಿದ, ಕೆಳಕೋಟೆ,
ಚಿತ್ರದುರ್ಗ ಟೌನ್.

## ದೊಡ್ಡತಿಮ್ಮಯ್ಯ

ಯಕ್ಷಗಾನ, ಜನಪದ ಸಂಗೀತ, ಕೋಲು ಮೇಳ, ಈ ಮೂರು ಜನಪದ ಕಲೆಗಳ ಮೂರು ತಲೆಮಾರುಗಳ ಸಮರ್ಥ ಕಲಾ ಕುಟುಂಬ ದೊಡ್ಡತಿಮ್ಮಯ್ಯ ಅವರದು. ತಾತ ತೋಟದ ತಿಮ್ಮಯ್ಯ ತಂದೆ ಗಿರೇತಿಮ್ಮಯ್ಯ – ದೊಡ್ಡತಮ್ಮಯ್ಯ ಹೀಗೆ ಮೂರು ತಲೆ ಮಾರುಗಳ ಭಾಗವಂತಿಕೆ, ಕೋಲಾಟ ಹಾಗೂ ಜನಪದ ಸಂಗೀತ ಕಲಾವಂತ ಕುಟುಂಬ. ದೊಡ್ಡತಿಮ್ಮಯ್ಯನವರು ಹುಟ್ಟಿದ್ದು ೧೯೪೦ರಲ್ಲಿ ಹಿರಿಯೂರು ತಾಲ್ಲೂಕಿನ ಧರ್ಮಪುರ ಹೋಬಳಿಯ ಪರಿಯಬ್ಬೆ ಗ್ರಾಮದಲ್ಲಿ. ಕುಂಚಿಟಿಗ ಜನಾಂಗದವರಾದ ಇವರು ಉತ್ತಮ ರೈತಾಪಿ ಬದುಕಿನವರು. ದೊಡ್ಡ ತಿಮ್ಮಯ್ಯನವರಿಗೆ ಮೂವರು ಗಂಡು ಮಕ್ಕಳು. ಹಿರಿಯ ಮಗ ಗಿರಿಸ್ವಾಮಿ ನೌಕರಿಯಲ್ಲಿದ್ದಾನೆ. ಆತನೂ ಕೋಲಾಟದ ಕಲಾವಿದರು.

ದೊಡ್ಡತಿಮ್ಮಯ್ಯ ಯಕ್ಷಗಾನ ಹಿಮ್ಮೇಳ ಭಾಗವತರಾಗಿ, ಪಾತ್ರಧಾರಿಗಳಾಗಿ, ವೇಷ ಭೂಷಣ ಕಲಾಕಾರರಾಗಿಯೂ ಕೆಲಸ ಮಾಡಿದ್ದಾರೆ. ದುಶ್ಯಾಸನ ಕಥೆ, ಜಯವಿಜಯ, ಪಾಂಡವರ ವನವಾಸ, ಲವಕುಶ, ಇವರು ಭಾಗವಂತಿಕೆ ನೀಡಿದ ಪ್ರಮುಖ ಯಕ್ಷಗಾನ ನಾಟಕಗಳು. ಸ್ವತಃ ಕಲವಿದರಾದ ಇವರು ಬಯಲು ಕತೆಗಳಲ್ಲಿ ದುಶ್ಯಾಸನ, ರಾವಣ, ರಕ್ತ ಬೀಜಾಸುರ, ಈ ಬಗೆಯ ಘೋರ ಪಾತ್ರಗಳಲ್ಲಿ ಸಮರ್ಥ ಅಭಿನಯ ನೀಡಿದ್ದಾರೆ. ಅರವತ್ತರ ವಯಸ್ಸಿನಲ್ಲಿಯೂ ರಕ್ತ ಬಿಜಾಸುರನ ಪಾತ್ರ ಇವರಿಗೆ ಅಪಾರ ಪ್ರಿಯವಾದುದು.

ದೇವರು ಕರೆಯುವ ಪದ, ಸೋಮನ ಕುಣಿಸುವ ಪದ, ಮಾರಿ ಮೇಳಗಳ ಪದ, ಕೇಕೆ ಪದ ಇವರು ಹಾಡುವ ಪ್ರಮುಖ ಹಾಡುಗಾರಿಕೆಯ ಪ್ರಕಾರಗಳು. ಕೋಲಾಟ ಪದಗಳ ಜೊತೆಗೆ ಕೋಲಾಟದ ನಿರ್ದೇಶಕರೂ ಹೌದು.

ಸರ್ಕಾರದ ನವ ಸಾಕ್ಷರತೆ, ಸರ್ವ ಶಿಕ್ಷಣ ಅಭಿಯಾನ, ಬಾ ಮರಳಿ ಶಾಲೆಗೆ, ಆರೋಗ್ಯ ಇಲಾಖೆಯ ಏಡ್ಸ್ ವಿರೋಧಿ ಆಂದೋಲನ, ಪೋಲಿಯೋ ಲಸಿಕೆ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿ ಕೆಲಸ ಮಾಡಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ, ಸಿರಾ (ತುಮಕೂರು ಜಿಲ್ಲೆ) ಇಲ್ಲಿ ನಡೆದ ಜನಪದ ಕಲಾ ಮೇಳಗಳಲ್ಲಿ ತಮ್ಮ ಕೋಲಾಟದ ತಂಡದೊಂದಿಗೆ ಭಾಗವಹಿಸಿದ್ದಾರೆ.

ಜನಪದ ಗೀತೆಗಳ ಮೂರು ಧ್ವನಿ ಸುರಳಿಗಳನ್ನು ಹೊರತಂದಿರುವ ದೊಡ್ಡ ತಿಮ್ಮಯ್ಯನವರಿಗೆ, ಚಿತ್ರದುರ್ಗದಲ್ಲಿ ನಡೆದ ದುರ್ಗೋತ್ಸವದಲ್ಲಿ ಸನ್ಮಾನಿಸಿದೆ. ಹಲವು ಸಂಘ ಸಂಸ್ಥೆಗಳು ಇವರಿಗೆ ಗೌರವಾರ್ಪಣೆ ಮಾಡಿವೆ.

**ದೊಡ್ಡತಿಮ್ಮಯ್ಯ,**
ಜನಪದ ಕಲಾವಿದರು,
**ಹರಿಯಬ್ಬೆ, ಹಿರಿಯೂರು ತಾಲೂಕು.**

## ಮಹಾಲಿಂಗಪ್ಪ

ಗೊರವರ ಕಲೆ ಬಯಲುಸೀಮೆಯ ಪ್ರಸಿದ್ಧ ಜನಪದ ಕಲಾ ಪ್ರಕಾರ. ಮೈಲಾರ ದೇವರ ಭಕ್ತರು ಗೊರವರನ್ನು ಸ್ವಯಂ ಮೈಲಾರಲಿಂಗನೆಂದೇ ಬಾವಿಸುತ್ತಾರೆ. ಗೊರವಯ್ಯ ಅಥವಾ ಗೊರಪ್ಪ ಮನೆ ಬಾಗಿಲಿಗೆ ಬಂದಾಗ ಸ್ವಯಂ ದೈವವೇ ಮನೆಗೆ ಬಂದಂತಹ ಭಾವನೆ. ತಲೆಯ ಮೇಲೆ ಕರಡಿ ಟೋಪಿ, ಕರಿಯ ಕಂಬಳಿಯ ನಿಲುವಂತೆ, ಕೊರಳಲ್ಲಿ ಕವಡೆ, ಹಣೆಯಲ್ಲಿ ಭಂಡಾರ, ವಿಭೂತಿ, ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಕೊಳಲು, ಸೊಂಟದಲ್ಲಿ ಭಂಡಾರದ ಚೀಲ, ಮತ್ತೊಂದು ಕಡೆ ಆಹಾರದ ತಟ್ಟೆ ಆಕೃತಿಯ ದೋಣಿ ಇದು ಗೊರವಯ್ಯನ ಸ್ವರೂಪ.

ಈ ಬಗೆಯ ಗೊರವರ ಕುಣಿತದ ಅಪ್ರತಿಮ ಕಲಾವಿದ ಗೂಳ್ಯದ ಮಹಲಿಂಗಯ್ಯ ಒಬ್ಬರು. ಮಪಾಲಿಂಗಯ್ಯ ಹುಟ್ಟಿದ್ದು ೧೯೪೦ರಲ್ಲಿ. ತಂದೆ ಕೆಂಚಪ್ಪ, ತಾಯಿ ಓಬಮ್ಮ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಕೆಂಚಪ್ಪನವರಿಗೆ ಮೂವರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ರೈತಾಪಿ ಬದುಕು, ಕೂಲಿ ಜೀವನ ಇವರ ಪರಂಪರಾಗತ ಬದುಕು.

ಮಹಾಲಿಂಗಪ್ಪ ಗೊರವರ ಪದ ಹಾಡುವುದನ್ನು ತಾತ ದೊಡ್ಡಯ್ಯನವರಿಂದ ಕಲಿತರು. ಗೊರವರ ದೊಡ್ಡಯ್ಯ ಎಂಬ ಹೆಸರಲ್ಲಿ ಪ್ರಸಿದ್ಧರಾಗಿದ್ದ, ದೊಡ್ಡಯ್ಯ ಧರ್ಮಪುರದ ಸಮೀಪದ ಸುಳ್ಯಗ್ರಾಮದ ಮೈಲಾರದೇವರ ಪೂಜಾರಿಕೆಯನ್ನು ಮಾಡುತ್ತಿದ್ದರು. ಪೂಜಾರಿಕೆಯ ಗೌರವದಿಂದಾಗಿ ದಾವಣಗೆರೆ, ಬೆಂಗಳೂರು, ಚಿತ್ರದುರ್ಗ, ತುಮಕೂರು, ಕೋಲಾರ, ಶಿವಮೊಗ್ಗ ಜಿಲ್ಲೆಗಳಲ್ಲಿ ಧಾರ್ಮಿಕ ಆರಾಧನೆ, ಗೊರವರ ಕುಣಿತ, ಮೈಲಾರಲಿಂಗನ ಕಾವ್ಯ ಹಾಡುವುದು ಪೂಜಾರಿ ದೊಡ್ಡಯ್ಯನವರ

ಕಾಯಕವಾಗಿತ್ತು. ಈ ಗೊರವಪ್ಪಜ್ಜನಿಂದ ಶಾಸ್ತ್ರೀಯವಾಗಿ ಹಾಡು, ಕುಣಿತವನ್ನು ಕಲಿತವರು ಮಹಾಲಿಂಗಪ್ಪ.

ಮಹಾಲಿಂಗಪ್ಪ ತಮ್ಮ ೧೧ನೇ ವಯಸ್ಸಿನಲ್ಲಿಯೇ ಗೊರವದೀಕ್ಷೆ ಪಡೆದರು. ೨೦ನೇ ವಯಸ್ಸಿನಲ್ಲಿ ಕೆಂಚಮ್ಮ ಎಂಬುವರೊಂದಿಗೆ ವಿವಾಹವಾದರು. ಆದರೆ ಮಹಾಲಿಂಗಪ್ಪ ದಂಪತಿಗಳಿಗೆ ಮಕ್ಕಳಿಲ್ಲ, ಹೆಂಡತಿ ಕೂಲಿ ಕಾಯಕದಲ್ಲಿ ತೊಡಗಿದರೆ ಗಂಡ ಗೊರವರ ಕಲೆ ಪ್ರಸಾರದಲ್ಲಿ ತೊಡಗಿದ್ದಾರೆ. ಗೂಳ್ಯದ ಜ್ಯೋತಿಲಿಂಗಪ್ಪ, ಕರಿಯಾಲಪ್ಪ ಸೇರಿದಂತೆ ಹತ್ತು ಜನರ ಗೊರವರ ಕಲಾತಂಡವೊಂದನ್ನು ಕಳೆದ ೪೦ ವರ್ಷಗಳಿಂದ ನಡೆಸುತ್ತಾ ಬಂದಿದ್ದಾರೆ. ಮೊದಮೊದಲು ಮೈಲಾರಲಿಂಗಸ್ವಾಮಿ ಉತ್ಸವ, ದೇವಾಲಯ ಆರಂಭ, ಕಳಸ ಪ್ರತಿಷ್ಠಾಪನೆ, ದೋಣಿಸೇವೆ, ಸರಪಣಿ ಪವಾಡ, ಗೊರವಯ್ಯನ ದೀಕ್ಷೆ ಇವುಗಳಲ್ಲಿ ಮಾತ್ರ ಈ ತಂಡ ಭಾಗವಹಿಸುತ್ತಿತ್ತು. ಆದರೆ ಧಾರ್ಮಿಕ ಸಮಾರಂಭದ ಹೊರಗೆ ಶುದ್ಧ ಸಾಂಸ್ಕೃತಿಕ ಸಮಾರಂಭಗಳಲ್ಲಿ ಕಾರ್ಯಕ್ರಮ ನೀಡುತ್ತಿರುವುದು ೨೦೦೦ ರಿಂದೀಚೆಗೆ. ಪಿ. ಆರ್. ತಿಪ್ಪೇಸ್ವಾಮಿ ಅವರು ಈ ಕಲಾವಿದರನ್ನು ಸಂಘಟಿಸಿ, ಮೈಸೂರಿನ ದಸರಾ ಉತ್ಸವದಲ್ಲಿ ಕಲಾಪ್ರದರ್ಶನಕ್ಕೆ ಸಂಪರ್ಕ ಕಲ್ಪಿಸಿದರು. ನಂತರ ೨೦೦೩ರಲ್ಲಿ ಚಿತ್ರದುರ್ಗದಲ್ಲಿ ನಡೆದ ದುರ್ಗದ ಉತ್ಸವದಲ್ಲಿ ಮಹಾಲಿಂಗಪ್ಪ ಮತ್ತು ತಂಡ ಕಲಾಪ್ರದರ್ಶನ ನೀಡಿದರು. ೨೦೦೩ರಲ್ಲಿ ಹರ್ತಿಕೋಟೆಯಲ್ಲಿ ಜಾನಪದ ಅಕಾಡೆಮಿ ಏರ್ಪಡಿಸಿದ್ದ ಜಾನಪದ ಉತ್ಸವದಲ್ಲಿ ಈ ತಂಡ ಭಾಗವಹಿಸಿತ್ತು. ಪಾವಗಡ, ಪರಶುರಾಂಪುರಗಳಲ್ಲಿ ನಡೆದ ಗಡಿನಾಡ ಜಾನಪದ ಸಂಸ್ಕೃತಿ ಉತ್ಸವಗಳಲ್ಲಿ ಈ ತಂಡ ಭಾಗವಹಿಸಿತ್ತು.

ಶಾಲೆಯ ಸಂಸ್ಕೃತಿಯೇ ತಿಳಿಯದ ಮಹಾಲಿಂಗಪ್ಪನೂ ಸೇರಿದಂತೆ ಇವರ ಕುಟುಂಬ ಮೂಲದವರ್‍ಯಾರೂ ವಿದ್ಯೆ ಕಲಿತವರಲ್ಲ. ಆದರೆ ಮೈಲಾರಲಿಂಗನ ಪದವನ್ನು ಕಾವ್ಯದ ಸ್ವರೂಪದಲ್ಲಿ ಹಾಡುವುದು ಈ ಕುಟುಂಬದ ವಿಶೇಷವಾಗಿದೆ. ಹೆಂಡತಿ ಕೆಂಚಮ್ಮನೂ ಜನಪದ ಹಾಡುಗಾರ್ತಿ. ಗೌರಸಂದ್ರದ ಮಾರೆಮ್ಮನ ಪದ, ಕುಟ್ಟುವ, ಬೀಸುವ ಪದ ಹಾಡುವುದು ಈಕೆಯ ವಿಶೇಷವಾಗಿದೆ.

ಮಹಾಲಿಂಗಯ್ಯ,<br>
ಗೊರವರ ಕಲಾವಿದ,<br>
ಗೂಳ್ಯ ಹಿರಿಯೂರು ತಾಲೂಕು.

# ಗಾದೀರಯ್ಯ

ಗಾದೀರಯ್ಯ ಉತ್ತಮ ಯಕ್ಷಗಾನ ಕಲಾವಿದರು. ಹುಟ್ಟಿದ್ದು ೨೯-೮-೧೯೩೭ ರಲ್ಲಿ ಚಳ್ಳಕೆರೆ ತಾಲ್ಲೂಕು ಕಾಲುವೆಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ (ಬೇಡ) ಜನಾಂಗಕ್ಕೆ ಸೇರಿದ ಗಾದೀರಯ್ಯ ಅವರಿಗೆ ಗಾಂಧೀಜಿಯ ಸಂಪರ್ಕದ ಬಗೆಗೂ ಹೇಳುತ್ತಾರೆ. ಸ್ವಾತಂತ್ರ್ಯ ಚಳುವಳಿ ಅಲ್ಪಸ್ವಲ್ಪ ಪರಿಚಯವಿದೆ. ತಮ್ಮ ಪರಿಸರದಲ್ಲಿ ಕೋಲಾಟ, ಪಾಳೆಯಗಾರರ ಕುಣಿತ, ಯಕ್ಷಗಾನ ಇವು ನಿತ್ಯ ಪ್ರಸಾರವಾಗುತ್ತಿದ್ದ ಜನಪದ ಕಲೆಗಳು. ಈ ಕಲೆಯ ಒಡನಾಡಿಯಾಗಿ ಬೆಳೆದ ಗಾದೀರಯ್ಯ ಮೊದಲು ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರು. ಪರಂಪರಾಗತವಾಗಿ ಬಂದ ಕೋಲಾಟ ಇವರನ್ನು ಆಕರ್ಷಿಸಿತು. ಇದರಲ್ಲಿ ಹಲವು ವೈವಿಧ್ಯತೆ ತರಲು ಪ್ರಯತ್ನಿಸಿದರು. ಸಂಗೀತಕ್ಕೆ ವಿಶೇಷ ಗಮನ ನೀಡಿ ಹಾರ್ಮೋನಿಯಂ ಕಲಿತರು. ಇದರಿಂದ ಬಯಲುಕತೆ, ನಾಟಕಗಳಿಗೆ ವಾದ್ಯಕಾರರಾಗಿ ಆರಂಭದಲ್ಲಿ ತೊಡಗಿಸಿಕೊಂಡರು. ಇದರಿಂದಾಗಿ ಹಾಡುಗಳ ಮಟ್ಟುಗಳನ್ನು ಕಂದ, ಉಡಸ್ ಮಟ್ಟುಗಳನ್ನು ಅಭ್ಯಾಸ ಮಾಡತೊಡಗಿ ನಂತರ ಭಾಗವತರಾಗಿ ರಂಗಕ್ಕೇರಿದರು.

ಕರಿಭಂಟ, ಲವಕುಶರ ಕತೆ, ವೀರ ಅಭಿಮನ್ಯು, ದುಶ್ಯಾಸನನ ಕತೆ, ವಿರಾಟಪರ್ವ ಇವರು ಕಲಿಸಿರುವ ಯಕ್ಷಗಾನ ಪ್ರಯೋಗಗಳು. ಚಳ್ಳಕೆರೆ, ಪರಶುರಾಮಪುರ, ಜಾಜೂರು, ಕಾಟಪ್ಪನಹಟ್ಟಿಗಳಲ್ಲಿ ಮೂಡಲಪಾಯ ಯಕ್ಷಗಾನ ಕಲಿಸುತ್ತಾ ಬಂದರು. ವಿವಿಧ ಸಾಂಸ್ಕೃತಿಕ ಸಂದರ್ಭ, ಬೇಸಿಗೆಯ ಕಾಲ, ಧಾರ್ಮಿಕ ಹಬ್ಬ, ರಥೋತ್ಸವ, ಜಾತ್ರಾ ಸಂದರ್ಭಗಳಲ್ಲಿ ಗ್ರಾಮ ಸಹಜ ಕಲಾ ಪ್ರದರ್ಶನದ ವ್ಯವಸ್ಥೆ ಇವರ ವೈಶಿಷ್ಟ್ಯವಾಗಿದೆ. ಇಲ್ಲೆಲ್ಲಾ ಆಸಕ್ತಿಗೆ ಅನುಗುಣವಾಗಿ ಯಕ್ಷಗಾನ ಕಲಿಸುತ್ತಾ ಬಂದರು. ಚಳ್ಳಕೆರೆ ಹಾಗೂ ಕಾಟಪ್ಪನಹಟ್ಟಿ, ಜಾಜೂರು ಗ್ರಾಮಗಳಲ್ಲಿ ಯಕ್ಷಗಾನ ಕಲಾವಿದರ ತಂಡಗಳನ್ನೊಳಗೊಂಡ

ನಾಟಕ ಕಲಾ ಸಂಘವನ್ನು ಆರಂಭಿಸಿದರು. ಕಾಟಪ್ಪನಹಟ್ಟಿಯ ಕಲಾವೇದಿಕೆಯಲ್ಲಿ ೩೬೦ ಕಲಾವಿದರು ಪರಸ್ಪರ ಕಲಾಸಂಘಟನೆಯಲ್ಲಿ ತೊಡಗಿಸಿಕೊಂಡಿರುವುದು ಇವರ ಹೆಗ್ಗಳಿಕೆಯಾಗಿದೆ. ಜೊತೆಗೆ ಬುಡಕಟ್ಟು ಸಾಂಸ್ಕೃತಿಕ ವೀರರನ್ನು ಕುರಿತು ಜಗಳೂರು ಪಾಪನಾಯಕಸ್ವಾಮಿ, ಗಾದಿರಿ ಪಾಲನಾಯಕ ಈ ಸಂಬಂದಿ ಯಕ್ಷಗಾನವನ್ನು ರಚಿಸಿ ಪ್ರದರ್ಶಿಸಿರುವುದು ಇವರ ವಿಶೇಷತೆ.

ತಮ್ಮ ೧೬ನೇ ವಯಸ್ಸಿನಿಂದ ಆರಂಭಿಸಿ, ಈ ತನಕ ಸದಾ ಕಲಾರಾಧಕರಾಗಿಯೇ ಉಳಿದಿರುವ ಗಾದೀರಯ್ಯನವರಿಗೆ ಚಿತ್ರದುರ್ಗ ಜಿಲ್ಲಾಡಳಿತ (೨೦೦೦) ಸತ್ಕರಿಸಿದೆ. ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಗೌರವಿಸಿದೆ.

ಚಿತ್ರದುರ್ಗ ಜಿಲ್ಲೆಯ ಸಾಣೆಹಳ್ಳಿಯಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ರಂಗೋತ್ಸವದಲ್ಲಿ ಇವರ ಗಾದರಿ ಪಾಲನಾಯಕ ಯಕ್ಷಗಾನ ಪ್ರದರ್ಶನವಾಗಿ ಹಾಗೂ ಇಲ್ಲಿ ಸನ್ಮಾನಕ್ಕೆ ಒಳಗಾಗಿದ್ದಾರೆ.

ತಮ್ಮ ೧೬ನೇ ವಯಸ್ಸಿನಿಂದ ೭೦ನೇ ವಯಸ್ಸಿನ ತನಕ ರಂಗ ಚಟುವಟಿಕೆ, ಜನಪದ ಸಂಗೀತ ಕ್ಷೇತ್ರದಲ್ಲಿ ಸದಾ ಜಾಗರೂಕರಾಗಿದ್ದ ಗಾದೀರಯ್ಯ ಇಂದು ವಯಸ್ಸು ಅನಾರೋಗ್ಯ ಆರ್ಥಿಕ ಅಸ್ಥಿರತೆಗಳಿಂದ ಜರ್ಝರಿತರಾಗಿದ್ದಾರೆ. ಸರ್ಕಾರದ ಸಹಾಯಕ್ಕಾಗಿ ಕೈ ಚಾಚುವುದು ಅನಿವಾರ್ಯ ಎಂದೇ ಹೇಳುವುದು ಈ ಕಲಾವಿದನ ಗೌರವಕ್ಕೆ ಕುಂದಾದರೂ ಅನಿವಾರ್ಯವೂ ಹೌದು. ಐದನೇ ತರಗತಿಯವರೆಗೆ ವಿದ್ಯಾಭ್ಯಾಸ. ಯಕ್ಷಗಾನ ಗುರು ಕಾಲುವೆಹಳ್ಳಿ ಪೋರಣ್ಣಾಚಾರ್. ರಾಜಕೀಯದಲ್ಲೂ ಆಸಕ್ತಿ. ಹತ್ತು ಜನ ಮಕ್ಕಳು. ಮೂವತ್ತೆರಡು ಮೊಮ್ಮಕ್ಕಳು, ಮರಿಮಕ್ಕಳನ್ನು ಹೊಂದಿರುವ ಗಾದೀರಣ್ಣ, ರಾಜಕಾರಣದ ಮಧ್ಯೆಯೂ ಪಂಡರೀಭಜನೆ, ಕೃಷ್ಣಲೀಲೆ ಭಜನಾವಳಿಯುನ್ನು ಇಂದಿಗೂ ಮುಂದುವರಿಸುತ್ತಿರುವುದು ಇವರ ವಿಶೇಷವಾಗಿದೆ.

**ಗಾದೀರಣ್ಣ,**
**ಕಾಲುವೆಹಳ್ಳಿ,**
**ಯಾದಲಗಟ್ಟೆ ಅಂಚೆ, ಚಳ್ಳಕೆರೆ ತಾಲೂಕು.**

## ಕೆಂಚಮ್ಮ

ಕೆಂಚಮ್ಮ ಕರ್ನಾಟಕಾಂಧ್ರ ಈ ಎರಡೂ ರಾಜ್ಯಗಳ ಗಡಿ ಗ್ರಾಮವಾದ ಪಗಲಬಂಡೆ ಗ್ರಾಮದವರು. ತೆಲುಗು, ಕನ್ನಡ ಸಮ್ಮಿಶ್ರ ನೆಲದಲ್ಲಿ ಹಾಡು, ಗೀತೆಗಳ ಮೂಲಕ ಎರಡೂ ಸಂಸ್ಕೃತಿಯನ್ನು ಬೆಸುಗೆಯಾಗಿ ಕಾರ್ಯ ನಿರ್ವಹಿಸುತ್ತಾ, ೮೦ ವರ್ಷ ಸವೆಸಿರುವುದು ಈ ಹಿರಿಯ ಕಲಾವಿದೆಯ ವಿಶೇಷವಾಗಿದೆ. ಚಳ್ಳಕೆರೆ ತಾಲ್ಲೂಕು ಕಲಮರಹಳ್ಳಿಯ ಚಿಕ್ಕೀರಪ್ಪ–ತಿಪ್ಪಮ್ಮ ಅವರ ಮಗಳಾಗಿ ೧೯೨೪ರಲ್ಲಿ ಜನಿಸಿದ ಕೆಂಚಮ್ಮ, ಹಾಡು ಕಲಿತದ್ದು ತನ್ನೂರ ಎತ್ತಪ್ಪನವರ ಮೂಲಕ. ಆರಂಭದಲ್ಲಿ ಕುರಿಗೆ ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಹಾಡು ಕಲಿತರು. ಮುಂದೆ ಪಗಲಬಂಡೆಯ ಕುರುಬರ ಜುಂಜಪ್ಪ ಎಂಬುವರೊಂದಿಗೆ ವಿವಾಹ ನಡೆಯಿತು. ವ್ಯವಸಾಯ, ಕುರಿ ಮೇಯಿಸುವುದು, ಕಂಬಳಿ ನೇಯ್ಗೆ ಇವರ ಪ್ರಧಾನ ಕಸುಬು. ಕೆಂಚಮ್ಮನಿಗೆ ಒಬ್ಬಳೇ ಮಗಳು ಲಕ್ಷ್ಮಮ್ಮ. ಈಕೆಯೂ ಉತ್ತಮ ಹಾಡುಗಾರ್ತಿ. ತಾಯಿ ಮಗಳು ಸೇರಿದವರೆಂದರೆ ಅಲ್ಲೊಂದು ಸಂಗೀತ ಶಾಲೆ ತೆರೆದಂತಾಗುತ್ತದೆ. ಜನಗಳು ಕುತೂಹಲದಿಂದ ಕೇಳುತ್ತಾರೆ. ಚಳ್ಳಿಕೆರೆ, ಹಿರಿಯೂರು, ಕಲ್ಯಾಣದುರ್ಗ, ಮಡಕಶಿರಾ, ಪರಶುರಾಮಪುರ, ಹಿಂದೂಪುರ, ಅನಂತಪುರಗಳಲ್ಲಿ ಆಹ್ವಾನಿತ ಕಲಾವಿದೆಯಾಗಿ ಮದುವೆ, ದೇವರ ಉತ್ಸವಗಳಲ್ಲಿ ಭಾಗವಹಿಸುತ್ತಾ ತಾಯಿ–ಮಗಳು ಕೂಡಿ ಹಾಡುವುದು ಇವರ ವಿಶೇಷ. ಉತ್ತರಾದೇವಿ ಪುರಾಣ, ಗೌರಸಂದ್ರದ ಮಾರಮ್ಮ, ಚಿತ್ರದೇವರು, ಬನಶಂಕರಮ್ಮ, ಗುಂಟನೂರು ಕೆಂಚಮ್ಮ, ದ್ಯಾಮಲಾಂಬ, ತೊರೆ ಸಾಲಮ್ಮ, ಬೀರೇದೇವರು, ಗುರು ರೇವಣ್ಣರ ಕತೆ ಮೊದಲಾದ ಖಂಡಕಾವ್ಯಗಳನ್ನು ಸೊಗಸಾಗಿ ಹಾಡುತ್ತಾರೆ. ವೀರಕಾವ್ಯಗಳನ್ನು ಕಥನ ಗೀತೆಗಳಾಗಿ ಹಾಡುವುದರೊಂದಿಗೆ ಕೋಲುಪದದ ರೂಪದಲ್ಲಿಯೂ ಹಾಡುವುದರ ಜೊತೆಗೆ ಮದುವೆ ಸಂದರ್ಭದ ಪೂಜಾಕಾರ್ಯದಲ್ಲೂ ಆಯಾಯಾ ಸಂದರ್ಭಗಳಿಗೆ ತಕ್ಕಂತೆ ವಸ್ತುಕವಾಗಿ ಪದಕಟ್ಟಿ ಅಥವಾ

ಮೂಲ ಸ್ವರೂಪದಲ್ಲಿ ಮಾರ್ಪಡಿಸಿಕೊಂಡು ಕಾವ್ಯಮಾಡುವುದು ಇವರ ವಿಶೇಷವಾಗಿದೆ. ಚಳ್ಳಕೆರೆಗೆ ಸಮೀಪದ ನಾಯಕನಹಟ್ಟಿ ತಿಪ್ಪೇಸ್ವಾಮಿ ಮೇಲೆ ಇರುವ ಕಾವ್ಯಗಳನ್ನು ಜಾತ್ರೆಯ ಕಾಲದಲ್ಲಿ ನಾಯಕನಹಟ್ಟಿಗೆ ಹೋಗಿ ಜಾತ್ರೆಯಲ್ಲಿ ಹಾಡಿ ಬರುವುದು ಈ ಕಲಾವಿದೆಯ ವಿಶೇಷವಾಗಿದೆ. ಹೀಗೆ ಕಳೆದ ೫೦ ವರ್ಷಗಳಿಂದಲೂ ಹಾಡುವ ಸಂಪ್ರದಾಯವನ್ನು ಒಂದು ವ್ರತವಾಗಿ ಸ್ವೀಕರಿಸಿರುವುದು ವಿಶೇಷವಾಗಿದೆ. ಬರಗಾಲ ಬಂದು ಊರಿಗೆ ಊರೇ ಗುಳೆಹೋದರೂ ನಾಯ್ಕನಹಟ್ಟಿ ತಿಪ್ಪನ ಕೃಪೆ, ಅಮ್ಮ ಬನಶಂಕರಿಯ ದಯೆಯಿಂದ ೭೦ ವರ್ಷಗಳಿಂದಲೂ ಊರುಬಿಟ್ಟಿಲ್ಲ. ಅನ್ನ ನೀರಿಗೆ ತೊಂದರೆಯಾಗಿಲ್ಲ ಎಂದು ಖಚಿತವಾಗಿ ಹೇಳುವ ಕೆಂಚಮ್ಮ ಹಾಡುವುದು ಈ ಇಳಿವಯಸ್ಸಿನಲ್ಲೂ ಇಷ್ಟವಾದ ಕೆಲಸ. ೮೦ ವರ್ಷ ಕಳೆದರೂ ಬತ್ತದ ಉತ್ಸಾಹ.

ಕೆಂಚಮ್ಮ,<br>ಬನಶಂಕರಮ್ಮ ದೇವಾಲಯ, ಪಗಲಬಂಡೆ,<br>ಚಳ್ಳಕೆರೆ ತಾಲೂಕು.

## ಎತ್ತಪ್ಪ

ಎತ್ತಪ್ಪನವರು ಜನಪದ ಕಥನ ಗೀತೆಗಳ ಪ್ರಸಾರ ಸಾಮಗ್ರಿಯಂತಿದ್ದರು. ಒಂದು ನೂರು ವರ್ಷ ಬದುಕಿ, ಅಷ್ಟು ವರ್ಷವೂ ಕುರಿ ಮೇಯಿಸುತ್ತಲೇ ಕಳೆದದ್ದು ವಿಶೇಷ. ಕಾಡುಗೊಲ್ಲರ ಸಾಂಸ್ಕೃತಿಕ ವೀರರೆಲ್ಲರ ಬಗೆಗೆ ಅಧಿಕೃತವಾಗಿ ಕಾವ್ಯ ಹಾಡುತ್ತಾ ಕಥೆ ಮಾಡುತ್ತಾ, ಗಣೆವಾದ್ಯ ನುಡಿಸುತ್ತಾ ದಮಡಿ, ತಮಟೆ ಬಾರಿಸುತ್ತಾ ಲಾವಣಿಕಾರರಾಗಿ ಚಳ್ಳಕೆರೆ ಸುತ್ತಿನಲ್ಲಿ ಅಪಾರ ಖ್ಯಾತನಾಮರಾಗಿದ್ದವರು.

ಚಳ್ಳಕೆರೆ ತಾಲ್ಲೂಕು ಕಲಮರಹಳ್ಳಿಯಲ್ಲಿ ೧೯೦೦ರಲ್ಲಿ ಜನಿಸಿದ ಉತ್ತಪ್ಪ ಓದಿದವರಲ್ಲ. ಊರಗೌಡರು. ಇವರ ಮಾತೆಂದರೆ ಅಂತಿಮವೆಂದು ಒಪ್ಪಿಕೊಂಡುಬಿಡುತ್ತಿದ್ದರು. ನಡೆ ಶುದ್ಧ, ನುಡಿ ಶುದ್ಧ. ಜೀವನ ಕ್ರಮದಿಂದ ಜುಂಜಪ್ಪನ ಅಪರಾವತಾರವೆಂಬಂತೆ ಬದುಕಿ ಹೋದರು. ಇವರ ಐದು ಜನ ಸೋದರರೂ ಒಟ್ಟಿಗೆ ಬಾಳಿದವರು. ಕೊನೆಯ ತಮ್ಮನ ಮಗ ಕಲಮರಹಳ್ಳಿ ಮಲ್ಲಿಕಾರ್ಜುನ ಜನಪದ ಸಂಗ್ರಾಹಕ, ಸಾಹಿತಿ, ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಇವರ ಹಾಡುಗಳನ್ನು ಸಂಗ್ರಹಿಸಿದ್ದಾರೆ.

ಕರಾಕೃ, ಜೀಶಂಪ ಕಲಮರಹಳ್ಳಿ ಎತ್ತಪ್ಪನವರ ಹಾಡುಗಳನ್ನು ಸಂಗ್ರಹಿಸಿದ ಮೊದಲಿಗರು. ಮೊದಲ ಕಲಮರಹಳ್ಳಿಗೆ ಬಂದು ಕಾವ್ಯ ಸಂಗ್ರಹಿಸಿದರು. 'ನಿಮ್ಮ ಹಾಡಿನ ರಾಶಿ ಮುಗಿದಿಲ್ಲ, ಮೈಸೂರಿಗೆ ಬನ್ನಿ' ಎಂದು ಎಲ್. ಕೃಷ್ಣಪ್ಪ ಅವರೊಂದಿಗೆ ಮೈಸೂರಿಗೆ ಕರೆಸಿಕೊಂಡು ಒಂದು ವಾರಗಳ ಕಾಲ ಇವರ ಕಥನ ಗೀತೆ, ಕಾಡುಗೊಲ್ಲರ ಕಾವ್ಯ, ಗಣೆಯವರ ಕಾವ್ಯ ಮುಂತಾದ ಹೆಸರಲ್ಲಿ ಜಾನಪದ ಗೀತೆಗಳನ್ನು ಸಂಗ್ರಹಿಸಿದರು. ಪಿ.ಆರ್.ಟಿ. ಅವರ ರೇಖಾಚಿತ್ರಗಳೊಂದಿಗೆ ಇವರ ಹೆಸರಲ್ಲೇ ಗೀತೆಗಳು ಪ್ರಕಟವಾಗಿವೆ. ವೇಣುಕಲ್ಲುಬೆಟ್ಟ ಇದು ಗೊಲ್ಲರ ಪವಿತ್ರ ಸ್ಥಳ. ಸಾಂಸ್ಕೃತಿಕ ವೀರ ಎತ್ತಪ್ಪನ ನೆಲೆ.

ವರ್ಷಕ್ಕೊಮ್ಮೆ ದೊಡ್ಡ ಜಾತ್ರೆಯೂ ನಡೆಯುತ್ತದೆ. ಈ ವೇಣುಕಲ್ಲುದುರ್ಗದ ಬಗೆಗೆ ಸಮಗ್ರ ಗೀತೆಗಳನ್ನು ಹಾಡಿರುವ ಕಲಾವಿದರು ಕಲಮರಹಳ್ಳಿ ಎತ್ತಪ್ಪನವರು.

ಚಳ್ಳಕೆರೆ ತಾಲೂಕಿನ ಕರಡೇರಗೊಲ್ಲರ ಕಟ್ಟೆಮನೆಯ ಯಜಮಾನರಾಗಿ, ನ್ಯಾಯ ತೀರ್ಮಾನ, ಧಾರ್ಮಿಕ ವಿಧಿಗಳ ನಿಖರಕಾರರಾಗಿಯೂ, ಇವರ ಕೊಡುಗೆ ಅಪಾರವಾದುದು. ಹಿರಿಯೂರು, ಚಳ್ಳಕೆರೆ, ಸಿರಾ, ಮಧುಗಿರಿ, ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕುಗಳ ಕಾಡುಗೊಲ್ಲರ ಹಿರೀಕನಾಗಿ, ಯಜಮಾನನಾಗಿ, ಶುದ್ಧವಾಗಿ ಬಾಳಿದ, ಈ ಅಜ್ಜ ಊರಿಗೆ ನ್ಯಾಯ, ನಿಷ್ಪತೆ, ಸತ್ಯ ತಂದುಕೊಟ್ಟ ಗೌರವಾನ್ವಿತ ಯಜಮಾನ ಎಂದು ಅವರು ದಿವಂಗತತೆಯ ನಂತರವೂ ನೆನೆಯುವುದು ಈ ಕಲಾವಿದನ ವಿಶೇಷ.

ಕುರಿಮಂದೆ ಕಾಯುವುದಕ್ಕೆ ಉಪಯೋಗವಾಗುತ್ತೆಂದು, ಜಾತಿ-ವರ್ಗ ಅರಿಯದೆ ನೂರಕ್ಕೂ ಹೆಚ್ಚು ಜನರಿಗೆ ಗಣೆ ಕಲೆಯನ್ನು ಕಲಿಸಿರುವುದು ಇವರ ವಿಶೇಷ. ಚಿತ್ರಲಿಂಗ ಕಾವ್ಯ, ಕಾಟಂದೇವರ ಕಾವ್ಯ, ಎತ್ತಪ್ಪನ ಕಾವ್ಯ ಕಥೆಗಳನ್ನು ಇವರಿಂದ ಜೀಶಂಪ ಸಂಗ್ರಹಿಸಿದ್ದಾರೆ.

ಕಥೆ ಹೇಳುವುದು, ಸಂಕೀರ್ಣ ಕಥೆಗಳ ವಕ್ತೃವಾಗಿ ರಾತ್ರಿಯೆಲ್ಲ ಒಂದೇ ಕಥೆ ಮಾಡುತ್ತಿದ್ದರು. ಇವರಿಂದ ಹಾಡುಗಳನ್ನು ಕಲಿತ ಕಲಮರಹಳ್ಳಿ ಈರಬಡಪ್ಪ ಅವರಿಗೆ ರಾಜ್ಯ ಜಾನಪದ ಅಕಾಡೆಮಿ ಬಹುಮಾನವೂ ಪ್ರಾಪ್ತವಾಗಿದೆ. ಆದರೆ ಜಾನಪದ ದಿಗ್ಗಜನಾಗಿ ನೂರು ವರ್ಷ ಹಾಡುತ್ತಲೇ, ಕಾಡುಗೊಲ್ಲರ ಸಾಂಸ್ಕೃತಿಕ ರೂವಾರಿ, ಸಂಸ್ಕೃತಿ ವರ್ಧಕರಾಗಿ ಕಾರ್ಯ ನಿರ್ವಹಿಸಿರುವ ಎತ್ತಪ್ಪ ಸರ್ಕಾರ, ಸಂಘ ಸಂಸ್ಥೆಗಳಿಂದ ಏನನ್ನೂ ಪಡೆಯಲಿಲ್ಲ. ಪರರೆಲ್ಲ ತಮ್ಮ ಜಾತಿಯವರ ಮನೆಗಳಲ್ಲಿ ನೀರನ್ನು ಸ್ವೀಕರಿಸದೆ ಕೈಯಿಂದಲೇ ಅಡಿಗೆ ತಯಾರಿಸಿ, ಬಾಳೆಹಣ್ಣು ಕಡ್ಲೆಪುರಿಯಲ್ಲೇ ರಾತ್ರಿ ಕಳೆದುಬಿಡುತ್ತಿದ್ದ ಅಪೂರ್ವ ಕಲಾವಿದರಿಗೆ ಒಬ್ಬಳೇ ಮಗಳು. ಆಕೆಗೂ ಆರು ಜನ ಮಕ್ಕಳು.

ಕಲಮರಹಳ್ಳಿ ಎತ್ತಪ್ಪ,
ಕಲಮರಹಳ್ಳಿ, ಚಳ್ಳಕೆರೆ ತಾಲೂಕು.

## ಹೆಳವರ ಗೋವಿಂದಪ್ಪ

ಗೋವಿಂದಪ್ಪ ಕಲಮರಹಳ್ಳಿಯವರು. ಸಿದ್ಧೇಶ್ವರನದುರ್ಗ ಎಂಬ ಹೊಸ ಬಡಾವಣೆಯಲ್ಲಿ ವಾಸಿಸುತ್ತಿದ್ದಾರೆ. ಇಡೀ ಕಲಮರಹಳ್ಳಿಯಲ್ಲಿ ಮೂರು ಕುಟುಂಬ ಮಾತ್ರ ಹೆಳವರ ಮನೆಗಳಿದ್ದು ಇವರು ಪುರಾತನ ಕಾಲದಿಂದಲೂ ಇದೇ ಗ್ರಾಮದ ಒಕ್ಕಲುಗಳಾಗಿರುವುದು ವಿಶೇಷ. ಗೋವಿಂದಪ್ಪ ಅವರಿಗೆ ಇದೀಗ ೭೦ ವರ್ಷ ವಯಸ್ಸು. ತಾಯಿ ತಿಮ್ಮಜ್ಜಿಯೂ ಹಿಂದೆಲ್ಲಾ ಬಟ್ಟೆಗಳಿಗೆ ಕಸೂತಿ ಕಾಯಕ ಮಾಡುತ್ತಿದ್ದರು.

ಹೆಳವರು ಒಂದೊಂದರ್ಥದಲ್ಲಿ ವರ್ತಮಾನ, ಇತಿಹಾಸದ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸುತ್ತಾ ಬರುತ್ತಿರುವುದು ಇವರ ಪ್ರಮುಖ ಕಾಯಕ. ಮನೆತನ, ಕಾಯಕ, ದೇವರು ಕೊಟ್ಟು ತಂದದ್ದು, ಅವರ ಮಕ್ಕಳು, ಸಂಬಂಧ, ಬಾಳಿದ ವಿವರ, ಪಡೆದ ಗೌರವ, ಪದವಿ ಪುರಸ್ಕಾರ ಈ ಎಲ್ಲವುಗಳನ್ನು ಒಪ್ಪವಾಗಿ ದಾಖಲು ಮಾಡಿಕೊಂಡು ವರ್ಷಕ್ಕೊಮ್ಮೆ ಅವರ ಭಕ್ತರ ಮನೆಗಳಿಗೆ ಬಂದು ಗಂಟೆಯನ್ನು ಬಾರಿಸುತ್ತಾ, ತಾಳೆಗರಿಯ ಅಥವಾ ಲಿಪಿ ಮಾಡಿಕೊಂಡಿರುವ ದಾಖಲೆಯನ್ನು ತೆಗೆದು ಆ ಕುಲ, ಮನೆತನದ ಕತೆಯನ್ನು ಸವಿವರವಾಗಿ ಸಾರುವುದು ಹೆಳವರ ಪ್ರಮುಖ ಕಾಯಕ. ಇದಕ್ಕೆ ಕಾಣಿಕೆಯಾಗಿ ಪಲ್ಲಗಟ್ಟಲೆ ದವಸ, ಹಸು, ಕುರಿ ಮೇಕೆ ಪಡೆಯುವುದೂ ಇದೆ. ಹೆಳವರಿಗೆ ದಾನ ಕೊಟ್ಟರೆ ಕುಲ ಸಮೃದ್ಧಿಯಾಗುತ್ತದೆಂಬ ನಂಬಿಕೆ ಈ ಒಕ್ಕಲುಗಳಲ್ಲಿ ದಟ್ಟವಾಗಿದೆ. ಇವರು ತಾವು ವಾಸಿಸುವ, ಸಂಬಂಧ ಬೆಳೆಸಿದ ಕುಟುಂಬಗಳನ್ನು ಕಟ್ಟೆಮನೆಯ ಲೆಕ್ಕದಲ್ಲಿ ಹಂಚಿಕೊಂಡು ಇತಿಹಾಸ ಹೇಳುವುದು ಅಥವಾ ಸಾರುವುದು ವಾಡಿಕೆ.

ಕಲಮರಹಳ್ಳಿ ಗೋವಿಂದಪ್ಪ ಈ ಕಾಯಕವನ್ನು ಹಲವು ವರ್ಷಗಳಿಂದಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇವರು ಚಿತ್ರದುರ್ಗ ಜಿಲ್ಲೆಯಾದ್ಯಂತ ಮದುವೆ

ಸಂಬಂಧ ಬೆಳೆದಂತೆಲ್ಲಾ ಹೊರಜಿಲ್ಲೆ, ಸ್ಥಳಗಳಿಗೂ ಹೋಗಿ ಅವರ ಚರಿತ್ರೆಯನ್ನು ಹೇಳುತ್ತಾರೆ.

ಗೋವಿಂದಯ್ಯ ಒಳ್ಳೆಯ ಹಾಡುಗಾರ, ಚಾಮುಂಡಿ ಪುರಾಣವನ್ನು, ದೇವಿ ರೇಣುಕೆ ಎಲ್ಲಮ್ಮನ ಕಥೆಯನ್ನೂ ಮಾಡುತ್ತಾರೆ. ಮೃದಂಗ, ವಾದನ ನುಡಿಸುತ್ತಾ ಚಳ್ಳಕರೆ ಭಾಗದಲ್ಲಿ ಯಕ್ಷಗಾನ ಉಳಿಯಲು ಪ್ರೇರಕರಾದವರು. ಊರಿನ ಪ್ರಮುಖ ಹಬ್ಬ, ಜಾತ್ರೆಗಳಲ್ಲಿ ಕರಿಭಂಟ, ಲವಕುಶರ ಕಾಳಗ, ದೇವಿ ಮಹಾತ್ಮೆ ಯಕ್ಷಗಾನಗಳನ್ನು ಪ್ರದರ್ಶಿಸುತ್ತಾ, ಕಲಮರಹಳ್ಳಿಯನ್ನು ಒಂದು ಅರ್ಥದಲ್ಲಿ ಕಲಾಗ್ರಾಮವನ್ನಾಗಿಸಲು ಪ್ರೇರಕಶಕ್ತಿಯಾಗಿ ಉಳಿದು ಬಂದಿರುವ ಅದ್ಭುತ ಕಲಾ ಸಂಘಟಕ, ಹಾಡುಗಾರ, ಯಕ್ಷಗಾನ ಮೃದಂಗ ವಾದಕರಾಗಿ.

ಬೆಳಗೆರೆ, ಕಲಮರಹಳ್ಳಿ, ಜಡೆಕುಂಟೆ, ಗೌರಸಂದ್ರ, ಗೊರ್ಲತ್ತು ಗ್ರಾಮಗಳಲ್ಲಿ ಇಂದಿಗೂ ಕುಟುಂಬದ ಇತಿಹಾಸ ಸಾರುವ 'ಸಾರುವಯ್ಯ'ನಾಗಿ ಕಾರ್ಯ ನಿರ್ವಹಿಸುತ್ತಿರುವ ಗೋವಿಂದಪ್ಪನವರಿಗೆ, ಬದುಕಿನ ಆಶ್ರಯ ಸಾಲದು. ಒಕ್ಕಲನ್ನು ನಂಬಿ ಬದುಕುವುದೂ ಕಷ್ಟ. ಖುಷಿಯಿಂದ ಕೊಟ್ಟರೂ ಕೊಡಬಹುದು, ಇಲ್ಲದಿದ್ದರೂ ಇರಬಹುದು. ವಯಸ್ಸಾಗಿದೆ. ಮುಂದೇನು ಎಂಬ ಸಂದಿಗ್ಧದಲ್ಲಿ ನಂಬಿದ ಕಾಯಕದಲ್ಲಿ ಉಪವಾಸವಿದ್ದ ದಿನವಿಲ್ಲ ಎನ್ನುವ ಗೋವಿಂದಯ್ಯ ಹಾಡುವುದು ಇತಿಹಾಸ ಕಥನಗಳನ್ನು. ಇವರಿಗೆ ನಾಲ್ವರು ಮಕ್ಕಳು. ಅವರೂ ತಂದೆಯ ಕಸುಬನ್ನು ಮುಂದುವರಿಸಿದ್ದಾರೆ.

**ಹೆಳವರ ಗೋವಿಂದಪ್ಪ,**
**ಕಲಮರಹಳ್ಳಿ, ಸಿದ್ದೇಶ್ವರದುರ್ಗ,**
**ಚಳ್ಳಕೆರೆ ತಾಲೂಕು.**

# ನಿಂಗಜ್ಜಿ

ಛಲವಾದಿ ನಿಂಗಜ್ಜಿ ಚಿತ್ರದುರ್ಗ ಜಿಲ್ಲೆಯ ಅಪೂರ್ವ ಕಥನ ಗೀತೆಗಾರ್ತಿ. ೭೫ ವರ್ಷಗಳನ್ನು ಪೂರೈಸಿದರೂ ಹಾಡುವ ಗೀಳಾಗಲೀ, ಕಂಠ ತೊದಲುವುದಾಗಲೀ ಇಲ್ಲವೇ ಇಲ್ಲ. ಅಸ್ಪೃಶ್ಯರೆಂದು ಮೇಲುಮಟ್ಟಕ್ಕೆ ಕಾಣಿಸಿಕೊಂಡರೂ, ಹೊಸಹಳ್ಳಿಯ ಪ್ರೀತಿಯ ಜಾತ್ಯಾತೀತ ಅಜ್ಜಿ. ಇಲ್ಲಿನ ಕೆಂಚಮ್ಮ ಬೀರಲಿಂಗೇಶ್ವರ ದೇವಾಲಯಗಳ ಹೊಣೆಗಾರಿಕೆ, ದೇವಾಲಯ ಶುದ್ಧಿಯ ಕಾರ್ಯವನ್ನು ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿರುವುದು ಈಕೆಯ ವಿಶೇಷ.

ಛಲವಾದಿ ನಿಂಗಜ್ಜಿಗೆ ಒಬ್ಬಳೇ ಮಗಳು ಶಾರದಮ್ಮ. ಈಕೆಯೂ ಸೊಗಸಾದ ಹಾಡುಗಾರ್ತಿ. ನಿಂಗಮ್ಮ ಪಕ್ಕದ ಕಲಮರಹಳ್ಳಿಯವರು. ಮದುವೆಯಾಗಿ ಹೊಸಹಳ್ಳಿಗೆ ಬಂದರು. ಗಂಡ ಸೊಟ್ಟೀರಪ್ಪ ಉರುಮೆ, ಮುಖವೀಣೆ ಕಲವಿದ. ಇವರಿಗೆ ಆರುಜನ ಗಂಡು ಮಕ್ಕಳು. ಇವರೆಲ್ಲರೂ ವಾದ್ಯ ನುಡಿಸುತ್ತಾರೆ. ಮುಖವೀಣೆ ಕಲಾವಿದರೂ ಹೌದು. ಛಲವಾದಿ ನಿಂಗಮ್ಮ ಮುಖ್ಯವಾಗಿ ಕಥನ ಗೀತೆಗಳನ್ನು ಹಾಡುತ್ತಾರೆ. ತನ್ನ ಪರಿಸರದ ದೇವಾಲಯಗಳ ಸಂಕ್ಷಿಪ್ತ ಇತಿಹಾಸ, ಸ್ಥಳ ಪುರಾಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅದಕ್ಕೊಂದು ಕಥೆ ಕಟ್ಟಿ ಹಾಡುಗಳ ಮೂಲಕ ಒಪ್ಪಿಸುವುದು ಈಕೆಯ ವಿಶೇಷ ಗುಣ. ಹಾಗಾಗಿಯೇ ವರ್ಗ, ವರ್ಣಾತೀತವಾಗಿ ನಿಂಗಜ್ಜಿಯನ್ನು ಎಲ್ಲ ಜನವರ್ಗವೂ ಪ್ರೀತಿಸುತ್ತಾರೆ.

ಹೊಸಹಳ್ಳಿಯು ವೇದಾವತಿ ನದಿಯ ದಂಡೆಯಲ್ಲಿದೆ. ಊರು ಚಿಕ್ಕದಾಗಿದ್ದು ಒಂದು ನೂರು ಮನೆಗಳ ಗ್ರಾಮ. ಇಲ್ಲಿ ಕೆಂಚಮ್ಮ, ರಂಗನಾಥ, ಬೀರೇಶ್ವರ, ಶಾಂತಪ್ಪ ಸ್ವಾಮಿ ಈ ಮೊದಲಾದ ಹಲವು ದೇವಾಲಯಗಳಿವೆ. ಜಾತ್ರೆ, ರಥೋತ್ಸವಗಳು, ಬೇಸಿಗೆ

ದಸರಾ ಕಾಲದಲ್ಲಿ ನಿರಂತರವಾಗಿ ನಡೆಯುತ್ತಿರುತ್ತವೆ. ಇಲ್ಲಿನ ಕೆಂಚಮ್ಮ ದೇವರ ಬಗೆಗೆ ಕಥನ ಗೀತೆಯನ್ನು ಹಾಡುವ ಏಕೈಕ ಕಲಾವಿದೆ ನಿಂಗಮ್ಮ.

ಗುಂಟನೂರಿನಿಂದ ಎಂಟೇ ದಿನಕೆ ಬಂದು
ಎಂಟು ಗೂಡಿನ ದನವ ಹೊಡೆಕೊಂಡು ಕೆಂಚಮ್ಮ
ತೊರೆಸಾಲು ಒಳ್ಳೆಯದೆಂದು ನೆಲೆಗೊಂಡ್ಲು

ಹೀಗೆ ಕೆಂಚಮ್ಮ ತನ್ನ ನೆಲೆಗೊಳ್ಳುವುದು, ಹೊರಗಡೆಯಿಂದ ಬಂದ ಮೂಲನೆಲೆ, ಈ ಎಲ್ಲವುಗಳನ್ನು ಅತ್ಯಂತ ಸೊಗಸಾಗಿ ಹೇಳುತ್ತಾರೆ. ನಿಂಗಜ್ಜಿ, ಗೌರಸಂದ್ರದ ಮಾರೆಮ್ಮ, ಚಿತ್ರದೇವರು, ಬೀರಲಿಂಗೇಶ್ವರ, ಮೈಲಾರಲಿಂಗಪ್ಪ, ಜುಂಜಪ್ಪನ ಮೇಲೆ ಕಥನ ಗೀತೆಗಳನ್ನು ಹಾಡುತ್ತಾರೆ. ನಾಯಕಹಟ್ಟಿ ತಿಪ್ಪೇಸ್ವಾಮಿ, ಮದಕರಿನಾಯಕ ಹಾಗೂ ಮುರುಘಾಮಠದ ಮೇಲೂ ಪದ ಹಾಡುವುದು ಈಕೆಯ ವಿಶೇಷ.

ಗ್ರಾಮೀಣ ಪರಿಸರದ, ಕೃಷಿ ಕಾಯಕದ ಸಹಜ ಹಾಡುಗಳನ್ನು ತಮ್ಮ ೨೦ನೇ ವಯಸ್ಸಿನಿಂದಲೂ ಹಾಡಿಕೊಂಡು ಬಂದ, ನೂರಾರು ಹೆಂಗಸರಿಗೆ ಕಲಿಸಿರುವ ನಿಂಗಜ್ಜಿಗೆ ಸರ್ಕಾರವಾಗಲಿ, ಸಂಘ-ಸಂಸ್ಥೆಯಾಗಲಿ, ಯಾವುದೇ ಗೌರ ತೋರಿಲ್ಲ. ಹಾಗಂತ ಜನರು ಸುಮ್ಮನಿಲ್ಲ. ಹಾಡಿಸುವ ಮೂಲಕ ನಿತ್ಯವೂ ಗೌರವ ತೋರುವುದು ಈಕೆಯ ಬಗೆಗಿನ ಗೌರವಾದರಗಳನ್ನು ಪ್ರಕಟಿಸುತ್ತದೆ.

ಗಂಡುಮಕ್ಕಳೊಂದಿಗೆ ಹೊಸಹಳ್ಳಿಯಲ್ಲಿ ವಾಸಿಸುತ್ತ, ಸುತ್ತಲ ಮದುವೆ, ದೇವರ ಕಾರ್ಯ, ಮದುವೆ ಶಾಸ್ತ್ರಗಳಲ್ಲಿ ಆಹ್ವಾನಿತ ಕಲಾವಿದೆಯಾಗಿ, ಜಾತ್ಯಾತೀತವಾಗಿ ಗೌರವಿಸಲ್ಪಡುವ ನಿಂಗಜ್ಜಿ ಕೋಮು ಸೌಹಾರ್ದತೆಗೆ ಉತ್ತಮ ಮಾದರಿ.

**ನಿಂಗಜ್ಜಿ, ಸೊಟ್ಟೀರಣ್ಣ,**
**ಹೊಸಹಳ್ಳಿ, ಹಿರಿಯೂರು ತಾಲೂಕು.**

## ಮಲ್ಲಪ್ಪ

ಚಿತ್ರದುರ್ಗ ತಾಲ್ಲೂಕಿನ ಕುರುಬರಹಟ್ಟಿಯ ಶ್ರೀ ಮಲ್ಲಪ್ಪ ಈ ಭಾಗದ ಪ್ರಸಿದ್ಧ ಜನಪದ ಕಲಾವಿದರು. ತಂದೆ ಚೆನ್ನಪ್ಪ, ತಾಯಿ ನಿಂಗಮ್ಮ. ಇವರಿಗೆ ಜನಿಸಿದ ಆರು ಜನ ಮಕ್ಕಳಲ್ಲಿ ಮೂವರು ಗಂಡು, ಮೂವರು ಹೆಣ್ಣುಮಕ್ಕಳು. ಮಲ್ಲಪ್ಪ ಮೊದಲನೆಯವರು.

ಚೌಡಿಕೆ ಸಂಪ್ರದಾಯದ ಮನೆತನವಾದುದರಿಂದ ಚೌಡಿಕೆ ವಾದ್ಯ ನುಡಿಸುವುದನ್ನು ತಂದೆ ಚೆನ್ನಪ್ಪನವರಿಂದ ಕಲಿತರು. ಚನ್ನಪ್ಪನವರು ಚೌಡಿಕೆ ಕಲಾವಿದರಲ್ಲದಿದ್ದರೂ ಚೌಡಿಕೆ ಪದ ಹಾಡುವುದು ಇವರಿಗೆ ಸಿದ್ಧಿಸಿತ್ತು. ಜೊತೆಗೆ ಯಕ್ಷಗಾನ ಕಲಾವಿದರು. ಕರಿಬಂಟ, ಕರ್ಣಾರ್ಜುನರ ಕಾಳಗದಲ್ಲಿ ಪಾತ್ರ ಅಭಿನಯ. ರಾಮನ ಪಾತ್ರದಲ್ಲಿ ೨೫ ವರ್ಷಕ್ಕೂ ಹೆಚ್ಚು ಅಭಿನಯಿಸುತ್ತಾ ಬಂದವರು. ಕೋಲಾಟ, ಮೂಡಲಮಣೇವು. ಹರಿಗೆ ಕುಣಿತ ಕಲೆಯಲ್ಲಿಯೂ ಅಪಾರ ಆಸಕ್ತಿ.

ಇವರ ಒಡನಾಟದಲ್ಲಿ ಬೆಳೆದ ಮಲ್ಲಪ್ಪ ತಮ್ಮ ೯ನೇ ವಯಸ್ಸಿನಲ್ಲಿಯೇ ಚೌಡಿಕೆಯ ದೀಕ್ಷೆ ಪಡೆದರು. ಹಾಡುವುದನ್ನು ತಂದೆಯಿಂದ ಕಲಿತರು. ತಂತಿವಾದ್ಯ ವಿಶೇಷ ನೃತ್ಯವನ್ನು ಜಗಳೂರು ತಾಲ್ಲೂಕಿನ ನಿಟ್ಟೂರು ಉಚ್ಚಂಗಮ್ಮ ಅವರಿಂದ ಕಲಿತರು.

ಮಲ್ಲಪ್ಪನವರಿಗೆ ಇದೀಗ ೭೦ ವರ್ಷಗಳ ಪ್ರಾಯ. ತಮ್ಮ ೯ನೇ ವಯಸ್ಸಿನಿಂದ ಇಲ್ಲಿಯತನಕ ೬೦ ವರ್ಷಕ್ಕೂ ಹೆಚ್ಚು ಕಾಲ, ಚೌಡಿಕೆ ಕಲಾವಿದರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಭದ್ರಾವತಿ, ಹೊಸಪೇಟೆ, ಚಿತ್ರದುರ್ಗ ಆಕಾಶವಾಣಿಗಳಲ್ಲಿ ಇವರ ಹಾಡುಗಳು ಪ್ರಸಾರವಾಗಿದೆ. ಮೈಸೂರು ದಸರಾ ಉತ್ಸವ, ಬೆಂಗಳೂರಿನ ಜನಪದ ಜಾತ್ರೆ, ಜಾನಪದ ಅಕಾಡೆಮಿಯ ಕಲಾ ಪ್ರದರ್ಶನಗಳಲ್ಲಿ, ಚಿತ್ರದುರ್ಗದ ಮುರುಘಾಮಠದ

ಉತ್ಸವ, ಚಿತ್ರದುರ್ಗೋತ್ಸವ, ದಾವಣಗೆರೆ ಜಿಲ್ಲಾ ಉತ್ಸವಗಳಲ್ಲಿ ಕಲಾ ಪ್ರದರ್ಶನ ನೀಡಿ ಗೌರವ ಪ್ರಶಸ್ತಿ ಪಡೆದಿರುವುದು ಇವರ ಹೆಚ್ಚುಗಾರಿಕೆ.

ಮಲ್ಲಪ್ಪನವರು ಉತ್ತಮ ಯಕ್ಷಗಾನ ಕಲಾವಿದರೂ ಹೌದು. ಕರಿಬಂಟನ ಕಾಳಗದಲ್ಲಿ ಆರಂಭದಲ್ಲಿ ಬಾಲಕನ ಪಾತ್ರ ನಂತರ ಅರ್ಜುನ ಪಾತ್ರ, ಇಂದ್ರಜಿತ್ ಕಾಳಗದಲ್ಲಿ ರಾಮನ ಪಾತ್ರ, ದುಶ್ಯಾಸನನ ಕತೆಯಲ್ಲಿ ಅರ್ಜುನ, ಪಾಂಡವರ ವನವಾಸದಲ್ಲಿ ಧರ್ಮರಾಯನ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ.

ಹಾಲುಮತ ವರ್ಗಕ್ಕೆ ಸೇರಿದ ಮಲ್ಲಪ್ಪನವರು, ತಮ್ಮ ಕುಲದೈವ ರೇಣುಕೆ ಎಲ್ಲಮ್ಮ, ಉಚ್ಚಂಗಮ್ಮ ಹಾಗೂ ಏಕನಾಥೇಶ್ವರಿಯನ್ನು ಕುರಿತು ಕಾವ್ಯ ಹಾಡುತ್ತಾರೆ. ಜೊತೆಗೆ ರೇವಣಸಿದ್ದ, ಮೈಲಾರಲಿಂಗನ ಕಾವ್ಯವನ್ನು ಹಾಡುತ್ತಾರೆ. ಚೌಡಿಕೆ ಕಲೆಯನ್ನು ಒಂದು ಹವ್ಯಾಸಿ ಕಲೆಯನ್ನಾಗಿಸಿಕೊಂಡು ಸಂಘ ಸಂಸ್ಥೆಗಳ ಸಾಂಸ್ಕೃತಿಕ ಸಮಾರಂಭಗಳಲ್ಲಿ ಭಾಗವಹಿಸುತ್ತಾ ಆಸಕ್ತಿಯಿಂದ ಹಾಡುವ, ಮಧುರ ಕಂಠದ ಗಾಯಕರಾಗಿ ರೂಪುಗೊಂಡಿರುವುದು ಇವರ ವಿಶೇಷ.

ತಮ್ಮ ೭೦ನೇ ವಯಸ್ಸಿನಲ್ಲೂ ರಾತ್ರಿಯಿಡೀ ಕಥೆ ಮಾಡುವ ಮಲ್ಲಪ್ಪ, ಹತ್ತು ಜನ ಶಿಷ್ಯರನ್ನು ತಯಾರಿಸಿದ್ದಾರೆ. ಈಗಿನ ಕಲಾವಿದರಿಗೆ ಕಲೆಯೊಂದಿಗೆ ಆ ಕಲೆಯ ಧಾರ್ಮಿಕ ನಂಬಿಕೆ ಮತ್ತು ಅದರ ನಡಾವಳಿ ಬದುಕಿನಲ್ಲಿ ಬರಬೇಕೆಂದು ಬಯಸುತ್ತಾರೆ. ಯಾವುದೇ ಪ್ರಶಸ್ತಿ, ಸಂಭಾವನೆಗಿಂತ ದೈವಸಂಬಂಧಿ ಚೌಡಿಕೆ ಕಲೆ ಪ್ರಸಾರವಾಗಬೇಕೆಂಬ ಸ್ಪಷ್ಟ ನಂಬಿಕೆ ಇಟ್ಟಿರುವ ಇವರು ತುಂಬು ಬದುಕಿನ ವಿಶಿಷ್ಟ ಕಲಾವಿದ.

ಮಲ್ಲಪ್ಪ,
ಚೌಡಿಕೆ ಕಲಾವಿದ,
ಕುರುಬರಹಟ್ಟಿ, ಚಿತ್ರದುರ್ಗ ತಾಲೂಕು.

## ಪಾರಿಬಾಯಿ

ಚಿತ್ರದುರ್ಗ ಜಿಲ್ಲಾಯ ಲಂಬಾಣಿ ಕಲೆಯ ಉಳಿವಿಗಾಗಿ ಶ್ರಮಿಸುತ್ತಾ ಕಲಾವಿದರ ಸಂಘಟನೆ, ಲಂಬಾಣಿ ಕಲೆಯ ಪ್ರಸಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಪಾರಿಬಾಯಿ, ಸಿರಿಗೆರೆ ಸಮೀಪದ ಮದಕರಿಪುರದವರು. ೬೫ ವರ್ಷ ವಯಸ್ಸಿನ ಈ ಕಲಾವಿದೆ ತಮ್ಮೊಂದಿಗೆ ೧೦-೧೫ ಕಲಾವಿದರನ್ನು ತರಬೇತಿಗೊಳಿಸಿ ತಮ್ಮ ಕುಲಕಲೆಯನ್ನು ಧಾರ್ಮಿಕ, ಸಾಂಸ್ಕೃತಿಕ ಸಭೆ-ಸಮಾರಂಭಗಳಲ್ಲಿ ಪ್ರದರ್ಶಿಸುವುದು ಇವರ ಪ್ರಮುಖ ಕಾಯಕವಾಗಿದೆ. ಇವರಿಗೆ ನಾಲ್ವರು ಮಕ್ಕಳು. ಎರಡು ಹೆಣ್ಣು ಮತ್ತು ಗಂಡು. ಎಲ್ಲರೂ ಅವರ ಪಾಡಿಗೆ ಅವರಿದ್ದು ಅವರ್‍ಯಾರು ನನಗೆ ಭಾರವಾಗಿಲ್ಲ ಎನ್ನುತ್ತಾರೆ. ಈಗ ಈ ಕಲೆಯನ್ನು ಪ್ರಸಾರ ಮಾಡುವುದೊಂದೇ ನನ್ನ ಏಕೈಕ ಉದ್ದೇಶ ಎನ್ನುವುದು ಪಾರಿಬಾಯಿಯ ಧ್ಯೇಯ.

ಪಾರಿಬಾಯಿ ತನ್ನ ೧೦ನೇ ವಯಸ್ಸಿನಲ್ಲಿಯೇ ಲಂಬಾಣಿ ಕಲೆಯ ಬಗೆಗೆ ಆಕರ್ಷಣೆ ಹೊಂದಿದ್ದರು. ತಾಯಿ ಅಜ್ಜಿಯವರಿಂದ ಒಂದಿಷ್ಟು ಹಾಡುವುದು, ಗ್ರಾಮದ ಇತರೆಯವರು ಹಬ್ಬಗಳಲ್ಲಿ ಮಾತ್ರ ನರ್ತಿಸುತ್ತಿದ್ದುದನ್ನು ಕಾಣುತ್ತಿದ್ದರು. ಅಂದು ಈ ಬಗೆಯ ಕುಣಿತ ಸಂಕೋಚಾಗುತ್ತಿತ್ತೆಂದು ಹೇಳುವ ಪಾರಿಬಾಯಿ, ಇಂದು ಇದೊಂದು ದೈವಕಲೆಯೆಂದೂ ಪ್ರದರ್ಶಿಸಿದರೆ ಮನೆತನ, ಗ್ರಾಮಕ್ಕೆ ಒಳಿತಾಗುವುದೆಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಹಾಗಾಗಿಯೇ ತಮ್ಮ ಪೂರ್ಣ ಬದುಕನ್ನು ಕಲೆಯ ಸಂಘಟನೆಗಾಗಿ ಮೀಸಲಿಟ್ಟಿದ್ದಾರೆ.

ಪಾರಿಬಾಯಿ ತಮ್ಮ ೧೦ ಜನ ಕಲಾತಂಡದೊಂದಿಗೆ ಮೈಸೂರಿನ ದಸರಾ ವಸ್ತುಪ್ರದರ್ಶನ, ಕುವೆಂಪು ವಿಶ್ವ ವಿದ್ಯಾಲಯ ಶಂಕರಘಟ್ಟ, ಸಿರಿಗಂಧ, ದೂರದರ್ಶನ

ಕೇಂದ್ರ ಬೆಂಗಳೂರು, ಜನಪದ ಜಾತ್ರೆ, ಲಾಲ್‌ಬಾಗ್ ಇವರು ಪ್ರದರ್ಶನ ನೀಡಿರುವ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳು.

ಚಿತ್ರದುರ್ಗ ಉತ್ಸವ, ಹಂಪಿ ಉತ್ಸವ, ದಾವಣಗೆರೆ ಜಿಲ್ಲಾ ಉತ್ಸವ, ಚಿತ್ರದುರ್ಗದ ಜನಪದ ಕಲಾಮೇಳ, ಹರ್ತಿಕೋಟೆ, ಪರಶುರಾಮಪುರ, ಚಳ್ಳಕೆರೆ, ಸಿರಿಗೆರೆ ಮಠ, ಮುರುಘಾ ಮಠಗಳಲ್ಲಿ ಭಾಗವಹಿಸುತ್ತಿದ್ದಾರೆ. ಪ್ರತಿವರ್ಷವೂ ಆದಿಚುಂಚನಗಿರಿ ಭೈರವನ ಜಾತ್ರಾಕಾಲದ ಜನಪದ ಕಲಾಮೇಳದಲ್ಲಿ ಕಲಾವಿದರಾಗಿ ಭಾಗವಹಿಸುತ್ತಾ ಕಲಾಗೌರವ ಪಡೆಯುತ್ತಿದ್ದಾರೆ.

ಪಾರಿಬಾಯಿ,
ಮದಕರಿಪುರ,
ಸಿರಿಗೆರೆ ಮಾರ್ಗ, ಚಿತ್ರದುರ್ಗ ತಾಲೂಕು.

## ತಿಪ್ಪೇಸ್ವಾಮಿ

ತಿಪ್ಪೇಸ್ವಾಮಿ ಚಳ್ಳಕೆರೆ ತಾಲ್ಲೂಕು ದೇವರಹಟ್ಟಿಯವರು. ನಾಯಕನ ಹಟ್ಟಿ ತಿಪ್ಪೇಸ್ವಾಮಿಯ ಹೆಸರಲ್ಲಿ ಅರ್ಜುನಜೋಗಿ ಕಥೆ ಮಾಡುವುದು ಇವರ ಕಾಯಕ. ತೆಲುಗು ಮನೆಮಾತು. ಚಿತ್ರದುರ್ಗ ಜಿಲ್ಲೆಯ ಗಡಿ ಗ್ರಾಮ ದೇವರಹಟ್ಟಿಯಿಂದ ಆಂಧ್ರದ ಕಲ್ಯಾಣದುರ್ಗ, ಅನಂತಪುರ, ತಿರುಪತಿಯವರೆಗೂ ಕರ್ನಾಟಕದ ನಂಜನಗೂಡು, ಯಡೆಯೂರು, ಆದಿಚುಂಚನಗಿರಿಯವರೆಗೆ ಯಾತ್ರೆ ಹೋಗಿ ಭಿಕ್ಷಾಟನೆ, ಪಶುಪಾಲನೆಯೊಂದಿಗೆ ಜೀವನ ಸಾಗಿಸುವುದು ಈ ಕಿನ್ನರಿಜೋಗಿಯವರ ಸಂಪ್ರದಾಯ. ನಾಯಕನಹಟ್ಟಿ ತಿಪ್ಪೇಸ್ವಾಮಿ ಇವರ ಆರಾಧ್ಯದೈವವಾದರೂ, ಕುಲದೈವ ಆದಿಚುಂಚನಗಿರಿ ಭೈರವ, ಆದಿಚುಂಚನಗಿರಿಗೆ ಇವರನ್ನು ಜೋಗಿ ಬಿಡುವುದು, ಆ ಮೂಲಕ ಬಾಲಕರಿರುವಾಗಲೇ ಕಿವಿಚುಚ್ಚಿ, ಬಂಗಾರದ 'ಕಳಾವರ' ಎಂಬ ಚಿಕ್ಕ ಲಿಂಗ ಆಕೃತಿಯ ಒಡವೆ ಹಾಕುತ್ತಾರೆ. ಇದರಿಂದ ಜೋಗಿ ದೀಕ್ಷೆ ಆಗಿದೆ ಎಂದು ಸುಲಭವಾಗಿ ಗ್ರಹಿಸಬಹುದು.

ಜೋಗಿ ಎಂದ ಕೂಡಲೇ ಅಲಂಕಾರ ಎದ್ದು ಕಾಣುತ್ತದೆ. ತಲೆಯಲ್ಲಿ ಬಣ್ಣಬಣ್ಣದ ಪೇಟ, ಕೋಟು, ಅದರ ಒಳಗೆ ಬಣ್ಣದ ಅಂಗಿ, ಹೆಗಲ ಮೇಲೆ ವಸ್ತ್ರ, ಬಿಗಿದುಟ್ಟ ಕಟ್ಟೆಪಂಚೆಯ ಧೋತ್ರ, ಕೊರಳಲ್ಲಿ ಮೂರ್‍ನಾಲ್ಕು ಮಣಿಸರ, ಕೆಲವೊಮ್ಮೆ ಕಾಲಿಗೂ ಗೆಜ್ಜೆ ಕಟ್ಟಿಕೊಳ್ಳುವ ಸಂದರ್ಭ ಇರುತ್ತದೆ. ಕೈಯಲ್ಲಿ ಕಿನ್ನರಿವಾದ್ಯ, ಇನ್ನೊಂದು ಕೈಯಲ್ಲಿ ಕಿರುಗೆಜ್ಜೆ ಇದು ಕಿನ್ನರಿಜೋಗಿಗಳ ವೇಷಭೂಷಣ. ಡಿಸೆಂಬರ್ ತಿಂಗಳಿಂದ ಮೇವರೆಗೆ ತಮ್ಮ ಹುಟ್ಟೂರುಗಳಿಂದ ಹುಲ್ಲು, ನೀರು, ಆಹಾರ ಹುಡುಕಿಕೊಂಡು ಹೊರಟ ಜೋಗಿಯರು ಕೊನೆಯಲ್ಲಿ ಆದಿಚುಂಚನಗಿರಿಯಲ್ಲಿ ಪೂಜೆ ಸಲ್ಲಿಸಿ ಹಿಂತಿರುಗುವುದು ವಾಡಿಕೆ.

ತಿಪ್ಪೇಸ್ವಾಮಿ ಅವರಿಗೆ ೬೫ ವರ್ಷ ವಯಸ್ಸು, ಓದಿಲ್ಲ. ತಂದೆ ತಿಪ್ಪಯ್ಯನವರೂ ಕಿನ್ನರಿ ಹಾಡುಗಾರರು. ಹಾಗಾಗಿ ದೈವದತ್ತ ಈ ಕಲೆಯನ್ನು ವಂಶಪಾರಂಪರ್ಯವಾಗಿ ಮುಂದುವರಿಸುತ್ತಿರುವುದು ಇವರ ಕಾಯಕವಾಗಿದೆ.

ತಿಪ್ಪೇಸ್ವಾಮಿ, ಅರ್ಜುನ ಜೋಗಿ ಪ್ರಸಂಗ, ಪಾಂಡವರ ವನವಾಸ, ಸುಭದ್ರೆ ವಿವಾಹ, ವೀರ ಅಭಿಮನ್ಯುವಿನ ಕಥೆ, ಗಾಂಧಾರಿ ಗರ್ವಭಂಗ ಈ ಪ್ರಸಂಗಗಳನ್ನು ಕಥನ ರೂಪದಲ್ಲಿ ಹಾಡುತ್ತಾರೆ. ಇದರೊಂದಿಗೆ ನಾಯಕನಹಟ್ಟಿ ತಿಪ್ಪೇಸ್ವಾಮಿ, ಕಥೆಯನ್ನು ಸೊಗಸಾಗಿ ಮಾಡುತ್ತಾರೆ. ಆದಿಚುಂಚನಗಿರಿ ಭೈರವ, ಮಾಳವ್ವನ ಕಲ್ಯಾಣ ಪ್ರಸಂಗ, ಬೇಳೂರು ಕಂಬ ಇಲ್ಲಿನ ಹೊನ್ನಾದೇವಿ ಕಥೆ ಈ ಎಲ್ಲವನ್ನೂ ಮಾಡುತ್ತಾರೆ. ಇವರೊಂದಿಗೆ ಹತ್ತು ಜನ ಸಹ ಕಲಾವಿದರ ತಂಡದೊಂದಿಗೆ ಸಭೆ ಸಮಾರಂಭಗಳಲ್ಲೂ ಹಾಡುವುದು ವಾಡಿಕೆ. ಎಲ್ಲಪ್ಪ ಎಂಬ ೭೦ ವರ್ಷ ವಯಸ್ಸಿನ ಹಿರಿಯ ಕಲಾವಿದರೂ ಈ ತಂಡದಲ್ಲಿದ್ದು ಇವರೂ ಸೊಗಸಾಗಿ ಹಾಡುತ್ತಾರೆ.

ತಿಪ್ಪೇಸ್ವಾಮಿ ಕರ್ನಾಟಕ ಜಾನಪದ ಅಕಾಡೆಮಿ ಏರ್ಪಡಿಸುವ ಚಿತ್ರದುರ್ಗ, ಶಿವಮೊಗ್ಗ, ತುಮಕೂರು ಭಾಗದ ಎಲ್ಲ ಕಾರ್ಯಕ್ರಮ ಕಲಾಮೇಳಗಳಲ್ಲಿ ಭಾಗವಹಿಸಿದ್ದಾರೆ. ಹರ್ತಿಕೋಟೆ (೨೦೦೧), ಪರಶುರಾಮಪುರ (೨೦೦೬), ಚಿತ್ರದುರ್ಗ (೨೦೦೫) ಇಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಜಾನಪದ ಜಾತ್ರೆ ಕಾರ್ಯಕ್ರಮದಲ್ಲೂ ಇವರು ಕಾರ್ಯಕ್ರಮ ಬೆಂಗಳೂರಲ್ಲಿ ನೀಡಿದ್ದಾರೆ.

ಕುವೆಂಪು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಆಹ್ವಾನಿತ, ಸಂಪನ್ಮೂಲ ಕಲಾವಿದರಾಗಿ ಭಾಗವಹಿಸಿ ಸಂಶೋಧಕರಿಗೆ, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಣೆ ಮಾಡಿರುವುದು ಇವರ ವಿಶೇಷ.

ಭದ್ರಾವತಿ, ಹೊಸಪೇಟೆ ಹಾಗೂ ಚಿತ್ರದುರ್ಗ ಆಕಾಶವಾಣಿಗಳಲ್ಲಿ ಇವರ ಕಾರ್ಯಕ್ರಮ ನಿರಂತರವಾಗಿ ಪ್ರಸಾರವಾಗುತ್ತಿರುವುದು, ಜೊತೆಗೆ ಶ್ರೋತೃಗಳ ಅಪೇಕ್ಷೆಯೂ ಹೆಚ್ಚಿದೆ ಎಂಬ ಆಕಾಶವಾಣಿ ಕಾರ್ಯನಿರ್ವಾಹಕ ಎಂ.ಎಸ್. ಕೆಂಡದಮಠ್ ಅವರ ಹೇಳಿಕೆ ಈ ಕಲಾವಿದನ ಕಲಾಬದುಕಿನ ಹಿರಿಮೆಯ ಪ್ರತೀಕವಾಗಿದೆ.

ತಿಪ್ಪೇಸ್ವಾಮಿ, ಕಿನ್ನರಜೋಗಿ,
ಎನ್. ದೇವರಹಟ್ಟಿ, ಚಳ್ಳಕೆರೆ ತಾಲೂಕು.

# ಮಹದೇವಮ್ಮ

ಮಹದೇವಮ್ಮ ಚಿತ್ರದುರ್ಗದ ಸಮೀಪದ ಕೆನ್ನೆಡು ಗ್ರಾಮದವರು. ಆದಿಕರ್ನಾಟಕ ವರ್ಗಕ್ಕೆ ಸೇರಿದ ಈ ಕಲಾವಿದೆಗೆ ಇದೀಗ ೬೫ ವರ್ಷಗಳು ಆಸುಪಾಸು. ಮೊದಲಿಗೆ ಇವರ ತಾಯಿಯೊಂದಿಗೆ ಮುರುಘಾಮಠಕ್ಕೆ ಹಾಡುವುದಕ್ಕೆ ಹೋಗುತ್ತಿದ್ದರು. ಅಲ್ಲಿನ ಶ್ರೀಗಳು 'ಹಾಡುಗಾರ್ತಿ ದುರ್ಗಮ್ಮ' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಅವರ ಮಗಳಾಗಿ ಹಾಡುವುದು ಈ ಪದವಲ್ಲ, ಅವಾಗಿಯೇ ಬಂದವುಗಳು ಎನ್ನುತ್ತಾರೆ. ತಂದೆ ಕಣಿಮಪ್ಪನವರೂ ಯಕ್ಷಗಾನ, ತಮಟೆ ಕಲಾವಿದರು. ಮುರುಘಾಮಠದ ಆಹ್ವಾನಿತ ತಮಟೆ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ರದುರ್ಗ ಕೆಳಕೋಟೆ ಬಡಾವಣೆಯ ಮಾರಪ್ಪ ಅವರನ್ನು ವಿವಾಹವಾದರು. ಇವರಿಗೆ ನಾಲ್ಕು ಜನ ಮಕ್ಕಳು. ಇಬ್ಬರು ಗಂಡು, ಇಬ್ಬರು ಹೆಣ್ಣು. ೬೦ ವರ್ಷದ ಈ ಕಲಾವಿದೆಗೆ ನಾಲ್ಕು ವರ್ಷಗಳ ಹಿಂದೆ ಇವರ ಗಂಡ ಮಾರಪ್ಪ ತೀರಿಕೊಂಡಂದಿನಿಂದಲೂ, ಕೂಲಿ ಕಸುಬಿನಲ್ಲಿಯೇ ಇವರ ಬದುಕು.

ಬೋವಿ ಜಯಮ್ಮ ಅವರೊಡನೆ ಕೂಡಿಕೊಂಡು ಸೋಬಾನೆ, ಶಿವಭಜನೆ ಪದ ಹಾಡುವುದನ್ನು ಕಲಿತು. ಮುಂದೆ ಕಥನಗೀತೆ ಹಾಡುವುದಕನ್ನು ಕಲಿತರು. ಜಯಮ್ಮ ಅವರಿಗೆ ಹಿನ್ನೆಲೆ ಗಾಯಕಿಯಾಗಿ ಸದಾ ಹಾಡುತ್ತಾ ಬಂದರು. ಇವರೊಂದಿಗೆ ಹೊನ್ನಮ್ಮ ಎಂಬ ಕಲಾವಿದೆಯೂ ಕೂಡಿಕೊಂಡರು. ಹುಲ್ಲೂರಿನ ಹೊನ್ನಮ್ಮ ಕಣಮಪ್ಪ ಎಂಬುವರೊಂದಿಗೆ ವಿವಾಹವಾಗಿ ಮೂರು ಮಕ್ಕಳ ತಾಯಿ. ಜಯಮ್ಮ ಹೊರಗಡೆ ಹಾಡುವುದಕ್ಕೆ ಹೊರಟಾಗ ಅವರ ಜೊತೆಯಲ್ಲಿಯೇ ಹೋಗಿ ಕಾರ್ಯಕ್ರಮದಲ್ಲಿ ಹಿಮ್ಮೇಳ ಮುಮ್ಮೇಳ ಕಲಾವಿದೆಯರಾಗಿ ಭಾಗವಹಿಸುತ್ತಿರುವುದು ಇವರ ವಿಶೇಷ. ಮಹದೇವಮ್ಮ, ಹೊನ್ನಮ್ಮ ಇಬ್ಬರೂ ಆಕಾಶವಾಣಿ ಕಲಾವಿದರು. ಇಂದು ಇವರಿಬ್ಬರೂ ಒಟ್ಟಿಗೆ ಹಿಮ್ಮೇಳ-

ಮುಮ್ಮೇಳ ಮಾದರಿಯಲ್ಲಿ ಕಥನ ಗೀತೆಗಳನ್ನು ಭದ್ರಾವತಿ, ಚಿತ್ರದುರ್ಗ ಆಕಾಶವಾಣಿಗಳಲ್ಲಿ ಹಾಡಿದ್ದಾರೆ.

ಸಂಗ್ಯಾ-ಬಾಳ್ಯ ಕಥಾ ಪ್ರಸಂಗವನ್ನು ಹಾಡಿನ ಮೂಲಕ ಹಾಡುತ್ತಾರೆ. ಜೋಕುಮಾರ ಕಥೆಯನ್ನು ಅರ್ಧರಾತ್ರಿಯ ತನಕ ಮಾಡುತ್ತಾರೆ. ಮೈಸೂರಿನಲ್ಲಿ ಜರುಗಿದ ಅಖಿಲ ಭಾರತ ಜಾನಪದ ಸಮಾವೇಶದಲ್ಲಿ ಈ ಇಬ್ಬರೂ ಕಲಾವಿದೆಯರು ಸಂಗ್ಯಾ-ಬಾಳ್ಯಾ ಕಥೆಯನ್ನು ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯ, ಹೊಸಪೇಟೆ ಆಕಾಶವಾಣಿ, ಬೆಂಗಳೂರಿನ ಜಾನಪದ ಲೋಕದ ಲೋಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಾಡಿದ್ದಾರೆ. ಬೆಂಗಳೂರಿನ ವಿದ್ಯಾರಣ್ಯಪುರಂನಲ್ಲಿ ನಡೆದ ಜನಪದ ಕಾವ್ಯ ಕಮ್ಮಟಕ್ಕೆ ಈ ಇಬ್ಬರೂ ಕಲಾವಿದೆಯರು ಬೋವಿ ಜಯಮ್ಮ ಅವರೊಂದಿಗೆ ಸಂಪನ್ಮೂಲ ಕಲಾವಿದೆಯರಾಗಿ ಕಾರ್ಯಕ್ರಮ ನೀಡಿದ್ದಾರೆ.

ರವೀಂದ್ರ ಕಲಾಕ್ಷೇತ್ರ, ಚಿತ್ರದುರ್ಗದ ದುರ್ಗೋತ್ಸವಗಳಲ್ಲಿಯೂ ಭಾಗವಹಿಸಿ ಹಾಡುವುದರೊಂದಿಗೆ ಗೌರವ ಪುರಸ್ಕಾರ ಪಡೆದಿದ್ದಾರೆ.

ಯಾವುದೇ ಕಾರ್ಯಕ್ರಮವಿದ್ದರೂ ಮಹದೇವಮ್ಮ, ಹೊನ್ನಮ್ಮರ ಜೋಡಿ ಇದ್ದೇ ಇರುತ್ತದೆ. ಸಮವಯಸ್ಸು, ಧ್ವನಿ ಒಂದೇ ಹಾಡುಗಳ ರಾಗ-ಭಾವ, ಏರಿಳಿತ ಅಭ್ಯಾಸವಿರುವುದರಿಂದ ಇವರ ಹಾಡುಗಾರಿಕೆಗೆ ಅರ್ಥ ಬಂದಿದೆ.

ಮಹದೇವಮ್ಮ ಗಂಡ ಮಾರೆಪ್ಪ,
ಕೆಳಕೋಟೆ, ಚಿತ್ರದುರ್ಗ.

# ಕೆಂಚಮ್ಮ

ಚಿತ್ರದುರ್ಗ ಟೌನ್, ಕೆಳಕೋಟೆಯ ಆದಿಕರ್ನಾಟಕ ಬಡಾವಣೆಯಲ್ಲಿ ವಾಸವಾಗಿರುವ ಕೆಂಚಮ್ಮ ಆಕಾಶವಾಣಿ ಕಲಾವಿದೆ. ೬೫ ವರ್ಷ ವಯಸ್ಸು. ಹುಟ್ಟಿದ್ದು ಹೊಳಲ್ಕೆರೆ ತಾಲ್ಲೂಕು ಕೆರೆಯಾಗಲಹಳ್ಳಿಯಲ್ಲಿ. ತಂದೆ ಎಲ್ಲಪ್ಪ, ತಾಯಿ ಹನುಮಕ್ಕ. ಇವರಿಗೆ ಜನಿಸಿದ ೪ ಗಂಡು, ೨ ಹೆಣ್ಣುಮಕ್ಕಳಲ್ಲಿ ಕೆಂಚಮ್ಮ ಮೊದಲನೆಯವರು. ಮನೆಯ ಪರಿಸರವೇ ನನ್ನನ್ನು ಹಾಡುಗಾರಳನ್ನಾಗಿ ರೂಪಿಸಿತು, ಎನ್ನುವ ಕೆಂಚಮ್ಮಳ ತಾಯಿ ಹನುಮಕ್ಕ ಅಸಾಧ್ಯ ಹಾಡುಗಾರಳು. ಲಾವಣಿ ಪದ ಹಾಡುವುದು, ಡಕ್ಕಿ ಬಾರಿಸುವುದು, ಗಂಗೆ–ಗೌರಿ ಕತೆ ಮಾಡುವುದು, ಅರ್ಜುನ ಜೋಗಿಪದ, ಜುಂಜಪ್ಪನ ಮೇಗಳ ಪದ, ಚಿತ್ರದೇವರ ಪದ ಹಾಡುತ್ತಿದ್ದರು. ಮದುವೆ, ದೇವರ ಕಾರ್ಯ, ಉತ್ಸವಗಳಲ್ಲಿ ವಾರಗಟ್ಟಲೆ ಮನೆ ಬಿಟ್ಟು ಹಾಡುವುದಕ್ಕೆ ಹೋಗುತ್ತಿದ್ದರು. ಅವರು ಹಾಡುತ್ತಿದ್ದ ರೀತಿ ನನ್ನನ್ನು ಸೆಳೆಯಿತು. ಮುಂದೆ ಬೀಸುವಾಗ ತಾಯಿಯೊಂದಿಗೆ ಕುಳಿತು ಬೀಸುವಾಗ ಸೊಲ್ಲು ಸೊಲ್ಲಿಗೆ ಪದಕ್ಕೆ ಹಿಮ್ಮೇಳ ಹಾಡುವುದು ಸುರುಮಾಡಿ ಗುಣಸಾಗರಿ, ಮುದುಗದ ಕೆಂಚಮ್ಮ, ಸಂಗ್ಯಾಬಾಳ್ಯನ ಪದ, ಮೆದಕೇರಿಯಪ್ಪನ ಪದಗಳನ್ನು ಕಲಿತೆ ಎನ್ನುತ್ತಾರೆ.

ಹದಿನೈದು ವರ್ಷಕ್ಕೆ ಚಿತ್ರದುರ್ಗದ ಕೆಳಕೋಟೆಯ ನಾಗೇಂದ್ರಪ್ಪ ಎಂಬುವವರಿಗೆ ಕೊಟ್ಟು ಮದುವೆ ಮಾಡಿದರು. ಆಗಿನಿಂದ ಇಲ್ಲಿಯೇ ಇದ್ದೇನೆ. ನನಗೆ ಈಗ ಐದುಜನ ಮಕ್ಕಳು ನಾಲ್ವರು ಗಂಡು, ಒಂದು ಹೆಣ್ಣು. ಚಿತ್ರದುರ್ಗಕ್ಕೆ ಬಂದಮೇಲೆ ಹಾಡುವುದಕ್ಕೆ ವಿಶಾಲ ವೇದಿಕೆ ಲಭ್ಯವಾಯಿತು. ಬೋವಿ ಜಯಮ್ಮ, ಬೋವಿ ಚಿನ್ನಮ್ಮ ಇವರ ಸಂಪರ್ಕದಿಂದಾಗಿ ನಾಡಿನಾದ್ಯಂತ ಹಾಡಿದ್ದೇನೆ. ಮೊದಮೊದಲು ಮುರುಘಾಮಠದಲ್ಲಿ ಹಾಡಿದೆವು. ನಂತರ ನಾಯಕನಹಟ್ಟಿ ತಿಪ್ಪೇಸ್ವಾಮಿ ಮಠ, ದುರ್ಗದ ಜೋಗಿಮಠ, ಸಿರಿಗೆರೆ ಮಠಗಳಲ್ಲಿ ಹಾಡಿಸುತ್ತಿದ್ದರು. ಹಾಡುವ ಸಂದರ್ಭ ಬಿಟ್ಟು ಉಳಿದ ಸಮಯವೆಲ್ಲಾ

ಕೂಲಿ ಕಾಯಕ. ರಸ್ತೆ ರಿಪೇರಿ, ಕೆರೆ ಕಟ್ಟಡ, ಮಟ್ಟ ತೆಗೆಯುವ ಕೆಲಸವನ್ನು ನೆರವೇರಿಸಲಾಯಿತು. ನಾಗೇಂದ್ರಪ್ಪನೊಂದಿಗೆ ರಸ್ತೆ ಕೆಲಸ, ಜಲ್ಲಿ ಕಲೆಸುವುದು, ಕಟ್ಟಡದ ಕಾಮಗಾರಿಕೆ ಕೆಲಸವನ್ನು ಮಾಡಿರುವುದಾಗಿ ಹೇಳುತ್ತಾರೆ.

ಕೆಂಚಮ್ಮನವರು ಸಂಗ್ಯಾಬಾಳ್ಯಾ ಕಥೆಯನ್ನು ಹಾಡಿನ ಮೂಲಕ ವಿಶೇಷ ಗಮನ ಸೆಳೆದಿದ್ದಾರೆ. ಮಗುದ ಕೆಂಚಮ್ಮ, ಗುಣಸಾಗರಿ, ಬಾಲನಾಗಮ್ಮ, ಕಾಡಸಿದ್ಧಮ್ಮ, ಗಂಗೆ–ಗೌರಿ ಕತೆಯನ್ನು ಮೊದಲಿನಿಂದಲೂ ಹಾಡುತ್ತಿದ್ದು ಬೋವಿ ಜಯಮ್ಮನ ಸಂಪರ್ಕದಿಂದಾಗಿ ಗೌರಸಂದ್ರದ ಮಾರಮ್ಮನ ಕತೆಯನ್ನು ಕಲಿತರು. ನಾಯಕನಹಟ್ಟಿ ತಿಪ್ಪೇಸ್ವಾಮಿ ಕಥೆಯನ್ನು ಹಾಡುತ್ತಾರೆ. ಬೆಂಗಳೂರು ದೂರದರ್ಶನದ ಸಿರಿಗಂಧ ಮಾಲಿಕೆಯಲ್ಲಿ ಇವರು ಜಯಮ್ಮ ಅವರೊಂದಿಗೆ ಹಾಡಿದ್ದಾರೆ. ಬೆಂಗಳೂರು, ಭದ್ರಾವತಿ, ಹೊಸಪೇಟೆ, ಚಿತ್ರದುರ್ಗ ಆಕಾಶವಾಣಿಗಳಲ್ಲೂ ಇವರು ಕಾವ್ಯ ಹಾಡಿದ್ದಾರೆ. ಮೈಸೂರು ದಸರಾ ವಸ್ತುಪ್ರದರ್ಶನ, ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗ, ಮೈಸೂರಿನ ಸುತ್ತೂರು ಮಠ, ಚಾಮರಾಜನಗರ ಜಿಲ್ಲೆಯ ಮಲೆಯ ಮಹದೇಶ್ವರನ ಬೆಟ್ಟ ಇಲ್ಲೆಲ್ಲಾ ಬೋವಿ ಜಯಮ್ಮ ಅವರೊಂದಿಗೆ ವಿಶೇಷ ಹಾಡುಗಾರಿಕೆ ನೀಡಿದ್ದಾರೆ.

ಕರ್ನಾಟಕ ಜಾನಪದ ಅಕಾಡೆಮಿ ಮೊದಲಿನಿಂದಲೂ ಏರ್ಪಡಿಸುತ್ತಿರುವ ಜಾನಪದ ಕಲಾಮೇಳಗಳಲ್ಲಿ ಇವರು ಸೋಬಾನೆ, ದುರ್ಗದ ಮೇಲಿನ ಹಾಡುಗಾರಿಕೆಯನ್ನು ಜಯಮ್ಮ ಅವರೊಂದಿಗೆ ಹಾಡಿದ್ದಾರೆ. ದುರ್ಗದ ಉತ್ಸವ, ದಾವಣಗೆರೆ ಜಿಲ್ಲಾ ಕಲೋತ್ಸವಗಳಲ್ಲಿಯೂ ಇವರು ಹಾಡಿದ್ದಾರೆ. ಚಿತ್ರದುರ್ಗ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆಗಿದ್ದಾರೆ. ಇವರು ಹಾಡಿರುವ 'ಸೋ ಎನ್ನಿರೆ ಸೋಬಾನೆ ಎನ್ನಿರೆ' ಕ್ಯಾಸೆಟ್‌ನ್ನು ಬೆಂಗಳೂರಿನ ಅಶ್ವಿನಿ ಆಡಿಯೋ ಸಂಸ್ಥೆ ಹೊರತಂದಿದೆ.

**ಕೆಂಚಮ್ಮ,**
**೧ನೇ ಕ್ರಾಸ್, ಅಂಬೇಡ್ಕರ್ ಸರ್ಕಲ್,**
**ಕೆಳಕೋಟೆ, ಚಿತ್ರದುರ್ಗ.**

# ಕಮಲಮ್ಮ

ಕಮಲಮ್ಮ ಸೊಂಡೆಕೊಳ ಗ್ರಾಮದವರು. ೬೫ ವರ್ಷ ವಯೋಮಿತಿಯ ಈಗೆ ಸೋಬಾನೆ ಹಾಡುಗಾರ್ತಿ. ಚಿತ್ರದುರ್ಗದ ಪಾಳೆಯಗಾರರ ಮೇಲೂ ಸಹಯೋಗದಲ್ಲಿ ಹಾಡುತ್ತಾರೆ. ಚಿತ್ರದುರ್ಗ ಜಿಲ್ಲೆಯ ಚಿಕ್ಕಸಿದ್ಧವನಹಳ್ಳಿ ಇವರ ಹುಟ್ಟೂರು. ತಂದೆ ಹನುಮಂತಪ್ಪ, ತಾಯಿ ದುರ್ಗಮ್ಮ. ತಂದೆ ಒಳಾಯು ಯಕ್ಷಗಾನ ಕಲಾವಿದರು. ಭಾಗವಂತಿಕೆಯ ಪದ ಹಾಡುವುದು ಇವರ ವಿಶೇಷ. ಮುರುಘಾಮಠದ ಹಿರಿಯ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ತಾಯಿ ದುರ್ಗಮ್ಮನೂ ಒಳ್ಳೆಯ ಸೋಬಾನೆ ಕಲಾವಿದೆ. ದುರ್ಗದ ಮೇಲೆ ಪದ ಹಾಡುವುದು, ಕೋಲುಪದ ಹಾಡುವುದು ಇವರ ಬದುಕಿನಲ್ಲಿ ವಿಶೇಷ ಕಲೆಯಾಗಿತ್ತು.

ಕಮಲಮ್ಮ ೧೯೫೦ರ ಸೊಂಡೆಕೊಳದ ರೇವಣಸಿದ್ದಪ್ಪ ಎಂಬುವರನ್ನು ವಿವಾಹವಾದರು. ರೇವಣಸಿದ್ದಪ್ಪ ರೈತರು. ಕೂಲಿ ಬದುಕು, ಹಾಡುಗಾರಿಕೆಯೂ ಇವರಿಗೆ ಬರುತ್ತಿತ್ತು. ಕಮಲಮ್ಮ ಅವರಿಗೆ ಒಬ್ಬನೇ ಒಬ್ಬ ಮಗ.

ಭಜನೆ ಕಲೆಯ ಮುಖಂಡರಾಗಿ, ಹತ್ತಾರು ಭಜನಾ ತಂಡಗಳಿಗೆ ಶಿವಭಜನೆ ಹೇಳಿಕೊಟ್ಟಿದ್ದಾರೆ. ನೂರಾರು ಕಲಾತಂಡಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವುದು ಇಂದಿಗೂ ಇದೆ. ನಾಯಕನಟ್ಟಿ ತಿಪ್ಪೇಸ್ವಾಮಿ, ಗುಣಸಾಗರದಮ್ಮ, ಗೌರಸಂದ್ರದ ಮಾರಮ್ಮ, ಮುರುಘಾಸ್ವಾಮಿಗಳ ಬಗೆಗೆ ಪದ ಹಾಡುತ್ತಾರೆ. ಪಾಳೆಯಗಾರರ ಮೇಲೆ ಕೋಲುಪದದ ಧಾಟಿಯಲ್ಲಿ ಹಾಡುವುದು ಇವರ ಕಾಯಕವಾಗಿದೆ.

ಬೋವಿ ಜಯಮ್ಮ, ಚಿನ್ನಮ್ಮ ಇವರ ಜೊತೆಗೆ ಹಿಮ್ಮೇಳ ಗಾಯಕಿಯಾಗಿ ಚಿತ್ರದುರ್ಗದ ಆಕಾಶವಾಣಿಯಲ್ಲಿ ಹಾಡಿದ್ದಾರೆ. ಜಾನಪದ ಅಕಾಡೆಮಿ ಏರ್ಪಡಿಸಿದ್ದ

ಗಡಿನಾಡ ಜಾನಪದ ಉತ್ಸವದಲ್ಲಿ ಕಲಾವಿದರಾಗಿ, ಪರಶುರಾಮಪುರ, ಹರ್ತಿಕೋಟೆ, ಸಾಣೆಹಳ್ಳಿಯಲ್ಲಿ ಭಾಗವಹಿಸಿದ್ದಾರೆ. ಚಿತ್ರದುರ್ಗದ ಉತ್ಸವ, ದಾವಣಗೆರೆ ಉತ್ಸವಗಳಲ್ಲಿ ಸಹ ಕಲಾವಿದರೊಂದಿಗೆ ಹಾಡಿದ್ದಾರೆ.

ನೂರಾರು ಕಲಾವಿದರಿಗೆ ಮಾರ್ಗದರ್ಶನ ಸ್ಥಾನದಲ್ಲಿ ನಿಂತು, ಕಲೆಯ ಪ್ರಸಾರ, ಸಂಘಟನೆಯಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡಿರುವ ಕಮಲಮ್ಮ ಶ್ರೇಷ್ಠ ಕಲಾವಿದೆ ಅಲ್ಲದಿದ್ದರೂ ಈಕೆಯ ಕಲಾನಿಷ್ಠೆ, ಸಂಘಟನೆ ಅನನ್ಯವಾದುದು.

**ಶ್ರೀಮತಿ ಕಮಲಮ್ಮ,**
**ಸೊಂಡೆಕೊಳ, ಚಿತ್ರದುರ್ಗ ತಾಲೂಕು.**

# ರುದ್ರಪ್ಪ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಬಿ.ದುರ್ಗದ ರುದ್ರಪ್ಪ ಅಪರೂಪದ ಮುಖವೀಣೆ ಕಲಾವಿದರು. ಛಲವಾದಿ ಜನಾಂಗದ ೭೦ ವರ್ಷ ಪ್ರಾಯದ ಈ ಕಲಾವಿದರಿಗೆ ಆರು ಜನ ಮಕ್ಕಳು. ಬಯಲುಕತೆ, ಮೂಡಲಪಾಯ ಯಕ್ಷಗಾನ, ಹಗಲುವೇಷದ ಪ್ರಸಂಗಗಳಿಗೆ ಮುಖವೀಣೆ ಕಲಾವಿದರಾಗಿ ಕಳೆದ ೫೦ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆರಂಭದಲ್ಲಿ ಹಿರಿಯೂರು, ಗೌಡ್ನಹಳ್ಳಿಗಳಲ್ಲಿ ಕರಿಭಂಟ, ಲವಕುಶರ ಕಾಳಗ ಪ್ರಸಂಗಗಳಿಗೆ ಮುಖವೀಣೆ ನುಡಿಸುತ್ತಿದ್ದ ರುದ್ರಪ್ಪ ಇದರಲ್ಲಿಯೇ ಪ್ರಸಿದ್ಧರಾಗಿ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ತುಮಕೂರು ಈ ಜಿಲ್ಲೆಗಳಲ್ಲಿಯೂ ಯಕ್ಷಗಾನ ಪ್ರಸಂಗಗಳಿಗೆ ಮುಖವೀಣೆ ನುಡಿಸುತ್ತಾ ಪ್ರಸಿದ್ಧರಾದರು. ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ ಶಂಕರಘಟ್ಟದಲ್ಲಿಯೂ ಮುಖವೀಣೆ ನುಡಿಸಿ ಸೈ ಅನ್ನಿಸಿಕೊಂಡಿದ್ದಾರೆ. ಜೊತೆಗೆ ಬೆಂಗಳೂರು, ಭದ್ರಾವತಿ, ಚಿತ್ರದುರ್ಗ, ಹೊಸಪೇಟೆ ಆಕಾಶವಾಣಿಯ ಮೂಲಕ ಮುಖವೀಣೆ ಕಲೆಯನ್ನು ಪ್ರಸಾರ ಮಾಡಿರುವ ಹಿರಿಮೆ ಇವರದು.

ಹರ್ತಿಕೋಟೆ, ಪರಶುರಾಮಪುರ, ಮಾದೇಪುರ, ತಾಳೀಕಟ್ಟೆ, ಗೌಡ್ನಹಳ್ಳಿಗಳಲ್ಲಿ ಏರ್ಪಡಿಸುವ ದೇವಿಮಹಾತ್ಮೆ, ರೇವಣಸಿದ್ಧೇಶ್ವರ ಕಥೆ, ಸಭಾಪರ್ವ, ಲವಕುಶರ ಕಾಳಗ, ದುಶ್ಯಾಸನನ ಕಥೆ, ಗಯಚರಿತ್ರೆ, ಲಂಕಾದಹನ, ಶಿವಜಲಂಧರ ಈ ಮೊದಲಾದ ಯಕ್ಷಗಾನ ಬಯಲಾಟದಲ್ಲಿ ಮುಖವೀಣೆ ನುಡಿಸಿರುವುದು ಇವರ ವಿಶೇಷ. ಚಿತ್ರದುರ್ಗದ ಮುರುಘಾಮಠ, ತರಳಬಾಳುಮಠ, ಸಾಣೆಹಳ್ಳಿ, ಸಿರಿಗೆರೆ, ಕನಕ ಗುರುಪೀಠ ಹೊಸದುರ್ಗ, ರಾಜನಹಳ್ಳಿ ವಾಲ್ಮೀಕಿ ಗುರುಪೀಠಗಳಲ್ಲಿಯೂ ಪ್ರದರ್ಶನ ನೀಡಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಕಲಾ ಜಾಥಾ ಕಾರ್ಯಕ್ರಮದಲ್ಲಿ ಜಿಲ್ಲಾ ಕಲಾ ತಂಡದಲ್ಲಿ ಜಿಲ್ಲೆಯಾದ್ಯಂತ ಪ್ರಚಾರದ ನೇತೃತ್ವದೊಂದಿಗೆ ತಿರುಗಾಡಿದ ಹಿರಿಯ ಕಲಾ ಸಂಘಟಕರಾಗಿಯೂ ಕಾರ್ಯನಿರ್ವಹಿಸಿದ ಹಿರಿಮೆ ಇವರದು. ರೈತಾಪಿ ಬದುಕು, ಮಡದಿ ಮಕ್ಕಳೊಂದಿಗೆ ಪುಟ್ಟ ಸೂರಿನ ಕೆಳಗೆ ವಾಸಿಸುತ್ತಿರುವ ಇವರು ಸರ್ಕಾರದ ಯಾವ ಸೌಲಭ್ಯವೂ ಬಂದಿಲ್ಲದಿರುವುದರ ಬಗೆಗೆ ನೊಂದು ನುಡಿಯುತ್ತಾರೆ.

**ರುದ್ರಪ್ಪ,**
**ಮುಖವೀಣೆ ಕಲಾವಿದ,**
**ಬಿ. ದುರ್ಗ, ಹೊಳಲ್ಕೆರೆ ತಾಲೂಕು.**

# ರಾಮಚಂದ್ರ ನಾಯಕ

ರಾಮಚಂದ್ರ ನಾಯಕರು ಪಾಳೆಗಾರರ ವೇಷದಲ್ಲಿ ಪ್ರಸಿದ್ಧರು. ಕಳೆದ ೪೦ ವರ್ಷಗಳಿಂದಲೂ ಪಾಳೆಯುಗಾರನ ವೇಷದಲ್ಲಿ ಚಿತ್ರದುರ್ಗ ಭಾಗದಲ್ಲಿ ಜನಪ್ರಿಯರಾಗಿರುವುದು ವಿಶೇಷ. ಇದಕ್ಕಾಗಿ ಒಂದು ಸಂಘಟನಾತ್ಮಕ ಸಂಸ್ಥೆಯನ್ನು ಚಿತ್ರದುರ್ಗದಲ್ಲಿ ಸ್ಥಾಪಿಸಿದರು. ಗೆಳೆಯರ ಬಳಗ ಪಾಳೆಯಗಾರರ ಸಂಘ ಎಂಬ ಹೆಸರಿದೆ. ಇದರ ಮೂಲಕ ಯಾವ ಸ್ಥಳದಲ್ಲಿ ಪಾಳೆಯಗಾರರ ವೇಷದ ಕಲಾವಿದರಿದ್ದಾರೆಯೋ ಅಂಥವರಿಗೆ ಪ್ರೋತ್ಸಾಹ, ಉತ್ತೇಜನ, ಸಹಾಯ, ಸಂಘಟನೆಯ ಮೂಲಕ ಪಾಳೆಯಗಾರರ ಕಲೆಯನ್ನು ಬೆಳೆಸುವುದಾಗಿದೆ.

ರಾಮಚಂದ್ರ ನಾಯಕರು ಮೂಲತಃ ವೈದ್ಯರು. ಚಿತ್ರದುರ್ಗದಲ್ಲಿ ವೈಶಾಲಿ ನರ್ಸಿಂಗ್ ಹೋಂನ್ನು ಆರಂಭಿಸಿ, ಆರೋಗ್ಯ ಸೇವೆಯಲ್ಲಿ ತೊಡಗಿದ್ದಾರೆ. ಜೊತೆಗೆ ಮೊದಲ ಆದ್ಯತೆ ಪಾಳೆಯಗಾರಿಕೆಯ ಕಲೆಯನ್ನು ಉಳಿಸಿ ಬೆಳೆಸುವುದು ಎನ್ನುತ್ತಾರೆ. ಚಿತ್ರದುರ್ಗ, ಸಿರಾ, ಮೊಳಕಾಲ್ಮೂರು, ಚಳ್ಳಕೆರೆ, ರಾಯಚೂರು ಭಾಗಗಳಲ್ಲಿ ಇಂದಿಗೆ ಯಾವುದೇ ಸಭೆ ಸಮಾರಂಭಗಳಲ್ಲಿ ಪಾಳೆಯಗಾರರ ಕುಣಿತ ಒಂದು ಕಲಾಪ್ರಕಾರವಾಗಿ ಸಭೆ–ಸಮಾರಂಭಗಳಲ್ಲಿ ಪ್ರದರ್ಶನ ನೀಡುತ್ತಾ ತಮ್ಮ ಪರಂಪರಾಗತ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ವಿಶೇಷ ಕಾಳಜಿ ವಹಿಸಿರುವುದು ರಾಮಚಂದ್ರ ನಾಯಕರ ವಿಶೇಷವಾಗಿದೆ.

ರಾಮಚಂದ್ರನಾಯಕರು ತಮ್ಮ ೨೦ನೇ ವಯಸ್ಸಿನಿಂದಲೇ ಪಾಳೆಯಗಾರ ಕುಣಿತವನ್ನು ಕಲಿಯಲು ಆರಂಭಿಸಿದರು. ಇವರ ತಂದೆ ಶ್ರೀನಾಯಕರೂ, ತಾತನವರ ಕಾಲದಿಂದಲೂ ಈ ಕಲೆಯನ್ನು ಸಮರ್ಥವಾಗಿ ಮುಂದುವರಿಸುತ್ತಾ ಬರುತ್ತಿರುವುದು, ಈ ಮೂಲಕ ವೈದ್ಯಲೋಕದ ಖ್ಯಾತಿಗಿಂತ ಪಾಳೆಯುಗಾರ ವೇಷಭೂಷಣದ ಕಲಾವಿದರಾಗಿ ರಾಮಚಂದ್ರ ನಾಯಕರು ಹೆಸರುವಾಸಿಯಾಗಿದ್ದಾರೆ.

ಇವರ ಜೊತೆಗೆ ಎಚ್ಚಮನಾಯಕ ಖ್ಯಾತಿಯ ಪಾಳೆಯಗಾರರ ವೇಷದ ಬಿ. ಟಿ. ರೆಡ್ಡಿ ದೊಡ್ಡಪೇಟೆ ಇವರ ಕಲಾ ಆಕರ್ಷಣೆ ದಾಖಲಾರ್ಹವಾದುದು.

ರಾಮಚಂದ್ರ ನಾಯಕ,
ವೈಶಾಲಿ ನರ್ಸಿಂಗ್ ಹೋಂ,
ಚಿತ್ರದುರ್ಗ.

# ಗಂಗಮ್ಮ

ಗಂಗಮ್ಮ ಜನಪದ ಹಾಡುಗಾರ್ತಿ. ಇವರು ಇತರರೊಂದಿಗೆ ಹಾಡಿರುವ ಸೋ ಎನ್ನಿರೆ ಸೋಬಾನೆ ಎನ್ನಿರೆ ಕ್ಯಾಸೆಟ್, ಬೆಂಗಳೂರಿನ ಅಶ್ವಿನಿ ಆಡಿಯೋ ಕಂಪನಿ ಹೊರತಂದಿದ್ದು ಇದರಲ್ಲಿ ಆರು ಹಾಡುಗಳಿವೆ.

ಗಂಗಮ್ಮ ಹುಟ್ಟಿದ್ದು ಬೊಮ್ಮನಹಳ್ಳಿಯಲ್ಲಿ. ತಂದೆ ಮಣೆಗಾರ ರುದ್ರಪ್ಪ, ತಾಯಿ ಕರಿಯಮ್ಮ. ಇವರದು ಸಂಗೀತ ಜನಪದ ವಾದ್ಯಗಾರ ಕುಟುಂಬ. ಇವರನ್ನು ಕೊಟ್ಟು ಮದುವೆ ಮಾಡಿದ್ದು ಚಿತ್ರದುರ್ಗ ಟೌನ್ ಗಾರೆ ಕೆಲಸದ ಗಂಗಾಧರಪ್ಪ ಎಂಬುವರಿಗೆ. ಸಧ್ಯ ಕೆಳಕೋಟೆಯಲ್ಲಿ ವಾಸಿಸುತ್ತಿರುವ ಇವರಿಗೆ ಆರು ಜನ ಮಕ್ಕಳು ಐದು ಗಂಡು, ಒಂದು ಹೆಣ್ಣು.

ಗಂಗಮ್ಮ ಪದ ಹಾಡುವುದನ್ನು ತಾಯಿಯಿಂದಲೇ ಕಲಿತರು. ಚಿಕ್ಕ ವಯಸ್ಸಿನಲ್ಲಿಯೇ ತಾಯಿಯೊಂದಿಗೆ ಧಾರ್ಮಿಕ ಸಮಾರಂಭಗಳಿಗೆ ಹೋಗಿ ಹಿಮ್ಮೇಳ ಕಲಾವಿದೆಯಾಗಿ ಕಾರ್ಯಕ್ರಮ ನೀಡುತ್ತಿದ್ದರು. ಆ ಕಾಲದಲ್ಲಿಯೇ ಕಲಿತ ಸಂಗ್ಯಾ-ಬಾಳ್ಯನ ಪದ, ಜೋಕುಮಾರಸ್ವಾಮಿ ಪದ, ಉತ್ತರದೇವಿ ಪದ, ಸಿರಿಗೌರಿ ಪದ, ಗಂಗೆ-ಗೌರಿ ಪದ ಇವರ ಹಾಡುಗಾರಿಕೆಗೆ ವಿಶೇಷ ಮೆರುಗನ್ನು ನೀಡಿದವು ಮತ್ತು ವಿಶಿಷ್ಟವಾದುದರಿಂದ ಕೇಳುಗರನ್ನು ಮೇಲಿಂದ ಮೇಲೆ ಆಕರ್ಷಿಸಿತು. ಉತ್ತರದೇವಿ ಪದ ರೈತಾಪಿ ಬದುಕಿನ ಸಂಬಂಧ ಕಲ್ಪಿಸಿರುವುದರಿಂದ ಮಳೆಬಾರದ ಸಂದರ್ಭದಲ್ಲಿ ಊರಮುಂದಲ ಅರಳಿಮರದ ಕೆಳಗೆ ಅಥವಾ ಕಟ್ಟೆಯ ಮೇಲೆ ಕುಳಿತು ಮಳೆಕರೆಯುವ ಹಾಡಾಗಿ ಹಾಡುವುದು ಪದದ ವಿಶೇಷ. ಈ ಕಾಯಕವನ್ನು ಇವರ ತಾಯಿ ಕರಿಯಮ್ಮ ಮಾಡುತ್ತಿದ್ದರು. ಅವರ ಮಗಳಾಗಿ ಗಂಗಮ್ಮ ಆ ಕಾಲಕ್ಕೆ ಹಿಮ್ಮೇಳ ಕಲಾವಿದೆಯಾಗಿ ಕೆಲಸ ಮಾಡಿದವರು. ಆ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿರುವ

ಗಂಗಮ್ಮ ಇಂದು ಬೋವಿ ಜಯಮ್ಮ, ಚಿನ್ನಮ್ಮನವರ ಜೊತೆಯ ಹಿಮ್ಮೇಳ ಕಲಾವಿದೆ. ಕಳೆದ ೪೦ ವರ್ಷಗಳಿಂದಲೂ ಕರ್ನಾಟಕದಾದ್ಯಂತ ಸೋಬಾನೆ, ಕಥನಗೀತೆ, ಲಾವಣಿ ಹಾಗೂ ಮದಕರಿ ನಾಯಕನನ್ನು ಕುರಿತು ಪದಗಳನ್ನು ಹಾಡುತ್ತಾ ಬಂದಿದ್ದಾರೆ.

ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ, ಮೈಸೂರು ದಸರಾ ವಸ್ತುಪ್ರದರ್ಶನದ ಸಾಂಸ್ಕೃತಿಕ ವೇದಿಕೆಯಲ್ಲಿ ಹಾಡಿದ್ದಾರೆ. ಮೈಸೂರಿನ ಕಲಾಭವನದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಏರ್ಪಡಿಸಿದ್ದ ಅಖಿಲ ಭಾರತ ಜಾನಪದ ಸಮಾವೇಶದಲ್ಲಿ ಹಾಡಿದ್ದಾರೆ. ಇದಲ್ಲದೆ ಅಕಾಡೆಮಿ ಏರ್ಪಡಿಸಿದ್ದ ಜನಪದ ಕಲಾಮೇಳಗಳಾದ ವಿದ್ಯಾನಗರ, ಬೆಂಗಳೂರು, ರಾಮನಗರದ ಜಾನಪದ ಲೋಕೋತ್ಸವ, ಪರಶುರಾಮಪುರ ಗಡಿನಾಡ ಜಾನಪದ ಸಂಸ್ಕೃತಿ ಉತ್ಸವ, ಪಾವಗಡದ ಜನಪದ ಮೇಳಗಳಲ್ಲಿ ಹಾಡಿದ್ದಾರೆ.

ಭದ್ರಾವತಿ, ಬೆಂಗಳೂರು, ಚಿತ್ರದುರ್ಗ ಆಕಾಶವಾಣಿಗಳಲ್ಲೂ ಹಾಡಿರುವ ಗಂಗಮ್ಮ ದೂರದರ್ಶನದ ಚಂದನವಾಹಿನಿಯ 'ಸಿರಿಗಂಧ' ಕಾರ್ಯಕ್ರಮದಲ್ಲಿ ಬೋವಿ ಜಯಮ್ಮ ಅವರೊಂದಿಗೆ ಹಾಡಿರುವುದು ಇವರ ವಿಶೇಷವಾಗಿದೆ.

ಇವರ ಜೊತೆಗೆ ಇವರಷ್ಟೇ ವಯಸ್ಸಿನ ಇಂದ್ರಮ್ಮ ಕರಿಯಪ್ಪನವರೂ ಜೊತೆಗೂಡಿ ಹಿಮ್ಮೇಳ ಮುಮ್ಮೇಳದಲ್ಲಿ ಹಾಡುವುದು ವಿಶೇಷವಾಗಿದೆ. ೬೦ ವರ್ಷ ವಯಸ್ಸಿನ ಇಂದ್ರಮ್ಮ ವಿಶೇಷವಾಗಿ ಹೇಮರೆಡ್ಡಿ ಮಲ್ಲಮ್ಮ, ಬಣಜಿಗಶೆಟ್ಟಿ, ನಾಗಮ್ಮ, ಗೌರಸಂದ್ರದ ಮಾರಮ್ಮ, ಮದಕರಿನಾಯಕ, ಗುಣಸಾಗರದಮ್ಮ, ಮದಗದ ಕೆಂಚಮ್ಮ ಕುರಿತ ಹಾಡುಗಳನ್ನು ಹಾಡುತ್ತಾರೆ. ಸತ್ತವರ ಬಗೆಗೆ ಅವರ ಆತ್ಮಕಥನದ ಮಾದರಿಯಲ್ಲಿ ಪದ ಕಟ್ಟಿ ಹಾಡುವುದು ಇವರ ವಿಶೇಷ. ಗಂಗಮ್ಮ-ಇಂದ್ರಮ್ಮ ಸಮಜೋಡಿಯ ಹಾಡುಗಾರರು.

**ಗಂಗಮ್ಮ ಗಂಗಾಧರಪ್ಪ**
**ಕೆಳಕೋಟೆ, ಚಿತ್ರದುರ್ಗ ಜಿಲ್ಲೆ.**

## ವಾಜಿದ್

ವಾಜಿದ್ ಚಳ್ಳಕೆರೆಯವರು. ತಂದೆ ಮಹಮದ್ ಸಾಬ್. ತಮ್ಮ ೭೦ ವರ್ಷಗಳ ಒಟ್ಟು ಜೀವನದಲ್ಲಿ ೬೦ ವರ್ಷಗಳನ್ನು ಭಗವಂತಿಕೆ, ವೇಷಭೂಷಣ, ಸ್ತ್ರೀಪಾತ್ರದ ಅಭಿನಯದಲ್ಲಿ ಕಳೆದಿರುವುದು ಇವರ ವಿಶೇಷವಾಗಿದೆ. ಐದನೇ ತರಗತಿಯವರೆಗೆ ಓದಿರುವ ಈ ಸಾಹೇಬರು, ಸಣ್ಣಪುಟ್ಟ ಅಂಗಡಿಗಳಲ್ಲಿ ಅರೆಕಾಲಿಕ ಕಾರ್ಮಿಕರಾಗಿ ಕಾರ್ಯ ನಿರ್ವಹಿಸಿರುವ ಇವರಿಗೆ ಪೂರ್ಣ ಉದ್ಯೋಗ ಎಂಬುದಿಲ್ಲ. ಆದರೆ ಚಳ್ಳಕೆರೆ ತಾಲ್ಲೂಕಿನಾದ್ಯಂತ ಯಕ್ಷಗಾನ, ಬಯಲುಕತೆಗಳಲ್ಲಿ ಆಹ್ವಾನಿಸಿ ಸ್ತ್ರೀಪಾತ್ರಧಾರಿಗಳಾಗಿ ಜನಾಕರ್ಷಣೆ ಪಡೆದಿರುವುದು ಇವರ ವಿಶೇಷ. ಜೊತೆಗೆ ದುಬಾರಿ ಬೇಡಿಕೆಯ ಕಲಾವಿದರಾಗಿ ಯಕ್ಷಗಾನ ಕಲಾವಿದರೊಬ್ಬರು ಬೆಳೆದಿರುವುದು ಅಪರೂಪದ ಸಂಗತಿಯೂ ಆಗಿದೆ. ಯಕ್ಷಗಾನದ ಸ್ತ್ರೀಪಾತ್ರಧಾರಿಯಾಗಿ, ನೃತ್ಯ ಕಲಾವಿದರಾಗಿ ಹಾಡು, ಕುಣಿತ, ವೇಷಭೂಷಣಗಳಿಂದ ಜನಾಕರ್ಷಣೆ ಪಡೆದಿರುವ ಇವರು ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಭಾಗಗಳಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುವುದು ಇವರ ಜನಪ್ರಿಯತೆಯ ಸಂಕೇತವಾಗಿದೆ.

ಸೀತೆಯ ಪಾತ್ರ, ದ್ರೌಪದಿ, ಸುಭದ್ರೆ, ಆದಿಶಕ್ತಿ, ರುಕ್ಮಿಣಿ, ಸುಧೇಷ್ಣೆ, ಗಾಂಧಾರಿ, ಮಂಥರೆ, ಭಾನುಮತಿ, ರತಿ ಇವರು ಹಾಕುವ ವಿಶೇಷ ಸ್ತ್ರೀಪಾತ್ರಗಳು. ಈ ಪಾತ್ರಗಳ ಲವಕುಶ, ದುಶ್ಯಾಸನ ಕಾಳಗ, ದೇವಿ ಮಹಾತ್ಮೆ, ರಕ್ತಬೀಜಾಸುರನ ಕಥೆ, ಇಂದ್ರಜಿತ್ ಕಾಳಗ, ರತಿಮನ್ಮಥರ ಕಲ್ಯಾಣ, ಐರಾವತ, ಪಾಂಡವರ ವನವಾಸ ಪ್ರಮುಖ ಯಕ್ಷಗಾನ ಪ್ರಸಂಗಗಳಲ್ಲಿ ಸ್ತ್ರೀಪಾತ್ರಗಳಲ್ಲಿಯೇ ಇವರು ಅಭಿನಯಿಸಿರುವುದು ವಿಶೇಷ.

ವಾಜಿದ್ ಸಾಬ್ ಸ್ತ್ರೀಪಾತ್ರಗಳಲ್ಲಿ ಪುರುಷರಾದರೂ ಸ್ತ್ರೀಯರಂತೆಯೇ ಕಾಣುವುದು, ಇದರ ಜೊತೆಗೆ ಆಕರ್ಷಕ ನೃತ್ಯ ಸಂಯೋಜನೆ, ಕುಣಿತ, ಹಾಡು ಇವರ

ಜನಪ್ರಿಯತೆಯನ್ನು ಹೆಚ್ಚಿಸಿದೆ. ಜೊತೆಗೆ ಪೌರಾಣಿಕ ನಾಟಕಗಳಲ್ಲಿ ಸ್ತ್ರೀಪಾತ್ರಗಳ ಅಭಿನಯಕ್ಕೆ ಹುಳಿಯಾರು, ಹಿರಿಯೂರು, ದುರ್ಗ, ಆಂಧ್ರದ ಕಲ್ಯಾಣದುರ್ಗ, ಅನಂತಪುರಗಳಿಂದ ಹೆಣ್ಣುಮಕ್ಕಳನ್ನು ಕರೆಸುವುದು ವಾಡಿಕೆ. ಆದರೆ ಯಕ್ಷಗಾನದಲ್ಲಿ ಈ ಪರಂಪರೆ ಇರುವುದಿಲ್ಲ. ಈ ಹೊಸ ಬಗೆಯ ಪರಂಪರೆಯ ರೂವಾರಿ ತನ್ನ ವಿಶಿಷ್ಟ ವೇಷಗಾರಿಕೆ, ಹಾಡು-ನೃತ್ಯಗಳಿಂದ ಜನಮನ್ನಣೆ ಪಡೆದಿರುವ ವಾಜಿದ್ ಇತ್ತೀಚೆಗೆ ವಯಸ್ಸಿನ ಕಾರಣ ನೃತ್ಯ ಸಾಧ್ಯವಾಗುತ್ತಿಲ್ಲ, ಶರೀರ ಸ್ಥಿರರವಾಗುತ್ತಿಲ್ಲ, ಕೊಂಚ ನಡುಕ ಉಂಟಾಗಿದೆ. ಆದರೂ ತಮ್ಮ ೭೦ನೇ ವಯಸ್ಸಿನಲ್ಲೂ ಅಭಿನಯ ನೀಡುವ ವಿಶಿಷ್ಟ ಕಲಾವಿದ.

ವಾಜಿದ್,<br>
ಕಲಾವಿದರು, ಗಾಂಧಿನಗರ,<br>
ಅಂಜುಮನ್ ಎದುರು, ಚಳ್ಳಕೆರೆ.

## ಎಲ್. ಕೃಷ್ಣಪ್ಪ

ಕೃಷ್ಣಪ್ಪನವರು ಚಳ್ಳಕೆರೆ ತಾಲ್ಲೂಕು ಕಲಮರಹಳ್ಳಿಯವರು. ತಂದೆ ಲಿಂಗಪ್ಪನವರು, ತಾಯಿ ನಿಂಗಮ್ಮ. ಕಲಮರಹಳ್ಳಿಯಲ್ಲಿ ಚಿಕ್ಕೀರಪ್ಪನವರ ಕುಟುಂಬ ಎಂದರೆ ಅದೊಂದು ಸುಂಸ್ಕೃತ ಕಲೆ, ಸಾಹಿತ್ಯಗಳ ಆಶ್ರಯತಾಣವೆಂದೇ ಕರೆಯುತ್ತಿದ್ದರು. ೫೦೦ ಕುರಿಗಳ ಒಡೆಕಾರರು. ಜೋಡಿ ಬಂಡಿ ವ್ಯವಸಾಯಗಾರರು. ಲಿಂಗಪ್ಪ-ನಿಂಗಮ್ಮ ಅವರಿಗೆ ನಾಲ್ವರು ಗಂಡುಮಕ್ಕಳು, ಐವರು ಹೆಣ್ಣುಮಕ್ಕಳು. ಶ್ರೀ ಕೃಷ್ಣಪ್ಪನವರು ಇವರ ಎರಡನೇ ಮಗ. ಜನನ ೬-೭-೧೯೪೫ರಲ್ಲಿ ತಮ್ಮ ಆರನೇ ವಯಸ್ಸಿನಲ್ಲಿಯೇ ಪಂಢರಾಪುರಿ ಭಜನೆ ನೃತ್ಯಗಾರಿಕೆ, ಹಾಡುಗಳನ್ನು ಶಾಸ್ತ್ರೀಯವಾಗಿ ಗುರು ಕಳವೇಬಾಗಿ ಹನುಮಂತಪ್ಪನವರಿಂದ ಕಲಿಕೆ. ನಂತರ ಸೋಮನಕುಣಿತ, ಹರಿಗೆ ಕುಣಿಸುವುದು, ಮೂಡಲಮಣೇವು ಕುಣಿತಗಳನ್ನು ಏಳನೇ ವಯಸ್ಸಿನಿಂದಲೇ ಕಲಿತರು. ಕಳವೇಬಾಗಿಯ ಕೂಲಿಮಠದಲ್ಲಿ ಅಕ್ಷರಾಭ್ಯಾಸ. ಗುರು ವೀರಭದ್ರಯ್ಯ ಅವರು ಕಲಿಸಿದ ಮಾರ್ನಮಿ ಪೆಂಟಿಕೆ ಹಾಡುಗಳು, ಜನಪದ ಗೀತೆಗಳು ಕೋಲುಪದ, ಭಾಗವಂತಿಕೆ ಪದ, ದೇವರು ಕರೆಯುವ ಪದಕ್ಕೆ ಪ್ರೇರಕವಾಯಿತು.

ಮಾರ್ನಮಿ ಪದವೆಂದರೆ ಬಯಲುಸೀಮೆಯ ವಿಶಿಷ್ಟ ಕಲಾಪ್ರಕಾರ. ಹತ್ತಾರು ಹುಡುಗರು ಮನೆ ಮನೆಗೆ ಹೋಗಿ ಆ ಮನೆಯವರನ್ನು ಅವರ ಕುಲ, ಗೋತ್ರಗಳ ಘನತೆಯ ಬಗೆಗೆ ಹೇಳುವ ಪದದ ಮೂಲಕ ಹಿಮ್ಮೇಳ ಮುಮ್ಮೇಳವಾಗಿ ಹಾಡುವುದು. ಇದರಿಂದ ಹರ್ಷಗೊಂಡ ಆ ಮನೆಯವರು ದವಸ, ಹಣ ನೀಡುತ್ತಾರೆ. ಇದನ್ನು ದೇವಾಲಯದ ಲೆಕ್ಕಕ್ಕೆ ಒಪ್ಪಿಸುವುದು, ಗುರುಕಾಣಿಕೆ ನೀಡುವುದು, ಕೆಲವೊಮ್ಮೆ ಊರಲ್ಲಿ ಪರಾವು ಮಾಡುವುದು ಇದರ ಉದ್ದೇಶ. ಇಂಥ ಹಾಡುಗಾರಿಕೆ ಚಳ್ಳಕೆರೆ, ಹಿರಿಯೂರು, ಸಿರಾ, ಹೊಸದುರ್ಗ, ಹೊಳಲ್ಕೆರೆ ಭಾಗಗಳಲ್ಲಿ ವ್ಯಾಪಕವಾಗಿತ್ತು. ಇಂದು ಈ

ಪರಂಪರೆಯೇ ಇಲ್ಲದಂತಾಗಿದೆ. ತಮ್ಮ ೧೪ನೇ ವಯಸ್ಸಿನ ತನಕ ಮಾರ್ನಮಿ ಪೆಂಟಿಗೆ ಪದಗಳನ್ನು ಕೃಷ್ಣಪ್ಪ ಕಲಿತರು.

ಕಳವೇಬಾವಿಯಲ್ಲಿ ಪ್ರತಿವರ್ಷ ರೇವಣಸಿದ್ಧೇಶ್ವರ ಯಕ್ಷಗಾನ ಪ್ರಸಂಗವನ್ನು ಕಡ್ಡಾಯವಾಗಿ ಶ್ರಾವಣಮಾಸದಲ್ಲಿ ಪ್ರದರ್ಶಿಸಲೇಬೇಕೆಂಬ ನಿಯಮವಿತ್ತು. ಹಿರಿಯೂರು ತಾಲ್ಲೂಕಿನ ಕಳವೇಬಾವಿಯಲ್ಲಿ ಈ ಯಕ್ಷಗಾನ ಅಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿಯೇ ಅತ್ಯಂತ ಹೆಸರುವಾಸಿ ಕಲಾಪ್ರಕಾರವಾಗಿ ಪ್ರಸಿದ್ಧವಾಗಿತ್ತು. ಇದರಲ್ಲಿ ಪಾತ್ರಾಭಿನಯ ಮಾಡುತ್ತಿದ್ದ ಕಲಾವಿದರು, ಸರ್ಕಾರಿ ಉದ್ಯೋಗಿಗಳು, ಶಿಕ್ಷಕರು, ಕಾಲೇಜು ವಿದ್ಯಾರ್ಥಿಗಳು ಇರುತ್ತಿದ್ದರು. ಕೃಷ್ಣಪ್ಪನವರು ಮೈಸೂರಲ್ಲಿ ವ್ಯಾಸಂಗ ಮಾಡುತ್ತಿದ್ದರೂ ರೇವಣಸಿದ್ಧೇಶ್ವರನ ಪಾತ್ರಕ್ಕೆ ಸಿದ್ಧವಾಗಿ ಬಂದು ಅಭಿನಯ ಮಾಡುತ್ತಿದ್ದರು. ಕೃಷ್ಣಪ್ಪನವರಿಗೆ ಬಾಲ್ಯದಲ್ಲಿಯೇ ಜನಪದ ಕಲೆಗೆ ಪ್ರೇರಣೆ, ಪ್ರೋತ್ಸಾಹ ಎರಡನ್ನೂ ನೀಡಿದವರು ತಾತ ಚಿಕ್ಕೀರಪ್ಪ, ಇವರೊಂದಿಗೆ ಹುಡುಗನಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದವರು ವಾಡೇದ ಲಿಂಗಪ್ಪ, ಗೊಲ್ಲರ ಎತ್ತಪ್ಪ, ಗೌಡ್ರು ಗೋವಿಂದಪ್ಪ ಎಂದು ಆತ್ಮೀಯತೆಯಿಂದ ಸ್ಮರಿಸುವ ಕೃಷ್ಣಪ್ಪ ಮುಂದೆ ಪಿ.ಆರ್.ಟಿ. ಅವರ ಸಹವಾಸದಿಂದಾಗಿ ಮೈಸೂರಿನ ಜೆ.ಎಸ್.ಎಸ್. ಕಾಲೇಜಿನಲ್ಲಿ ಬಿ.ಎಸ್ಸಿ ತರಗತಿಗೆ ಸೇರಿದರು. ಅಲ್ಲಿನ ಕನ್ನಡ ಅಧ್ಯಾಪಕರು ಜೀಶಂಪ ಅವರ ಜನಪದ ಬೋಧನೆ ಪ್ರೇರಕವಾಗಿ ಹಾಡುವುದು, ಕುಣಿಯುವುದು ಕಲಮರಹಳ್ಳಿಯಿಂದ ಕಲಿತದ್ದು ಮೈಸೂರಿನ ವೇದಿಕೆಗಳಲ್ಲಿ ಸಮರ್ಪಕವಾಗಿ ಬಳಕೆಯಾಗಿ ಮುಂದೆ ಜಾನಪದ ಸಾಹಿತ್ಯ-ಕಲೆಯ ಬಗೆಗೆ ನನಗೆ ನಿಜವಾದ ಗೌರವ, ಬೆಳೆಯಲು ಪ್ರೇರಣೆಯಾಯಿತು ಎನ್ನುತ್ತಾರೆ.

ಕೃಷ್ಣಪ್ಪನವರು ಕಪಿಲೆಪದ, ಕಥನಗೀತೆ, ಮಳೆ ಕರೆಯುವ ಪದ, ಮೂಡಲಮಣೇವು ಪದಗಳನ್ನು ಹಾಡುತ್ತಾರೆ. ಲಾವಣಿ, ತ್ರಿಪದಿ, ಹಾಡು ಇವರಿಗೆ ಪ್ರಿಯವಾದ ಪ್ರಕಾರ.

ಜೀಶಂಪ, ಪಿಆರ್‌ಟಿ, ಕರಾಕೃ ಅವರನ್ನು ಚಿತ್ರದುರ್ಗ ಸೀಮೆಗೆ ಕರೆತಂದು ವಾರಗಟ್ಟಲೆ ಹಳ್ಳಿಮನೆಗಳಲ್ಲಿ ಇಟ್ಟುಕೊಂಡು ಜನಪದ ಗೀತೆ, ಕಾವ್ಯಸಂಗ್ರಹಕ್ಕೆ ವಕ್ತೃಗಳನ್ನು ಅಣಿಗೊಳಿಸಿ ಜನಪದ ಸಾಹಿತ್ಯ ಸಂಗ್ರಹಕ್ಕೆ ಕಾರಣವಾಗಿರುವುದು ವಿಶೇಷ. ಜೊತೆಗೆ ಚಿತ್ರದುರ್ಗ ಭಾಗದ ಹತ್ತಾರು ಕಲಾವಿದರನ್ನು ಮೈಸೂರು ದಸರಾ ವಸ್ತುಪ್ರದರ್ಶನ ವೇದಿಕೆಗೆ ಕರೆದೊಯ್ದು ಜನಪದ ಗೀತೆ, ಕುಣಿತ, ಕಾವ್ಯ ಪ್ರಕಾರವನ್ನು ಪರಿಚಯಿಸಿದ ಹಿರಿಮೆಯೂ ಇವರಿಗೆ ಸಲ್ಲುತ್ತದೆ.

ಪ್ರೌಢಶಾಲಾ ಅಧ್ಯಾಪಕರಾಗಿ ಶಾಲಾ ಪದವೀಧರ ಪರಿವೀಕ್ಷಕರಾಗಿ, ಕನ್ನಡ ಉಪನ್ಯಾಸಕರಾಗಿ ನಿವೃತ್ತರಾಗಿರುವ ಕೃಷ್ಣಪ್ಪ ತಮ್ಮ ಮಡದಿ ಶಿಕ್ಷಕಿ ಜಾನಕಮ್ಮ ಅವರೊಂದಿಗೆ

ತುಮಕೂರಲ್ಲಿ ನೆಲೆಸಿದ್ದರೂ ಚಿತ್ರದುರ್ಗ ಭಾಗದ ಗೊರವ ಕುಣಿತ, ಮೂಡಲಮಣೇವು, ಹರಿಗೆ ಕುಣಿತ, ಸೋಮನಕುಣಿತ, ಕೋಲುಮೇಳಗಳನ್ನು ಇಂದಿಗೂ ಏರ್ಪಡಿಸುತ್ತಾ ತಾವೂ ಅದೇ ಹುರುಪು ಉತ್ಸಾಹದಿಂದ ಕುಣಿಯುವುದು ಇವರ ಕಲಾವಂತಿಕೆಯ ಜೀವಂತ ರೂಪವಾಗಿದೆ. ಸ್ಮರಣ ಸಂಪುಟಗಳ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಎಲ್. ಕೃಷ್ಣಪ್ಪ,
ಕಲಮರಹಳ್ಳಿ, ಚಳ್ಳಕೆರೆ ತಾಲೂಕು.

## ತಿಪ್ಪನಾಯಕ

ತಿಪ್ಪನಾಯಕರು ಚಿತ್ರದುರ್ಗ ನಗರದವರು. ದೊಡ್ಡ ಗರಡಿಯ ಹಿರಿಯರು. ೮೦ ವರ್ಷಗಳನ್ನು ಪೂರೈಸಿರುವ ಇವರು ಮೈಸೂರು ಇವರು ಮೈಸೂರು ಮಹಾರಾಜರಿಂದಲೂ ಪಾಳೆಯಗಾರ ವೇಷದಲ್ಲಿ ಇನಾಮ್ ಪಡೆದವರು. ಜೊತೆಗೆ ಚಿತ್ರದುರ್ಗ ಪರಿಸರದಲ್ಲಿ ಪಾಳೆಯಗಾರರ ವೇಷ ಕಲೆಯನ್ನು ಪರಂಪರಾಗತವಾಗಿ ಪ್ರಸಾರ ಮಾಡುತ್ತಿದ್ದಾರೆ. ಇದಕ್ಕಾಗಿ ನವಭಾರತ ತರುಣ ಕಲಾಸಂಘವನ್ನು ೧೯೬೦ರ ಸಂದರ್ಭದಲ್ಲಿ ಆರಂಭಿಸಿದರು. ಈ ಸಂಘದ ಮೂಲಕ ಒಂದು ನೂರಕ್ಕೂ ಹೆಚ್ಚು ಪಾಳೆಯಗಾರರನ್ನು ತಯಾರಿಸಿದ ಹಿರಿಮೆಯೂ ಇವರದು. ಪಾಳೆಯುಗಾರಿಕೆ ವೇಷದಲ್ಲಿ ಮೈಸೂರು ದಸರಾ, ಜನಪದ ಜಾತ್ರೆ, ಸಂಸ್ಕೃತಿ ಉತ್ಸವ, ವಿವಿಧ ಸಾಂಸ್ಕೃತಿಕ ಉತ್ಸವಗಳಲ್ಲಿ ಆಹ್ವಾನಿತ ಕಲಾವಿದರಾಗಿ ಕಾರ್ಯನಿರ್ವಹಣೆ ಇವರ ವಿಶೇಷವಾಗಿದೆ.

ಪಾಳೆಗಾರಿಕೆ ಮೂಲ ವೇಷಭೂಷಣ, ದಪ್ಪ ಮೀಸೆ, ಬಲಕ್ಕೆ ಬಲವಾದ ಬಟ್ಟೆಯ ಗಂಟು, ಕೈಯಲ್ಲಿ ಕತ್ತಿ ಅಥವಾ ಬಲವಾದ ಕೋಲು, ಚಡ್ಡಿಯನ್ನು ಬಿಟ್ಟು ಉಳಿದಂತೆ ಬರಿ ಮೈ, ಮೈಗೆಲ್ಲಾ ಎಣ್ಣೆ ಮಿಶ್ರಿತ ಕಪ್ಪು ಬಣ್ಣವನ್ನು ಬಳಿದುಕೊಂಡು ಎರಡು ತೋಳುಗಳಿಗೂ ಬಲವಾಗಿ ಬಿಗಿದ ಬಟ್ಟೆಯ ಬಿಗಿ ಹಿಡಿತ ಇದು ಪಾಳೆಯಗಾರಿಕೆಯ ವೇಷಭೂಷಣ. ಕೆಲವೊಮ್ಮೆ ದಪ್ಪ ಮೀಸೆಯ ಬಿಗಿ ಹಿಡಿತ ಇದು ಪಾಳೆಯಗಾರಿಕೆಯ ವೇಷಭೂಷಣ. ಕೆಲವೊಮ್ಮೆ ದಪ್ಪ ಮೀಸೆಯ ಮೇಲೆ ನಿಂಬೆಹಣ್ಣು ನಿಲ್ಲಿಸಿಕೊಳ್ಳುವ ಸಂದರ್ಭವೂ ಉಂಟು. ನೋಡಿದ ಕೂಡಲೇ ಭಯಪಡುವ ವೇಷದಲ್ಲಿ ಪಾಳೆಗಾರ ಆ ಕಡೆ ಈ ಕಡೆ ನೋಡುತ್ತಾ, ಕಣ್ಣು ತಿರುವುತ್ತಾ ಕೈಯಲ್ಲಿ ಹಿಡಿದ ಕೋಲಿನಿಂದ ಬಡಿಯುತ್ತಾ ತಮಟೆಯ ಅಥವಾ ಬೇರೆ ಬೇರೆ ವಾದ್ಯಗಳಿಗೆ ತಕ್ಕನಾಗಿ ನರ್ತಿಸುತ್ತಾ, ಆವೇಶಭರಿತವಾಗಿ ಬರುವುದು ನೋಡುಗರಲ್ಲಿ ಭಯಮಿಶ್ರಿತ ಕುತೂಹಲ ಮೂಡಿಸುತ್ತದೆ.

ಇಂಥ ಕಲೆ ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲವಾಗುತ್ತಿದೆ. ಈ ಬಗೆಯ ಇಲ್ಲವಾಗುತ್ತಿರುವ ಕಲೆಯನ್ನು ನಿರಂತರವಾಗಿ ಬಳಸುತ್ತ, ತಾವೂ ಕಲಾವಿದರಾಗಿ ಪ್ರದರ್ಶನ ನೀಡುತ್ತಿರುವುದು ಅಪರೂಪದ ಪ್ರಸಂಗವಾಗಿದೆ. ಇದಕ್ಕೆ ತಮ್ಮ ನವಭಾರತ ತರುಣ ಕಲಾಸಂಘವನ್ನೇ ತಮ್ಮೆಲ್ಲ ಚಟುವಟಿಕೆಗಳ ಕೇಂದ್ರವಾಗಿಸಿಕೊಂಡಿರುವುದು ಇವರ ವಿಶೇಷ. ಚಿತ್ರದುರ್ಗದ ಕೋಟೆ ಕೊತ್ತಲಗಳ ಸಂರಕ್ಷಣೆ, ಅರಸರ ಸ್ಮಾರಕ, ಆಭರಣ–ಉಡುಪು, ಆಯುಧ ಮತ್ತಿತರ ವಸ್ತುಗಳ ಸಂರಕ್ಷಣೆ ಈ ಮೂಲಕ ಪಾಳೆಯಗಾರ ವಂಶದ ಪುನರ್ ಚೇತನದ ಒಲವು ನಿಲುವುಗಳ ಬಗೆಗೆ ವ್ಯಾಪಕ ಕನಸು ಮತ್ತು ಆ ದಿಸೆಯಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡಿರುವ ತಿಪ್ಪನಾಯಕರು ಪಾಳೆಯಗಾರರ ಕಲೆಯ ಸಮರ್ಥ ಕಲಾವಿದರು.

ತಿಪ್ಪನಾಯಕ,<br>ಪಾಳೆಯಗಾರರು,<br>ದೊಡ್ಡಗರಡಿ, ಚಿತ್ರದುರ್ಗ.

## ಕೆಂಚಜ್ಜಿ

ಚಿತ್ರದುರ್ಗದ ಹಿರಿಯ ಜನಪದ ಕಲಾವಿದರಲ್ಲಿ ಕೆಂಚಜ್ಜಿ ಒಬ್ಬರು. ತೊಂಬತ್ತೈದಕ್ಕೂ ಹೆಚ್ಚು ವಯೋಮಿತಿಯ ಈ ಕಲಾವಿದೆಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ತಿರುಗಾಟವೂ ಅಷ್ಟಕ್ಕಷ್ಟೆ. ಆದರೆ ಹಾಡುವ ಸ್ವರ ಮಾಸಿಲ್ಲ. ಲಯಹಿಡಿದು ಹಾಡುವ, ಧಾಟಿ ತಪ್ಪಿದರೆ ತಕ್ಷಣ ಎಚ್ಚರಿಸುವ ಕಸುಬುದಾರಿ ಹಾಡುಗಾರಿಕೆಯ ಗುರುಸ್ಥಾನದಲ್ಲಿದ್ದಾರೆ. ಕೆಂಚಜ್ಜಿ ಹುಟ್ಟಿದ್ದು ಹೊಸದುರ್ಗ ತಾಲ್ಲೂಕು ದೇವಿಕೆರೆ ಗ್ರಾಮದಲ್ಲಿ. ತಂದೆ ಕರಿಯಪ್ಪ, ತಾಯಿ ಗಂಗಮ್ಮ. ಆದಿಕರ್ನಾಟಕ ಜನಾಂಗದವರು. ತಮ್ಮ ಹತ್ತನೇ ವಯಸ್ಸಿಗೆ ಮದುವೆ. ಚಿತ್ರದುರ್ಗದ ಕೆಳಕೋಟೆ ವಾಸಿ ತಿಮ್ಮಣ್ಣನವರಿಗೆ ಕೂಲಿ ಕೆಲಸ. ಇವರಿಗೆ ಮೂವರು ಮಕ್ಕಳು. ೨ ಗಂಡು ೧ ಹೆಣ್ಣು. ತಾವು ಬಾಲ್ಯದಲ್ಲಿಯೇ ಬೆಲಗೂರು, ಹಾಲುರಾಮೇಶ್ವರ ದೇವಾಲಯಗಳ ಆರತಿ ಉತ್ಸವ, ಜಾತ್ರೆಯ ಕಾಲದಲ್ಲಿ ಹಾಡುತ್ತಿದ್ದ ಹಾಡು, ರೈತಾಪಿ ಕೆಲಸದಲ್ಲಿ ಗೊಲ್ಲರ ರಾಮಜ್ಜಿ, ಗಂಗಮ್ಮಜ್ಜಿ ಹಾಡುತ್ತಿದ್ದ ಸೋಬಾನೆ, ಕುಟ್ಟುವ-ಬೀಸುವ ಪದ, ಧಾಟಿ ನನಗೆ ಅಪಾರ ಪ್ರಭಾವ ಬೀರಿತು. ನನ್ನ ತವರುಮನೆಯಲ್ಲಿಯೂ ತಾಯಿ ಗಂಗಮ್ಮ ಜನಪದ ಹಾಡುಗಳನ್ನು ರಾಗಿ ಬೀಸುವಾಗ ನಮ್ಮ ಜನಾಂಗದವರ ಮದುವೆ ಸಂದರ್ಭದಲ್ಲಿ ಆಹ್ವಾನಿತ ಕಲಾವಿದೆಯಾಗಿ ಹಾಡುತ್ತಿದ್ದ ರೀತಿ ನನ್ನ ಮೇಲೆ ವಿಶೇಷ ಪ್ರಭಾವ ಬೀರಿತು ಎಂದು ಹೇಳುವ ಕೆಂಚಜ್ಜಿ ಚಿತ್ರದುರ್ಗದಲ್ಲೂ ಅಂಥದ್ದೇ ಪರಿಸರ, ಬೋವಿ ಜಯಮ್ಮ, ಚಿಕ್ಕಹನುಮಕ್ಕ, ಇವರ ಹಾಡುಗಾರಿಕೆಯೂ ನನ್ನಲ್ಲಿನ ಹಾಡುಗಾರಿಕೆಗೆ ಬಲ ತಂದಿತು ಎನ್ನುತ್ತಾರೆ.

ಕೆಂಚಜ್ಜಿ ಕೊಂಚ ಭಿನ್ನವಾಗಿ ಹಾಡುತ್ತಾರೆ. ಜೋಕುಮಾರಸ್ವಾಮಿ, ಸಂಗ್ಯಾ-ಬಾಳ್ಯ ನಾಟಕಗಳ ಹಾಡುಗಳನ್ನು ಸೊಗಸಾಗಿ ಹಾಡುತ್ತಾರೆ. ಇಂದು ಈ ಎರಡೂ ನಾಟಕಗಳಾಗಿರ ಬಹುದು. ಮೂಲದಲ್ಲಿ ಜನಪದರ ಬಾಯಲ್ಲಿ ಈ ಕಾವ್ಯ ಹೇಗಿತ್ತು

ಎಂಬುದಕ್ಕೆ ಅತ್ಯಂತ ನಿದರ್ಶನವಾಗಿ ಕೆಂಚಜ್ಜಿಯ ಹಾಡುಗಾರಿಕೆ ನಮ್ಮ ಮುಂದಿದೆ. ಇದಲ್ಲದೆ ಗುಣಸಾಗರಿ, ಮದುಗದ ಕೆಂಚಮ್ಮ, ಉತ್ತರಾದೇವಿ, ಗೌರಸಂದ್ರದ ಮಾರಕ್ಕ, ಗುಂಟನೂರು ದ್ಯಾಮಕ್ಕ, ಕೆಂಚಮ್ಮ ಈ ಮುಂತಾದ ಶಕ್ತಿದೇವತೆಗಳ ಬಗೆಗೆ ಉತ್ಸುಕತೆಯಿಂದ ಹಾಡುವುದು ಇವರ ವಿಶೇಷ. ಕುಟ್ಟುವ–ಬೀಸುವ ಪದಗಳ ಜೊತೆಗೆ ಕೃಷಿ ಕಾಯಕದ ವೈವಿಧ್ಯ ಹಾಡುಗಳ ಕಣಜವಾಗಿರುವ ಕೆಂಚಜ್ಜಿ ನಿಬ್ಬೆರಗಾಗಿಸುವ ಅಪರೂಪದ ಕಲಾವಿದೆ. ಭದ್ರಾವತಿ, ಚಿತ್ರದುರ್ಗ ಹೊಸಪೇಟೆ ಆಕಾಶವಾಣಿಯಲ್ಲಿ ಇವರು ಹಾಡಿರುವ ಪದಗಳು ೧೯೬೦ರಿಂದಲೂ ಪ್ರಸಾರವಾಗಿವೆ. ಚಿತ್ರದುರ್ಗದ ಮುರುಘಾಮಠದ ಖಾಯಂ ಆಹ್ವಾನಿತ ಕಲಾವಿದೆಯೂ, ಸಿರಿಗೆರೆ ಮಠದಲ್ಲಿ ಸೋಬಾನೆ ಹಾಡುಗಾರಿಕೆಗೆ ವಿಶೇಷ ಸನ್ಮಾನಕ್ಕೆ ಪಾತ್ರವೂ ಆಗಿದ್ದಾರೆ.

---

ಕೆಂಚಜ್ಜಿ,<br>
ಸಿ. ಕೆ. ಪುರ, ಚಿತ್ರದುರ್ಗ.

## ಬೊಮ್ಮಲಿಂಗಪ್ಪ

ಖಡ್ಗದಪದ, ವೀರಗಾಸೆ, ಕೋಲುಮೇಳ, ಜನಪದ ಸಂಗೀತ, ಯಕ್ಷಗಾನ ಕಾರ್ಯಕ್ರಮ ನಿರೂಪಣೆ, ಶಿವನಾಮಾವಳಿ ನಿರೂಪಣೆ ಈ ಎಲ್ಲ ಪ್ರಕಾರಗಳಲ್ಲಿ ಹೆಸರು ಮಾಡಿರುವ ಬೊಮ್ಮಲಿಂಗಪ್ಪ ಹೊಸದುರ್ಗ ತಾಲ್ಲೂಕು ಮತ್ತೋಡು ಗ್ರಾಮದವರು.

ಬಿ.ಎ. ಪದವೀಧರರೂ ಆಗಿರುವ ಈ ಕಲಾವಿದ ಮತ್ತೋಡು ಗ್ರಾಮದಲ್ಲಿ ವೀರಗಾಸೆ ತಂಡವನ್ನು ಕಟ್ಟಿ ಸಮರ್ಥವಾಗಿ ಬೆಳೆಸುತ್ತಿದ್ದಾರೆ. ಅಲ್ಲದೆ ಚಮ್ಮೇಳ ವಾದ್ಯ ನುಡಿಸುವುದು, ಖಡ್ಗದ ಪದಗಳನ್ನು ಹೇಳುವುದು, ವಚನ ಹಾಡುವುದೂ ಸೇರಿದಂತೆ ಗ್ರಾಮವೊಂದರ ಜನಪದ ಐತಿಹ್ಯವನ್ನು ಆಧರಿಸಿ ವಚನ ರೂಪದಲ್ಲಿ ಅಳವಡಿಸಿಕೊಂಡು ಹಾಡುವುದು, ನಿರೂಪಿಸುವುದು ಇವರ ವಿಶೇಷವಾಗಿದೆ.

ಗೌರಾಪುರ, ಶ್ಯಾನುಭೋಗನಹಳ್ಳಿ, ಅಜ್ಜಂಪುರಗಳಲ್ಲಿ ವೀರಗಾಸೆಯ ವಿಶೇಷ ತರಬೇತಿ ಪಡೆದು ತಮ್ಮ ತಂಡವನ್ನು ಸಮರ್ಥವಾಗಿ ಬೆಳೆಸಿರುವುದು, ಆ ತಂಡದೊಂದಿಗೆ ತಾವೂ ಭಾಗವಹಿಸುತ್ತಾ ಯುವಕ ಸಂಘ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಕರ್ಷಕ ಕಾರ್ಯಕ್ರಮ ನೀಡುವುದು ಇವರ ಹವ್ಯಾಸಿ ಬದುಕಾಗಿದೆ. ರಂಭಾಪುರಿ ಮಠದ ರೇಣುಕಾ ಶಿವಾಚಾರ್ಯ ಸ್ವಾಮಿಗಳ ಬಗೆಗೂ ವಚನ ರಚಿಸಿ ವೀರಗಾಸೆಗೆ ಅಳವಡಿಸಿಕೊಂಡು ಹಾಡುವ ಇವರ ಕೈಚಳಕ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗುತ್ತಿದೆ.

ಧಾರವಾಡದಲ್ಲಿ ಜರುಗಿದ ಯುವಜನಮೇಳ, ಸಿಂಧನೂರಿನಲ್ಲಿ ನಡೆದ ಯುವಜನೋತ್ಸವ ಗಳಲ್ಲಿ ಇವರ ನಿರ್ದೇಶನದ ವೀರಗಾಸೆ ತಂಡಕ್ಕೆ ಬಹುಮಾನ ಬಂದಿದೆ. ಹೆಣ್ಣುಮಕ್ಕಳನ್ನು ಸಂಘಟಿಸಿ ಅವರಿಗೆ ಖಡ್ಗದಪದ, ಲಯ, ಕುಣಿತದ ಜೊತೆಗೆ ಚಮ್ಮೇಳವಾದ್ಯ ನುಡಿಸುವುದನ್ನೂ ತರಬೇತಿಯ ಮೂಲಕ ನೀಡಿ, ಹೆಣ್ಣುಮಕ್ಕಳನ್ನು ಕಲೆಯ ಮುಖ್ಯವಾಹಿನಿಗೆ ಕರೆತಂದ ಹಿರಿಮೆಗೂ ಪಾತ್ರರಾಗಿದ್ದಾರೆ.

**ಬೊಮ್ಮಲಿಂಗಯ್ಯ, ಮತ್ತೋಡು, ಹೊಸದುರ್ಗ ತಾಲೂಕು.**

## ಕೊಟ್ರಪ್ಪ

ಕೊಟ್ರಪ್ಪನವರು ನಂದಿಧ್ವಜ ಕುಣಿತ ಕಲೆಯ ಹಿರಿಯ ಕಲಾವಿದರು. ೬೫ ವರ್ಷ ವಯಸ್ಸಿನ ಈ ಕಲಾವಿದ ವೀರಭದ್ರೇಶ್ವರ ನಂದಿಕೋಲು ಕುಣಿತ ಕಲಾವಿದರ ಒಕ್ಕೂಟವನ್ನು ಚಿತ್ರದುರ್ಗದಲ್ಲಿ ಸ್ಥಾಪಿಸಿ, ನಂದಿಧ್ವಜ, ನಂದಿಕೋಲು, ಖಡ್ಗ ಕುಣಿತ, ಗೊರವರ ಕುಣಿತ ಕಲಾವಿದರ ಸಂಘಟನೆಗೆ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಮ್ಮೇಳ, ಸೋಬಾನೆ, ಭಜನಾ ತಂಡಗಳನ್ನು ಸಂಘಟಿಸಿರುವ ಕೊಟ್ರಪ್ಪ ಪ್ರಮುಖ ಧಾರ್ಮಿಕ ಸಭೆ, ಜಾತ್ರೆ, ಸಮಾರಂಭಗಳಲ್ಲಿ ತಪ್ಪದೆ ಭಾಗವಹಿಸುತ್ತಾ ಕಳೆದ ೩೦ ವರ್ಷಗಳಿಂದಲೂ ಪರಂಪರಾಗತವಾಗಿ ಕಲೆ ಪ್ರಸಾರದಲ್ಲಿ ತೊಡಗಿದ್ದಾರೆ. ಕಲೆಯನ್ನು ವೃತ್ತಿಯಾಗಿಸಿಕೊಂಡು ಕಾಯಕ ಮಾಡುತ್ತಿರುವ ರುದ್ರಪ್ಪ, ಕೊಟ್ರಪ್ಪ, ದೂರದ ಹರಪ್ಪನಹಳ್ಳಿ, ಕೂಡ್ಲಿಗಿಗಳಲ್ಲೂ ನಂದಿಧ್ವಜ ಕುಣಿತದ ಕಲಾವಿದರಿಗೆ ತರಬೇತಿ ನೀಡಿ ಕಲಾಪ್ರಕಾರವನ್ನು ಬೆಳೆಸಿರುವುದು ಇವರ ವಿಶೇಷವಾಗಿದೆ.

ಮುರುಘಾಮಠದ ಹಿರಿಯ ಶ್ರೀಗಳ ಮೂಲಕ ಧ್ವಜಸಿದ್ಧತೆ, ಅಲಂಕಾರ, ಕುಣಿತದ ಮಟ್ಟುಗಳನ್ನು, ಇದಕ್ಕೆ ಪೂರಕವಾಗಿ ಚಮ್ಮೇಳ ನುಡಿಸುವುದನ್ನು ಕಲಿತರು. ಮೊದಮೊದಲು ಮುರುಘಾಮಠದ ಧಾರ್ಮಿಕ ಸಮಾರಂಭಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ ನಂದಿಕೋಲು ಕುಣಿತ ಇಂದು ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ, ಹರ್ತಿಕೋಟೆ ವೀರಭದ್ರ ದೇವರ ಜಾತ್ರೆ, ಹಿರಿಯೂರು ತೇರುಮಲ್ಲೇಶ್ವರ ಜಾತ್ರೆ, ಸಿರಿಗೆರೆ, ಸಾಣೆಹಳ್ಳಿಗಳ ಜಾತ್ರಾ ಉತ್ಸವ, ಜಾನಪದ ಸಮಾರಂಭಗಳಲ್ಲಿ ಭಾಗವಹಿಸಿ ಕ್ರಮವಾಗಿ ಕಾರ್ಯಕ್ರಮ ನೀಡುತ್ತಿರುವುದು ಇವರ ಹೆಚ್ಚುಗಾರಿಕೆ. ಕೊಟ್ರಪ್ಪನವರ ಜೊತೆಗೆ ಹತ್ತು ಜನರ ತಂಡವಿದೆ. ವೇಷಭೂಷಣದ ತೊಡುಗೆ, ಆಕರ್ಷಕ ಚಮ್ಮೇಳವಾದ್ಯ ನುಡಿಸುವ ಕಲಾವಂತಿಕೆ, ಕೇಳುವ ನೋಡುಗರನ್ನು ವಿಶೇಷವಾಗಿ ರಂಜಿಸುತ್ತದೆ. ಈ ಹತ್ತು ಜನರ

ತಂಡದಲ್ಲಿ ವಾದ್ಯ ನುಡಿಸುವ, ನಂದಿಧ್ವಜ ಕುಣಿಸುವ ಎರಡೂ ಕಲೆಯ ಕಲೆಗಾರಿಕೆ ಇವರಿಗೆ ಸಿದ್ಧಿಸಿದೆ.

ಚಾಮರಾಜನಗರದ ಮಲೆಮಹದೇಶ್ವರ ಜಾತ್ರೆ, ಸುತ್ತೂರು ಮಠದ ಜಾತ್ರಾ ಕಾರ್ಯಕ್ರಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸುವ ಹಂಪಿ ಉತ್ಸವ, ಅಕಾಡೆಮಿ ಏರ್ಪಡಿಸಿದ ಜನಪದ ಕಲಾಮೇಳ, ಗಡಿನಾಡ ಉತ್ಸವಗಳಲ್ಲಿ ಇವರು ಆಹ್ವಾನಿತ ಕಲಾವಿದರಾಗಿ ಭಾಗವಹಿಸಿದ್ದಾರೆ. ೬೫ ವರ್ಷದ ಕೊಟ್ರಪ್ಪ ತನ್ನ ತಂದೆಯ, ತಾತನ ಕಾಲದಿಂದ ಧಾರ್ಮಿಕ ಕಲೆಯಾಗಿ ನಂದಿಧ್ವಜವನ್ನು ಕುಣಿಸುತ್ತಾ ಬಂದಿದ್ದಾರೆ. ದೂರದ ಊರುಗಳಿಗೆ ಧ್ವಜ ಸಾಗುವುದು ಕಷ್ಟವಾದ್ದರಿಂದ ಈ ಕಲೆಯ ಪ್ರಸಾರ, ಪ್ರದರ್ಶನ ಕಷ್ಟ, ಪ್ರಚಾರವೂ ಕಡಿಮೆ ಎಂಬ ಕೊರಗನ್ನು ತೋಡಿಕೊಳ್ಳುತ್ತಾರೆ.

**ಕೊಟ್ರಪ್ಪ,**
**ನಂದಿಧ್ವಜ ಕಲಾಸಂಘ,**
**ಎಸ್.ಆರ್. ಮಿಲ್ ಹಿಂಭಾಗ, ಚಿತ್ರದುರ್ಗ.**

# ಶರಣಯ್ಯ

ಶರಣಯ್ಯನವರು ಗೊರವರ ಕಲೆಯ ಪ್ರಮುಖ ಕಲಾವಿದರು. ಚಿತ್ರದುರ್ಗ ತಾಲ್ಲೂಕು ದೊಡ್ಡಸಿದ್ದವ್ವನಹಳ್ಳಿಯವರಾದ ಇವರು ಗೊರವರ ಕಲೆಯ ಪರಂಪರಾಗತ ಮನೆತನ. ತಾತ ಮೈಲಾರಯ್ಯ, ತಂದೆ ಲಿಂಗಯ್ಯ, ಮಗ ಶರಣಯ್ಯ ಎಲ್ಲರೂ ಗೊರವರೇ. ಶರಣಯ್ಯ ಅವರಿಗೆ ಇದೀಗ ೭೦ ವರ್ಷ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಈ ಕಲಾವಿದ ಕೃಷಿ, ಕೂಲಿ ಬದುಕಿನಲ್ಲೇ ಇಡೀ ಬದುಕು ಸವೆಸಿದವರು. ಧಾರ್ಮಿಕ, ಹವ್ಯಾಸಿ ಹಾಗೂ ವೃತ್ತಿ ಈ ಮೂರೂ ಪರಂಪರೆಯಲ್ಲಿ ಗೊರವರ ಕಲೆಯನ್ನು ಪ್ರಸಾರ ಮಾಡುತ್ತಿರುವುದು ಇವರ ವಿಶೇಷ.

ಮೈಲಾರಲಿಂಗ ಕರ್ನಾಟಕ ಬಹು ಭಕ್ತರನ್ನು ಒಳಗೊಂಡ ದೈವ. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಸಮೀಪದ ಮೈಲಾರ ಈ ದೇವರ ಮೂಲನೆಲೆ. ದಕ್ಷಿಣಭಾರತದಲ್ಲಿಯೇ ಹೆಚ್ಚು ಜನ ಕಲೆಯುವ ಮೈಲಾರ ಜಾತ್ರೆ ಕಾರಣಿಕೋತ್ಸವ ತುಂಬಾ ಪ್ರಸಿದ್ಧವಾದುದು. ಪರಿಜನರಿಂದ ಹಿಡಿದು ವೈಶ್ಯರು, ವೀರಶೈವರು, ಬ್ರಾಹ್ಮಣರವರೆಗೆ ಬಹು ಜನಾಂಗವನ್ನು ಭಕ್ತರನ್ನಾಗಿಸಿಕೊಂಡ ಹಿನ್ನೆಲೆಯೂ ಮೈಲಾರಲಿಂಗ ದೇವರಿಗೆ ಸಲ್ಲುತ್ತದೆ. ಮೈಲಾರಲಿಂಗನ ಭಕ್ತರು ಅಥವಾ ಶಿಷ್ಯರೇ ಗೊರವಯ್ಯ.

ಗೊರವರದು ಒಂದು ಕಲೆಯೂ ಹೌದು, ಒಂದು ಆಚರಣೆಯೂ ಹೌದು. ಕೈಯಲ್ಲಿ ಡಮರುಗ, ತುಟಿಯಲ್ಲಿ ಕೊಳಲು, ಉದ್ದನೆಯ ಕಂಬಳಿ ನಿಲುವಂಗಿ, ಕವಡೆ ಸರ, ತಲೆಯ ಮೇಲೆ ಕರಡಿ ಟೋಪಿ, ಹಣೆಗೆ ಭಂಡಾರದ ಭಸ್ಮ, ವಿಭೂತಿ, ಬಲಬದಿಗೆ ಊಟದ ತಟ್ಟೆ ದೋಣಿ, ಎಡಬದಿಗೆ ಭಂಡಾರದ ಚೀಲ, ನೋಡಿದ ಕೂಡಲೇ ಹೆದರುವ ಪರಿಸ್ಥಿತಿ, ವೇಷಭೂಷಣ. ಈ ಬಗೆಯ ವೇಷದಗಲದಲಿ ಮೈಲಾರಲಿಂಗನ

ಮಹಿಮೆಯನ್ನು ಹಾಡುತ್ತಾ, ನಾಮಾವಳಿ ಸಾರುತ್ತ ಬರುವುದು ಗೊರವರ ಕಾಯಕ. ಭಕ್ತರು ಈ ಬಗೆಯ ಗೊರವನ್ನು ಶಿವನೇ ಮನೆಗೆ ಬಂದಂತೆ ಪ್ರೀತಿ ಗೌರವಗಳಿಂದ ಬರಮಾಡಿಕೊಳ್ಳುತ್ತಾರೆ. ದೀಕ್ಷಾಬದ್ಧರಾಗಿರುವ ಗೊರವರು ಎಲ್ಲ ಕಡೆಯೂ ಲಭ್ಯವಿಲ್ಲ. ಚಿತ್ರದುರ್ಗದ ಮಾಳಮ್ಮನವಳ್ಳಿ, ಹರ್ತಿಕೋಟೆ, ಧರ್ಮಪುರ, ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಳ್ಳಿ, ಹೊಸದುರ್ಗ, ತಾಳೀಕಟ್ಟೆ ಮೊದಲಾದ ಕಡೆಗಳಲ್ಲಿ ಕಂಡುಬರುತ್ತಾರೆ. ಇವರಲ್ಲಿ ಬಹುತೇಕ ಗೊರವರು ದೀಕ್ಷಾಗುರುವಾಗಿ ಮಾತ್ರ ಭಕ್ತರ ಮನೆಯ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಕಲಾವಿದರಾಗಿರುವರು ಅಪರೂಪ.

ಸಿದ್ದವ್ವನಹಳ್ಳಿಯ ಶರಣಪ್ಪ ಇದೇ ಪರಂಪರೆಯ ವಿಶಿಷ್ಟ ಕಲಾವಿದರು. ತಮ್ಮ ೭೦ ವರ್ಷಗಳ ದೀರ್ಘ ಬದುಕಿನಲ್ಲಿ ನೂರಕ್ಕೂ ಹೆಚ್ಚು ಶಿಷ್ಯರನ್ನು ತಯಾರಿಸಿರುವ ಹಿರಿತನ ಇವರದು. ಈ ಧಾರ್ಮಿಕ ಕಲೆಯನ್ನು ಜಿಲ್ಲೆಯಾದ್ಯಂತ, ನಾಡಿನ ಹಲವು ಮಹತ್ವದ ವೇದಿಕೆಗಳಲ್ಲೂ ಗೊರವ ಕಲೆಯನ್ನು ಜಿಲ್ಲೆಯಾದ್ಯಂತ, ನಾಡಿನ ಹಲವು ಮಹತ್ವದ ವೇದಿಕೆಗಳಲ್ಲೂ ಗೊರವ ಕಲೆಯನ್ನು ಪ್ರದರ್ಶನದ ಹಿರಿಮೆಗೆ ಪಾತ್ರರಾಗಿದ್ದಾರೆ. ಒಂಟಿಯಾಗಿ ಕಲಾಪ್ರದರ್ಶನ ನೀಡುವುದು ಇಲ್ಲಿ ಸಾಧ್ಯವಿಲ್ಲ. ಹಾಗಾಗಿ ಶರಣಯ್ಯ ಅವರೊಂದಿಗೆ ಹತ್ತು ಜನರ ಒಂದು ತಂಡವಿದೆ. ಚಂದ್ರಪ್ಪ, ನಿಂಗಪ್ಪ, ಮೈಲಾರಯ್ಯ, ಚನ್ನಯ್ಯ ಮೊದಲಾದ ದೀಕ್ಷೆ ಗುರುಗಳು ಸೇರಿ ಒಂದು ಕಲಾ ತಂಡವನ್ನು ರಚಿಸಿಕೊಂಡಿದ್ದಾರೆ.

ಚಿತ್ರದುರ್ಗದ ಮುರುಘಾಮಠ, ತರಳಬಾಳಮಠ, ಸಿರಿಗೆರೆ ಇಲ್ಲಿ ಮೊದಮೊದಲು ಕಾರ್ಯಕ್ರಮ ನೀಡುತ್ತಿದ್ದರು. ಮುಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಸಹಕಾರದಲ್ಲಿ ರಾಜ್ಯಾದ್ಯಂತ ಹಲವು ಪ್ರತಿಷ್ಠಿತ ವೇದಿಕೆಗಳಲ್ಲಿಯೂ ಕಲಾ ಪ್ರದರ್ಶನ ನೀಡಿರುವ ಹಿರಿಮೆಗೆ ಪಾತ್ರರಾಗಿದ್ದಾರೆ. ಹಂಪಿ ಉತ್ಸವ, ದುರ್ಗೋತ್ಸವ, ದಾವಣಗೆರೆ ಜಿಲ್ಲಾ ಉತ್ಸವ, ಜನಪದ ಅಕಾಡೆಮಿಯವರು ನಡೆಸಿದ ಹರ್ತಿಕೋಟೆಯ ಜನಪದ ಕಲಾಮೇಳ, ಪರಶುರಾಮಪುರದಲ್ಲಿನ ಗಡಿನಾಡ ಜಾನಪದ ಕಲಾಮೇಳಗಳಲ್ಲಿ ಇವರು ಭಾಗವಹಿಸಿ ಪ್ರದರ್ಶನ ನೀಡಿದ್ದಾರೆ.

ಗೊರವರ ಶರಣಪ್ಪ,<br>ದೊಡ್ಡಸಿದ್ದವನಹಳ್ಳಿ, ಚಿತ್ರದುರ್ಗ ತಾಲೂಕು.

## ಹೆಚ್. ರಂಗಸ್ವಾಮಿ

ರಂಗಸ್ವಾಮಿ ಅವರು ಹೊಸದುರ್ಗದ ಸಮೀಪದ ಹುಲ್ಲುಕಟ್ಟೆ ಗ್ರಾಮದವರು. ತಂದೆ ಹನುಮಂತಪ್ಪನವರು ಕಲಾವಿದರು, ತಾಯಿ ಮುದ್ದಮ್ಮನವರು. ಇವರಿಗೆ ಜನಿಸಿದ ಐದು ಜನ ಮಕ್ಕಳಲ್ಲಿ ಮೂವರು ಹೆಣ್ಣು, ಎರಡು ಗಂಡು. ರಂಗಸ್ವಾಮಿ ಅವರು ಮೊದಲನೆಯ ಮಗ. ಹನುಮಂತಪ್ಪನವರು ಯಕ್ಷಗಾನ, ಹಾಡುಗಾರಿಕೆ, ತತ್ವಪದ, ಭಾಗವಂತಿಕೆ ಪದ, ಕೋಲು ಮೇಳದಲ್ಲಿ ಹೆಸರು ಮಾಡಿದ ಕಲಾವಿದರು. ರಾತ್ರಿ ಪೂರಾ ಕುಳಿತು ತತ್ವಪದ ಹಾಡುತ್ತಾರೆ. ಬೆಳದಿಂಗಳ ರಾತ್ರಿ ಪೂರಾ ಕೋಲುಮೇಳ ಮಾಡುವುದು ಈ ಕುಟುಂಬದ ಪರಂಪರಾಗತ ಕಲೆಯಾಗಿದೆ. ರಂಗಸ್ವಾಮಿ ಅವರು ಪ್ರೌಢಶಾಲಾ ಶಿಕ್ಷಣ ಪಡೆದಿದ್ದಾರೆ. ಹಾಡುಗಾರಿಕೆ ಸಂಗೀತ ವಿದ್ವಾಂಸ ಪದವೀಧರರು. ಇವರ ತಂದೆ ಹನುಮಂತಪ್ಪ ಸಂಗೀತ ಕಲಾವಿದರಾಗಿದ್ದು ಮಗನಿಗೆ ಮೊದಲು ಇವರೇ ಗುರುಗಳು. ನಂತರ ವಿದ್ವಾನ್ ಎಂ. ನಾಗರಾಜು, ಎಂ. ರಾಮಸ್ವಾಮಿ ಹಾಗೂ ಹೆಚ್. ಎನ್. ನಾರಾಯಣಪ್ಪನವರ ಮಾರ್ಗದರ್ಶನದಲ್ಲಿ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತರು. ಯಕ್ಷಗಾನ ಹಾಡುಗಾರಿಕೆ, ಭಜನಾ ನೃತ್ಯ ನಿರ್ದೇಶನ, ಜನಪದ ಸಂಗೀತ ಸಂಯೋಜನೆ, ಹಾಡುಗಾರಿಕೆ ಇವರ ವಿಶೇಷ. ಹಾಗಾಗಿ ಚಿತ್ರದುರ್ಗ, ಹಿರಿಯೂರು ಸಿರಾ, ಹೊಸದುರ್ಗ, ಹೊಳಲ್ಕೆರೆ, ಚಳ್ಳಕೆರೆ, ಮಡಕಶಿರಾ ಭಾಗದಲ್ಲಿ ಹೆಸರುವಾಸಿ ಕಲಾವಿದರಾಗಿದ್ದಾರೆ.

ಪಂಡರಾಪುರಿ ಭಜನೆ, ಶಿವಭಜನೆ, ತತ್ವಪದ, ಸೋಬಾನೆಪದ, ಕೋಲುಪದ, ಕುಟ್ಟುವ–ಬೀಸುವ ಪದಗಳನ್ನು ಹಾಡುವುದು ಇವರ ವಿಶೇಷವಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಲಿತಕಲಾ ಶಿಕ್ಷಕರಾಗಿಯೂ ಕಾರ್ಯನಿರ್ವಹಣೆ. ಹಲವು ಒತ್ತಡ, ತಿರುಗಾಟ, ಕಾರ್ಯಕ್ರಮ ನೀಡಿಕೆಯ ಮಧ್ಯೆಯೂ ಹಲವು ಅತ್ಯುತ್ತಮ ಕಲಾಶಿಕ್ಷಕರನ್ನು ರೂಪಿಸಿದ ಹಿರಿಮೆ ಶ್ರೀ ರಂಸ್ವಾಮಯ್ಯ ಅವರಿಗೆ ಸಲ್ಲುತ್ತದೆ. ಕರ್ನಾಟಕ ಸಂಗೀತ,

ಜನಪದ ಗಾಯನ, ನೃತ್ಯ ರೂಪಕಗಳಲ್ಲಿ ವಿಶೇಷ ಪರಿಣತಿ ಹೊಂದಿರುವ ಇವರು ಕರ್ನಾಟಕದ ಹಲವು ಪ್ರತಿಷ್ಠಿತ ಸಭೆ, ಸಮಾರಂಭಗಳಲ್ಲಿ ಕಾರ್ಯಕ್ರಮ, ಜನಪದ ಸಂಗೀತ ನೀಡಿದ್ದಾರೆ. ಚಿತ್ರದುರ್ಗ ತಾಲ್ಲೂಕು ಆಡಳಿತ, ಹೊಸದುರ್ಗ ಕಸಾಪ, ಶಿಕ್ಷಣ ಇಲಾಖೆ ಇವರನ್ನು ಗೌರವಿಸಿರುವುದಲ್ಲದೆ ಕರ್ನಾಟಕದ ಹಲವು ಸಾಂಸ್ಕೃತಿಕ ಸಮಾರಂಭಗಳಲ್ಲಿ ಸತ್ಕರಿಸಲಾಗಿದೆ. ಒಬ್ಬರು ಮಗ (ರಾಘವೇಂದ್ರ ಹೆಚ್. ಆರ್.) ಮಗಳು (ಹೆಚ್. ಆರ್. ಲತಾಶ್ರೀ) ಹೊಂದಿರುವ ಇವರು ಮಡದಿ ಎಸ್. ಶಶಿಕಲಾ ಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದಾರೆ. ರಂಗಸ್ವಾಮಯ್ಯನವರು ಮೃದಂಗ, ಹಾರ್ಮೋನಿಯಂ, ವೀಣೆ, ಕೀಬೋರ್ಡ್ ವಾದ್ಯ ನುಡಿಸುವುದರಲ್ಲಿಯೂ ಪರಿಣಿತರು.

## ಭಾಗವತ ನಾಗಪ್ಪ

ಶ್ರೀ ನಾಗಪ್ಪನವರು ತೊಂಬತ್ತು ವರ್ಷಗಳ ತುಂಬು ಬದುಕಿನ, ಯಕ್ಷಗಾನ ಭಾಗವತರು. ಚಿತ್ರದುರ್ಗ ಸಮೀಪದ ಆಯತೋಡು ಗ್ರಾಮದವರು. ಕಾಡುಗೊಲ್ಲರ ಸಾಂಸ್ಕೃತಿಕ ಬದುಕಿನ ರೂವಾರಿಯಂತಿರುವ ನಾಗಪ್ಪನವರು ಕೋಲಾಟ, ಯಕ್ಷಗಾನ, ಜನಪದ ಸಂಗೀತ ಕಲಾವಿದರು. ಶ್ರೀಮತಿ ಕರಿಯಮ್ಮ ಇವರ ಮಡದಿ. ಇವರಿಗೆ ಜನಿಸಿದ ಐವರು ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳಲ್ಲಿ ಎಲ್ಲರೂ ಒಂದಲ್ಲ ಒಂದು ವಿಧದ ಕಲಾವಿದರೆ. ಕರಿಯಪ್ಪ, ಚಂದ್ರಪ್ಪ, ವಿರೂಪಾಕ್ಷಪ್ಪ, ಗೋವಿಂದಪ್ಪ, ಪಾಂಡುರಂಗಪ್ಪ ಗಂಡುಮಕ್ಕಳಾದರೆ ರುಕ್ಮಿಣಮ್ಮ ಹೆಣ್ಣುಮಗಳು. ರುಕ್ಮಿಣಮ್ಮ ಜಾನಪದ ಸಂಗೀತ ಕಲಾವಿದೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರರನ್ನು ಕುರಿತು ಕಥನಗೀಗೆ ಹಾಡುವುದಲ್ಲದೆ ಬಿಡಿ ಬಿಡಿ ಗೀತೆಗಳನ್ನು ಹಾಡುತ್ತಾರೆ. ಇವರನ್ನು ಪಂಡ್ರಹಳ್ಳಿಗೆ ನಿಂಗಪ್ಪ ಎಂಬುವರಿಗೆ ಕೊಟ್ಟು ವಿವಾಹ ಮಾಡಲಾಗಿದೆ.

ಇವರೊಂದಿಗೆ ಕಾಡುಗೊಲ್ಲರ ಸಿದ್ದಮ್ಮ ಎಂಬುವರೊಂದಿಗೆ ಹಬ್ಬ, ದೇವರ ಉತ್ಸವ, ಕಾಡುಗೊಲ್ಲರ ಸಾಂಪ್ರದಾಯಿಕ ಸಮಾರಂಭಗಳಲ್ಲಿ ಹಾಡುವುದು ಇವರ ವಾಡಿಕೆಯಾಗಿದೆ. ಪಟೇಲ್ ನಾಗಪ್ಪ ಹಿರಿಯ ಯಕ್ಷಗಾನ ಭಾಗವತರು. ಕಳೆದ ೫೦ ವರ್ಷಕ್ಕಿಂತಲೂ ಹಿಂದಿನಿಂದಲೂ ಯಕ್ಷಗಾನ ಕಲಿಸುತ್ತಾ ಬಯಲುಕಥೆ, ಬಯಲಾಟ ಎಂಬ ಹೆಸರಲ್ಲಿ ಪ್ರದರ್ಶನ ನೀಡುತ್ತಾ ಬಂದರು. ಚಿತ್ರದುರ್ಗ, ಹಿರಿಯೂರು, ದಾವಣಗೆರೆ, ಸಿರಿಗೆರೆ ಈ ಮೊದಲಾದ ಸ್ಥಳಗಳಲ್ಲಿ ಯಕ್ಷಗಾನವನ್ನು ಕಲಿತಿದ್ದಾರೆ.

ಲವಕುಶರ ಕಾಳಗ, ಭಕ್ತ ಸುಧನ್ವ, ದೇವಿ ಮಹಾತ್ರೆ, ಆದಿಶಕ್ತಿ, ದುಶ್ಯಾಸನ ಕಾಳಗ, ಪಾಂಡವರ ವನವಾಸ, ಕರಿಭಂಟ ಇವರು ಕಲಿಸಿರುವ ಪ್ರಮುಖ ಯಕ್ಷಗಾನ ಪ್ರಸಂಗಗಳು. ಕೋಲಾಟ, ಪಾಂಡುಗಂಗ ಭಜನೆ, ಚಿತ್ರದೇವರ ಕಥೆಗಳನ್ನು ಹೇಳುವುದು

ಇವರ ಕೆಲಸವಾಗಿದೆ. ಇವರ ಮಗ ಚಂದ್ರಪ್ಪ ಯಕ್ಷಗಾನದಲ್ಲಿ ಪರಿಣಿತಿ ಪಡೆದ ಪ್ರಸಿದ್ಧ ಕಲಾವಿದರು.

ಮೊದಲು ಅಪ್ಪನೊಂದಿಗೆ ಬಾಲಕ ಪಾತ್ರಗಳಲ್ಲಿ ಅಭಿನಯ, ಬಾಲಗೋಪಾಲ, ಕೃಷ್ಣ, ವಿನಾಯಕ, ಶಾರದೆ, ಲವ, ಸೀತೆ ಈ ಪಾತ್ರಗಳಲ್ಲಿ ಅಭಿನಯಿಸುತ್ತಾ ಮುಂದೆ ರಾಮ, ಅರ್ಜುನ, ಕರ್ಣ ಈ ಪಾತ್ರಗಳಲ್ಲಿ ಅಭಿನಯ ನೀಡತೊಡಗಿದರು. ತಂದೆ ನಾಗಪ್ಪ ಸ್ವತಃ ಗುರು ಆಗಿದ್ದರು. ಇವರ ಭಾಗವಂತಿಕೆಗೆ ಯಕ್ಷಗಾನ ಪ್ರಸಂಗಗಳಿಗೆ ಹಿಮ್ಮೇಳ ಭಾಗವತರಾಗಿ ಕಳೆದ ೨೦ ವರ್ಷಗಳಿಂದಲೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಸ್ವತಃ ಭಾಗವತರಾಗಿ ಹಲವಾರು ಯಕ್ಷಗಾನ ಪ್ರಸಂಗಗಳನ್ನು ನಿರ್ದೇಶಿಸಿದ್ದಾರೆ. ತಂದೆ ನಾಗಪ್ಪನವರ ಭಾಗವಂತಿಕೆಯ ಸಮರ್ಥ ಮುಂದುವರಿಕೆಯನ್ನು ಅರ್ಥಪೂರ್ಣವಾಗಿ ಮಾಡುತ್ತಿರುವುದು ವಿಶೇಷವಾಗಿದೆ.

ಇವರ ಮತ್ತೊಬ್ಬ ಮಗ ವಿರೂಪಾಕ್ಷಪ್ಪನವರು ಉತ್ತಮ ಕಲಾವಿದರು. ಕೋಲುಮೇಳದ ಸಂಘಟಕರು. ಜನಪದ ನೃತ್ಯ, ಭಜನಾ ಕಲೆಯನ್ನು ಹಲವು ಕಡೆ ಪ್ರದರ್ಶಿಸಿದ್ದಾರೆ.

ನಾಗಪ್ಪನವರು ಇಂದು ಅನುಕೂಲ ಸ್ಥಿತಿಯಲ್ಲಿದ್ದಾರೆ. ತಮ್ಮ ಅನಾನುಕೂಲದ ದಿನಗಳಲ್ಲಿ ಜನಪದ ಕಲೆ, ಕಲಾವಿದರ ಸಂಘಟನೆಗೆ ತೊಡಗಿಸಿಕೊಂಡ ಇವರ ಸಾಧನೆ ದೊಡ್ಡದು.

ಭಾ. ನಾಗಪ್ಪ,
ಆಯತೋಡು, ಚಿತ್ರದುರ್ಗ ತಾಲೂಕು.

## ಮಾಹಿತಿ ನೀಡಿದವರು :

೧. ಶ್ರೀಮತಿ ಬೋವಿ ಜಯಮ್ಮ,
ಸದಸ್ಯರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಚಿತ್ರದುರ್ಗ.

೨. ಶ್ರೀ ಡಿ. ಮುರಳೀಧರ, ಸಂಶೋಧನಾ ವಿದ್ಯಾರ್ಥಿ,
ಬಿನ್ ವಕೀಲ ದಾಸಪ್ಪ, ಚಿತ್ರದುರ್ಗ.

೩. ಶ್ರೀ ಸಕ್ಕರ ನಾಗರಾಜ್, ಸಾಹಿತಿ, ಹಿರಿಯೂರು ತಾಲ್ಲೂಕು

೪. ಶ್ರೀ ಇಕ್ಕನೂರು ನಿಜಲಿಂಗಪ್ಪ, ಹಿರಿಯೂರು ತಾಲ್ಲೂಕು

೫. ಶ್ರೀ ಕೆಂಡದಮಠ, ಆಕಾಶವಾಣಿ, ಚಿತ್ರದುರ್ಗ

೬. ಶ್ರೀ ಕೆ. ವೆಂಕಣ್ಣಾಚಾರ್,
ನಿವೃತ್ತ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿತ್ರದುರ್ಗ

೭. ಪ್ರೊ. ಈಶ್ವರಯ್ಯ, ಪ್ರಾಧ್ಯಾಪಕರು, ಸಿರಿಗೆರೆ ಕಾಲೇಜು, ಸಿರಿಗೆರೆ

೮. ಶ್ರೀ ಖಡ್ಗದ ಶಿವಪ್ಪ, ಕಲಾವಿದರು, ಚಿತ್ರದುರ್ಗ

೯. ಶ್ರೀ ಕಲಮರಹಳ್ಳಿ ಕೃಷ್ಣಪ್ಪ, ಶಿರಾ ಗೇಟ್, ತುಮಕೂರು

೧೦. ಶ್ರೀ ಹನುಮಂತಪ್ಪ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾ

೧೧. ಶ್ರೀ ಗೌಡ್ನಳ್ಳಿ ರಾಮಚಂದ್ರ, ತುಮಕೂರು

೧೨. ಡಾ|| ಮಂಜುನಾಥ್, ದಂತವೈದ್ಯಾಧಿಕಾರಿ, ಸಮುದಾಯ ಆಸ್ಪತ್ರೆ, ಶಿರಾ

೧೩. ಶ್ರೀ ಕೋಟೆಮನೆ ಈರಣ್ಣ, ಕೋಡಿಹಳ್ಳಿ, ಹಿರಿಯೂರು ತಾಲ್ಲುಕು

೧೪. ಡಾ|| ಹೆಚ್. ಪಿ. ರುದ್ರಣ್ಣ, ಹರ್ತಿಕೋಟೆ, ಹಿರಿಯೂರು ತಾಲ್ಲೂಕು

೧೫. ಪ್ರೊ. ಕಲಮರಹಳ್ಳಿ ಮಲ್ಲಿಕಾರ್ಜುನ, ಪ್ರಾಧ್ಯಾಪಕರು, ದಾವಣಗೆರೆ


೧೬. ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಕನಕಪೀಠ, ಹೊಸದುರ್ಗ

೧೭. ಶ್ರೀ ಹರ್ತಿಕೋಟೆ ರುದ್ರಣ್ಣ, ಪತ್ರಕರ್ತರು, ಬೆಂಗಳೂರು

೧೮. ಮಹಾಲಿಂಗಯ್ಯ, ಸಂಶೋಧನಾ ವಿದ್ಯಾರ್ಥಿ, ಜವಗೊಂಡನಹಳ್ಳಿ

೧೯. ಶ್ರೀ ಮದಕರಿ, ಬಗ್ಗನಡು, ಹಿರಿಯೂರು ತಾಲ್ಲೂಕು

೨೦. ಶ್ರೀ ಲಕ್ಷ್ಮಣ, ಯಕ್ಷಗಾನ ಭಾಗವತ, ಗೌಡ್ನಳಿ



ಅಕಾಡೆಮಿ ತನ್ನ ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ದಾಟಿಬಂದು, ಬೆಳ್ಳಿಹಬ್ಬವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಲ್ಲಿಯವರೆಗೆ ಜಾನಪದ ಕ್ಷೇತ್ರದ ಸಿದ್ಧಿ-ಸಾಧನೆಗಳನ್ನು, ಅಧ್ಯಯನದ ಮೂಲಕ ದುಡಿದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಟ್ಟ ವಿದ್ವಾಂಸರನ್ನು ಪರಿಚಯಿಸುವ "ಜಾನಪದ ತಲೆಮಾರು" ಹೊತ್ತಿಗೆಯ ನಾಲ್ಕು ಸಂಪುಟಗಳು ಬಂದಿರುವುದು ಸ್ತುತ್ಯ ಕಾರ್ಯವೇ ಸರಿ.

ಅದೇ ಪ್ರಕಾರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ ಜಾನಪದದ ವಿವಿಧ ಕಲಾವಿದರ ಪರಿಚಯವನ್ನು ದಾಖಲಿಸಬೇಕೆಂಬುದು ನನ್ನ ಹಂಬಲ. ಜಾನಪದ ಕಲಾಪ್ರಕಾರಗಳ ವೈವಿಧ್ಯಗಳನ್ನು ಸಹೃದಯರ ಕಣ್ಣು, ಕಿವಿ, ಮನಸ್ಸುಗಳಿಗೆ ಪ್ರತ್ಯಕ್ಷ ಬಣ್ಣಿಸುವ ಕಲಾವಿದರೂ ಅಷ್ಟೇ ಮುಖ್ಯರಾಗುತ್ತಾರೆ. ವಿದ್ವಾಂಸರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲ ಸೆಲೆಯಾಗುವ ಇಂಥ ಕಲಾವಿದರು ಅನೇಕ ಸಲ ಪ್ರಶಸ್ತಿ, ಪುರಸ್ಕಾರ, ಗೌರವ, ಅವಕಾಶಗಳಿಂದ ವಂಚಿತರಾಗುತ್ತಾರೆ. ಇಂಥ ಕಲಾವಿದರ ಪರಿಚಯ, ವಿವರಗಳ ಸಂಗ್ರಹವಾದರೂ ಅಕಾಡೆಮಿಯಲ್ಲಿ ಲಭ್ಯವಾಗುವಂತಿದ್ದರೆ, ಅಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಉದ್ದೇಶ.


ಕೆರೆಮನೆ ಶಂಭು ಹೆಗಡೆ
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು